

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 4 ಗುರುವಾರ 2023

ಸಂಪುಟ: 44 | ಸಂಚಿಕೆ: 18 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 85.96ಕ್ಕೆ ಕುಸಿತ

● ಜಲಾಶಯದ ಗರಿಷ್ಠ ಮಟ್ಟ 124.80 ಅಡಿ ● ಜೂನ್ ಅಂತ್ಯದವರೆಗೆ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ : ಕಾವೇರಿ ನೀರಾವರಿ ನಿಗಮ ಅಭಯ

ಮೈಸೂರು, ಮೇ 3(ಆರ್‌ಕೆ)– ಮೈಸೂರು ಜಿಲ್ಲೆಯಲ್ಲಿ ಬೇಸಿಗೆ ಬಿರುಬಿಸಿಲಿನ ತಾಪಮಾನ 36.5 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಕೆರೆ–ಕಟ್ಟೆ, ಹೊಳೆ ನೀರಿನ ಹರಿವು ಮತ್ತು ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡುಬರುತ್ತಿದೆ. ಅಲ್ಲದೆ ಹರಿವಿನ ಪ್ರಮಾಣ ತೀವ್ರ ಕುಸಿದಿರುವುದರಿಂದ ಜಲಾಶಯಗಳ ನೀರಿನ ಮಟ್ಟವು ತೀವ್ರವಾಗಿ ಕುಸಿಯುತ್ತಿದೆ.

ಮೈಸೂರು, ಮಂಡ್ಯ ಹಾಗೂ ಬೆಂಗಳೂರು ಜಿಲ್ಲೆಗಳಿಗೆ ಕೃಷಿ ಮತ್ತು ಕುಡಿಯುವ ನೀರಿನ ಪ್ರಮುಖ ಜಲಸೆಲೆಯಾದ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ ಜಲಾಶಯದಲ್ಲಿ ನೀರಿನ ಮಟ್ಟ ದಿನೇ ದಿನೆ ಕುಸಿಯುತ್ತಿದೆ. ಅಣೆಕಟ್ಟೆಯಲ್ಲಿ ಇಂದು 85.96 ಅಡಿ ನೀರು ಸಂಗ್ರಹವಿದೆ. 124.80 ಅಡಿ ಗರಿಷ್ಠ ನೀರು ಸಂಗ್ರಹವಾಗುವ ಜಲಾಶಯದಲ್ಲಿ ಕಳೆದ ವರ್ಷ ಇದೇ ದಿನ 99.57 ಅಡಿ ನೀರಿತ್ತು.

ದಿನದಿಂದ ದಿನಕ್ಕೆ ಬೇಸಿಗೆಯ ಬಿಸಿಲು ಏರುತ್ತಿದೆ. ಇದರಿಂದ ನೀರು ಆವಿಯಾಗುವ ಪ್ರಮಾಣವೂ ಹೆಚ್ಚಿದೆ. ಮಂಡ್ಯ ಜಿಲ್ಲೆಯ



ಕೃಷಿ ಭೂಮಿಯಲ್ಲಿ ಬೆಳೆದು ನಿಂತಿರುವ ಕಬ್ಬು, ಭತ್ತ, ರಾಗಿ ಬೆಳೆಗೆ ವಿಶ್ವೇಶ್ವರಯ್ಯ ನಾಲೆ ಮೂಲಕ ಕಟ್ಟು ನೀರು ಬಿಡುತ್ತಿರುವುದು ನೀರಿನ ಮಟ್ಟ ಇಳಿಮುಖವಾಗಲು ಪ್ರಮುಖ ಕಾರಣವಾಗಿದೆ.

ಪ್ರಸ್ತುತ ಲಭ್ಯವಿರುವ ನೀರನ್ನು ಜೂನ್ ಅಂತ್ಯದವರೆಗೆ ಮಂಡ್ಯ, ಮೈಸೂರು ಹಾಗೂ ಬೆಂಗಳೂರು ಜಿಲ್ಲೆಗಳಿಗೆ ಪೂರೈಸಬಹುದಾಗಿದೆ. ಸಾಮಾನ್ಯವಾಗಿ ಮೇ ಅಂತ್ಯದಲ್ಲೆಲ್ಲಾ ಮುಂಗಾರು ಆರಂಭವಾಗುತ್ತದೆ. ಜೂನ್ ತಿಂಗಳಲ್ಲಿ ಮಳೆ ಬಿದ್ದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುವುದಿಲ್ಲ. ಒಂದು ವೇಳೆ ಮಳೆ ಬಾರದಿದ್ದಲ್ಲಿ ಮಾತ್ರ ನೀರಿಗೆ ಹಾಹಾಕಾರ ಉಂಟಾಗಲಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. 2023ರ ಏಪ್ರಿಲ್ 1 ರಿಂದ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಇಳಿಮುಖವಾಗುತ್ತಿದೆ. ಪ್ರಸಕ್ತ ವರ್ಷಕ್ಕೆ ಹೋಲಿಸಿದರೆ ಕಳೆದ ವರ್ಷ ನೀರಿನ ಮಟ್ಟ ಸಾಕಷ್ಟಿತ್ತು. ಮೇ ಮೊದಲ ವಾರ ಜಲಾಶಯದಲ್ಲಿ 99 ಅಡಿ ನೀರಿನ ಸಂಗ್ರಹವಿತ್ತು. 2022ರ ಮಾರ್ಚ್ ತಿಂಗಳಲ್ಲಿ ಕೊಡಗು ಜಲಾನಯನ ಪ್ರದೇಶದಲ್ಲಿ ಅತೀ ಹೆಚ್ಚು ಮಳೆಯಾಗಿದ್ದರಿಂದ ಜಲಾಶಯಕ್ಕೆ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿತ್ತು. ಆದರೆ ಈ ವರ್ಷ ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಮಳೆಯಾಗದ ಕಾರಣ ಒಳಹರಿವಿಲ್ಲದಿರುವುದರಿಂದ ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣವೂ ಕಡಿಮೆಯಾಗುತ್ತಿದೆ. 2023ರ ಮಾರ್ಚ್ ತಿಂಗಳಲ್ಲಿ ಜಲಾಶಯದ ನೀರಿನ ಮಟ್ಟ ಗಣನೀಯವಾಗಿ ಕಡಿಮೆಯಾಗಿದ್ದು, ಅತೀ ಕಡಿಮೆ 139 ಕ್ಯೂಸೆಕ್ ಒಳಹರಿವು ದಾಖಲಾಗಿದೆ. ಸಾಮಾನ್ಯವಾಗಿ ಬೇಸಿಗೆ ಸಮಯದಲ್ಲೂ ● 9ನೇ ಪುಟಕ್ಕೆ

ಕೆಆರ್‌ಎಸ್ ಜಲಾಶಯ
ಏಪ್ರಿಲ್–ಮೇ ನಡುವಿನ ನೀರಿನ ಮಟ್ಟ

ದಿನಾಂಕ	ನೀರಿನ ಮಟ್ಟ
1.4.2023	96.55 ಅಡಿ
4.4.2023	95.66 ಅಡಿ
6.4.2023	94.94 ಅಡಿ
8.4.2023	94.14 ಅಡಿ
10.4.2023	93.92 ಅಡಿ
15.5.2023	93.54 ಅಡಿ
18.4.2023	93.15 ಅಡಿ
19.4.2023	92.47 ಅಡಿ
21.4.2023	91.66 ಅಡಿ
23.4.2023	90.29 ಅಡಿ
25.4.2023	89.20 ಅಡಿ
27.4.2023	88.48 ಅಡಿ
29.4.2023	87.30 ಅಡಿ
1.5.2023	86.64 ಅಡಿ
2.5.2023	86.24 ಅಡಿ
3.5.2023	85.96 ಅಡಿ



ಬಿಜೆಪಿ ಪುನಃ ಅಧಿಕಾರಕ್ಕೆ ಬಂದರೆ
ಮುಖ್ಯಮಂತ್ರಿ ರೇಸ್‌ನಲ್ಲಿ ಸೋಮಣ್ಣ!

ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ತೀವ್ರ ಉತ್ಸುಕತೆ

ಬೆಂಗಳೂರು, ಮೇ 3(ಕೆಎಂಶಿ)– ಕರ್ನಾಟಕದಲ್ಲಿ ಬಿಜೆಪಿ ಮರಳಿ ಅಧಿಕಾರಕ್ಕೆ ಬಂದರೆ ಬಸವರಾಜ ಬೊಮ್ಮಾಯಿ ಅವರ ಜತೆ ವಿ.ಸೋಮಣ್ಣ ಸಹ ಮುಖ್ಯಮಂತ್ರಿ ಹುದ್ದೆಯ ರೇಸಿಗೆ ಬಂದಿದ್ದಾರೆ.

ವರುಣ ಮತ್ತು ಚಾಮರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಿ.ಸೋಮಣ್ಣ ಅವರನ್ನು ಭವಿಷ್ಯದ ಮುಖ್ಯಮಂತ್ರಿ ಹುದ್ದೆಗೆ ತರಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಉತ್ಸುಕರಾಗಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮಾಜಿ ಮುಖ್ಯಮಂತ್ರಿ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ವರುಣ ಕ್ಷೇತ್ರದಲ್ಲಿ ಮಣಿಸಲು ವಿ.ಸೋಮಣ್ಣ ಅವರಿಗೆ ಹೊಣೆಗಾರಿಕೆ ನೀಡಲಾಗಿದ್ದು, ಇದರಲ್ಲಿ ಯಶಸ್ವಿ ಕಂಡರೆ ಅವರನ್ನು ಪಕ್ಷ ದೊಡ್ಡ ಮಟ್ಟಕ್ಕೆ ಕೊಂಡೊಯ್ಯಲು ನಿರ್ಧರಿಸಿದೆ.



ಸೋಮಣ್ಣ ತಮಗೆ ನೀಡಿರುವ ಗುರಿಯನ್ನು ಮುಟ್ಟಲು ಶ್ರಮಿಸುತ್ತಿರುವ ರೀತಿ ಅಮಿತ್ ಶಾ ಮತ್ತು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಮೆಚ್ಚುಗೆಗೆ ಕಾರಣವಾಗಿದೆ. ಪ್ರಧಾನಿ ಹಾಗೂ ಬಿಜೆಪಿಯನ್ನು ಅತ್ಯಂತ ಕಟುವಾಗಿ ಟೀಕಿಸುವ ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಲು ರಾಷ್ಟ್ರದ ಈ ಇಬ್ಬರೂ ನಾಯಕರು ಪಣತೊಟ್ಟಿದ್ದಾರೆ. ವರುಣ ಕ್ಷೇತ್ರದಲ್ಲಿ ಫಲಿತಾಂಶ ಏನೇ ಆಗಬಹುದು ಆದರೆ ತಮ್ಮ ಪಕ್ಷದ ಅಭ್ಯರ್ಥಿಗೆ ಬೆನ್ನೆಲುಬಾಗಿ ನಿಂತಿರುವುದಲ್ಲದೆ, ಅವರ ಗೆಲುವಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿದ್ದಾರೆ.



ಪಕ್ಷದ ಮಾತಿಗೆ ಮಣಿದು, ಕಣಕ್ಕಿಳಿದಿರುವ ಸೋಮಣ್ಣ ಅವರನ್ನು ತಾವು ಒಂಟಿ ಎಂಬ ಭಾವನೆ ಅವರಲ್ಲಿ ಎಲ್ಲಿಯೂ ಬರದಂತೆ ಹಾಗೂ ಲಿಂಗಾಯತ ಸಮುದಾಯದ ಮತಗಟ್ಟೆಗಳನ್ನು ಭರ್ತಿ ಮಾಡಿಕೊಳ್ಳಲು ಅವರನ್ನು ಹಳೇ ಮೈಸೂರು ಭಾಗದಲ್ಲಿ ನಾಯಕನನ್ನಾಗಿ ಮಾಡಲು ಸಂತೋಷ್ ಹೊರಟಿದ್ದಾರೆ. ● 9ನೇ ಪುಟಕ್ಕೆ

ಬಿಜೆಪಿ ಸರ್ಕಾರದಿಂದ 1.5 ಲಕ್ಷ ಕೋಟಿ ಲೂಟಿ



ಇಂಡಿ(ವಿಜಯಪುರ): ಮೂರೂವರೆ ವರ್ಷಗಳ ಆಡಳಿತಾವಧಿಯಲ್ಲಿ ರಾಜ್ಯ ಬಿಜೆಪಿ ಸರ್ಕಾರ ರೂ. 1.5 ಲಕ್ಷ ಕೋಟಿ ಹಣವನ್ನು ಲೂಟಿ ಮಾಡಿದೆ. ರಾಜ್ಯವನ್ನು ಲೂಟಿ ಮಾಡುವುದನ್ನು ಬಿಟ್ಟರೆ ಬೇರಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಆರೋಪಿಸಿದರು.

ಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಬಹಿರಂಗ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 40 ಪರ್ಸೆಂಟ್ ಸರ್ಕಾರ ಎನ್ನುವ ಹಣೆಪಟ್ಟಿ ಕಟ್ಟಿಕೊಂಡು ದೇಶದಲ್ಲಿ ಕರ್ನಾಟಕದ ಹೆಸರು ಹಾಳು ಮಾಡುವ ಕೆಲಸ ಬಿಜೆಪಿ ಸರ್ಕಾರ ಮಾಡಿದೆ. ಬಿಜೆಪಿ ಲೂಟಿ ಮಾಡಿರುವ ಹಣದಲ್ಲಿ ರಾಜ್ಯದಲ್ಲಿ 100 ಏಮ್ಸ್ ಆಸ್ಪತ್ರೆ, 30 ಲಕ್ಷ ಸ್ಮಾರ್ಟ್ ಕ್ಲಾಸ್ ರೂಂ, 30 ಲಕ್ಷ ಮನೆಗಳನ್ನು ನಿರ್ಮಾಣ ಮಾಡಬಹುದಾಗಿತ್ತು ಎಂದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ 40 ಪರ್ಸೆಂಟ್ ಕಮಿಷನ್ ಹೊಡೆದುಕೊಳ್ಳುತ್ತಿದ್ದಾಗ ಸರ್ವಶಕ್ತ, ಸರ್ವ ಶಕ್ತಿಮಾನ್, ಸರ್ವಾಂತರ್ಯಾಮಿ ಮೋದಿ ಅವರು ತಡೆಯಲಿಲ್ಲ, ಅವರು ಕೇವಲ ಕಣ್ಮುಚ್ಚಿ ಕರ್ನಾಟಕದ ವಿಕಾಸದ ಕನಸು ಕಾಣುತ್ತಿದ್ದರು ಎಂದು ಲೇವಡಿ ಮಾಡಿದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದಿದ್ದೆ ವಾಮ ಮಾರ್ಗದಿಂದ, ಕಾಂಗ್ರೆಸ್‌ನ ಶಾಸಕರಿಗೆ ಹಣದ ಆಮಿಷ ಒಡ್ಡುವ ಮೂಲಕ ಆಪರೇಷನ್ ಕಮಲದ ಹೆಸರಿನಲ್ಲಿ ಸರ್ಕಾರ ರಚನೆ ಮಾಡಿ, ರಾಜ್ಯವನ್ನು ಲೂಟಿ ಮಾಡುವ ಕೆಲಸ ಬಿಜೆಪಿ ಸರ್ಕಾರ ಮಾಡಿದೆ ಎಂದರು. ಚುನಾವಣೆ ಸಂದರ್ಭದಲ್ಲಿ ಭಾವನಾತ್ಮಕವಾಗಿ ಧರ್ಮದ ಮಾತು ಆಡಿದರೆ ಸಾಕು ತಾವು ಗೆಲ್ಲಬಹುದು ಎಂಬ ಮನೋಭಾವ ಬಿಜೆಪಿಗರಲ್ಲಿ ಅಧಿಕವಾಗಿದೆ. ಈ ಸಂಗತಿ ಗೊತ್ತಿರುವ ಅನೇಕ ಬಿಜೆಪಿ ನಾಯಕರು ಅಭಿವೃದ್ಧಿ ಮಾಡುವುದನ್ನೇ ಮರೆತಿದ್ದಾರೆ ಎಂದು ಪ್ರಿಯಾಂಕಾ ದೂರಿದರು. ● 9ನೇ ಪುಟಕ್ಕೆ

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕ ನಾಶ ಗ್ಯಾರಂಟಿ

● ಪ್ರಧಾನಿ ಮೋದಿ ತೀವ್ರ ವಾಗ್ದಾಳಿ ● ನಕಲಿ ಫಲಾನುಭವಿಗಳ ಸೃಷ್ಟಿಸಿ ಲೂಟಿ ನಡೆಸುತ್ತಾ ಬಂದಿದೆ ● ರಾಜ್ಯದಲ್ಲಿ ಅತಂತ್ರ ಸರ್ಕಾರ ಬಂದರೆ ಜನರ ಜೀವನ ಅಸ್ಥಿರ ● ಭ್ರಷ್ಟಾಚಾರದ ರಸ್ತೆ ಬಂದ್ ಮಾಡಿದ್ದಕ್ಕೆ ಕಾಂಗ್ರೆಸ್‌ಗೆ ನನ್ನ ಮೇಲೆ ಕೋಪ

ಬೆಂಗಳೂರು, ಮೇ 3– ಆತಂಕವಾದಿಗಳನ್ನು ರಕ್ಷಿಸುವ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕ ನಾಶವಾಗುವುದು ಗ್ಯಾರಂಟಿ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಆಪಾದಿಸಿದರು.

ಕರ್ನಾಟಕದಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲೇಬೇಕೆಂದು ಪಣತೊಟ್ಟಿರುವ ಪ್ರಧಾನಿ ಮೋದಿ ಇಂದು ಉತ್ತರ ಕನ್ನಡದ ಅಂಕೋಲಾ, ಮುಲ್ಕಿ ಮುಂತಾದೆಡೆ ಅಬ್ಬರದ ಪ್ರಚಾರ ಮಾಡಿದರು. ಕಾಂಗ್ರೆಸ್ ಸರ್ಕಾರವಿರುವ ರಾಜಸ್ಥಾನದಲ್ಲಿ ವರ್ಷಗಳ ಹಿಂದೆ ಬಾಂಬ್ ಸ್ಫೋಟ ಸಂಭವಿಸಿತ್ತು. ಆ ಪ್ರಕರಣದ



ಎಲ್ಲಾ ಆರೋಪಿಗಳನ್ನು ಆರೋಪದಿಂದ ಮುಕ್ತಗೊಳಿಸಲಾಯಿತು. ಕಾಂಗ್ರೆಸ್ ಶಾಂತಿಯ ವಿರೋಧಿಯಾಗಿದ್ದು, ಆತಂಕವಾದಿಗಳ ರಕ್ಷಣೆಗೆ ನಿಲ್ಲುತ್ತದೆ ಎಂಬುದಕ್ಕೆ ಇದು ಉದಾಹರಣೆಯಾಗಿದೆ. ಕಾಂಗ್ರೆಸ್ ಸರ್ಕಾರ 4.20 ಕೋಟಿ ನಕಲಿ ಹೆಸರುಗಳಲ್ಲಿ ರೇಷನ್ ಮತ್ತು ಸ್ಕಾಲರ್‌ಶಿಪ್ ಕೊಡುತ್ತಿತ್ತು. ಎಲ್ಲಾ ಹಣ ಕಾಂಗ್ರೆಸ್ ನಾಯಕರ ಜೇಬಿಗೆ ಹೋಗುತ್ತಿತ್ತು. ಕಾಂಗ್ರೆಸ್ ಆಡಳಿತದಲ್ಲಿ ಕರ್ನಾಟಕ ಜನಸಂಖ್ಯೆಗಿಂತ ಹೆಚ್ಚಾಗಿ ನಕಲಿ ಫಲಾನುಭವಿಗಳ ಸಂಖ್ಯೆಯೇ ಇತ್ತು. ಕಾಂಗ್ರೆಸ್‌ನ ಭ್ರಷ್ಟಾಚಾರದ ರಸ್ತೆಯನ್ನು ಬಂದ್ ಮಾಡಿದ್ದರಿಂದ ಬಿಜೆಪಿ ಮತ್ತು ನನ್ನ ವಿರುದ್ಧ ಕಾಂಗ್ರೆಸ್ ಕಿಡಿಕಾರುತ್ತಿದೆ ಎಂದು ಆರೋಪಿಸಿದ ಆದಿವಾಸಿ ಮಹಿಳೆಯನ್ನು ರಾಷ್ಟ್ರಪತಿ ಮಾಡುವುದಕ್ಕೆ ● 9ನೇ ಪುಟಕ್ಕೆ




ಜನರ ಸೇವೆ ಮಾಡಿದ್ದೇನೆ. ಜನರೇ ಜನಾರ್ಧನರೆಂದು ನಂಬಿದ್ದೇನೆ. ನಂಬಿದ ಮತದಾರ ದೇವರು ಕೈಬಿಡರು ಎಂಬ ದೃಢ ಆತ್ಮವಿಶ್ವಾಸ ಶಾಸಕ ಜಿ.ಟಿ.ದೇವೇಗೌಡರಿಗೆ. ಹಾಗಾಗಿಯೇ ಬುಧವಾರ ತಮ್ಮೂರು ಗುಂಗ್ರಾಲ್ ಛತ್ರದಲ್ಲಿ ಮತಯಾಚನೆ ವೇಳೆ ಪೂರ್ಣಕುಂಭ, ವಾದ್ಯದೊಂದಿಗೆ ತಮ್ಮನ್ನು ಸ್ವಾಗತಿಸಿದ ಹುಟ್ಟೂರಿನ ಜನರ ಜೊತೆ ತಮಟೆ ಸದ್ದಿಗೆ ಕುಣಿದು ಕುಪ್ಪಳಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಮತ್ತೆ ಸಿಎಂ ಆಗಲು
ನರಸೀಪುರದಿಂದ ಗೆಲುವಿನ ಕೊಡುಗೆ ನೀಡಿ

ತಿ.ನರಸೀಪುರ ಜೆಡಿಎಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕರೆ

ತಿ.ನರಸೀಪುರ, ಮೇ 3– ತಿ.ನರಸೀಪುರ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿರುವ ಅಶ್ವಿನ್‌ಕುಮಾರ್ ಅವರನ್ನು ಅತೀ ಹೆಚ್ಚು ಬಹುಮತಗಳಿಂದ ಗೆಲ್ಲಿಸಿ ಕೊಡುವ ಮೂಲಕ ಮೇ 13ರಂದು ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಕ್ಷೇತ್ರದಿಂದ ಕೊಡುಗೆ ನೀಡಿ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಇಂದಿಲ್ಲಿ ಕರೆ ನೀಡಿದರು.


ಬನ್ನೂರು ಪಟ್ಟಣದ ಹಾಲಿನ ಡೈರಿ ಮುಂಭಾಗದ ಆವರಣದಲ್ಲಿ ಆಯೋಜಿಸಲಾಗಿದ್ದ ಜೆಡಿಎಸ್ ಪಕ್ಷದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು ಶಾಸಕ ಅಶ್ವಿನ್ ಕುಮಾರ್ ಪಕ್ಷದ ಶಿಸ್ತಿನ ಸಿಪಾಯಿ, ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿ, ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೇ ಪಕ್ಷಕ್ಕೆ ನಿಷ್ಠೆಯಿಂದ ದುಡಿದು ಜನಪ್ರಿಯತೆ ಗಳಿಸಿರುವ ಧೀಮಂತ ವ್ಯಕ್ತಿಯಾಗಿದ್ದು, ಕ್ಷೇತ್ರದ ಮತದಾರರು ಅವರನ್ನು ಅತೀ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಿ ಕೊಡಬೇಕು ಎಂದರು. ಶಾಸಕ ಅಶ್ವಿನ್ ಕುಮಾರ್ ಅವರಿಂದ ಯಾವುದೇ ಸವಲತ್ತು ಪಡೆಯದೇ ಸ್ವಯಂಪ್ರೇರಿತರಾಗಿ ಯೋಗ್ಯವಾದ ವ್ಯಕ್ತಿಯನ್ನು ಗೆಲ್ಲಿಸಬೇಕೆಂದು ಹಳ್ಳಿ ಹಳ್ಳಿಗಳಿಂದ ಬಂದಿರುವ ಬೃಹತ್ ಸಂಖ್ಯೆಯ



ತಿ.ನರಸೀಪುರ ಮೀಸಲು ವಿಧಾನಸಭಾ ಕ್ಷೇತ್ರದ ಬನ್ನೂರು ಪಟ್ಟಣದಲ್ಲಿ ಬುಧವಾರ ಆಯೋಜಿಸಲಾಗಿದ್ದ ಜೆಡಿಎಸ್ ಪಕ್ಷದ ಚುನಾವಣಾ ಪ್ರಚಾರ ಸಭೆಯನ್ನು ಮಾಜಿ ಪ್ರಧಾನಿ ದೇವೇಗೌಡರು ಉದ್ಘಾಟಿಸಿದರು. ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಶಾಸಕರೂ ಆದ ಪಕ್ಷದ ಅಭ್ಯರ್ಥಿ ಅಶ್ವಿನ್‌ಕುಮಾರ್, ಕ್ಷೇತ್ರದ ಜೆಡಿಎಸ್ ಹಿರಿಯ ಮುಖಂಡರು ಈ ವೇಳೆ ಉಪಸ್ಥಿತರಿದ್ದಾರೆ.

ಜನಸ್ತೋಮ ನೋಡಿದರೆ ತಿಳಿಯುತ್ತದೆ. ಅವರಲ್ಲಿರುವ ಪ್ರಾಮಾಣಿಕತೆ, ಪಕ್ಷಕ್ಕೆ ತೋರಿರುವ ಕಟಿಬದ್ಧತೆ, ಯಾವುದೇ ಆಮಿಷಕ್ಕೆ ಒಳಗಾಗದೇ ಕುಮಾರಸ್ವಾಮಿ ನೇತೃತ್ವದಲ್ಲಿ ದೇವೇಗೌಡರ ಪಕ್ಷದಲ್ಲೇ ಉಳಿಯುತ್ತೇನೆ. ಬದುಕಿರುವವರೆಗೂ ಇಲ್ಲೇ ಇರುತ್ತೇನೆ ಎಂದು ನಿಷ್ಠೆ ತೋರಿದ ವ್ಯಕ್ತಿಗೆ ಮತ್ತೊಂದು ಅವಕಾಶ ಮಾಡಿಕೊಡಬೇಕಿದೆ ಎಂದರು. ಮೈಸೂರಿನಲ್ಲಿ ಕಾವೇರಿ ನೀರಿನ ತೀರ್ಪಿನ ಕುರಿತಂತೆ ನಡೆದ ಸಭೆಯಲ್ಲಿ 3 ಲಕ್ಷ ಕ್ಕೂ ಹೆಚ್ಚಿನ ಜನ ಸೇರಿದ್ದರು. ಆ ಸಭೆಯಲ್ಲಿ ತಮಿಳಿಗರು ನಮಗೆ ಮಾಡುತ್ತಿರುವ ಅನ್ಯಾಯದ ಬಗ್ಗೆ, ನಮ್ಮ ನೀರನ್ನು ಕಸಿದು ಕೊಳ್ಳುತ್ತಿರುವ ಬಗ್ಗೆ ಠರಾವು ಪಾಸ್ ಮಾಡಿ ಆ ತೀರ್ಪು ರದ್ದಾಗುವಂತೆ ಮಾಡಿದ್ದು, ● 9ನೇ ಪುಟಕ್ಕೆ

ಇಡೀ ಹಿಂದೂಸ್ತಾನದಲ್ಲಿ ಕುಮಾರಸ್ವಾಮಿಯಂತಹ
ಮತ್ತೊಬ್ಬ ಸಿಎಂ ಇಲ್ಲ!



ರಾಮನಗರ, ಮೇ 3– ಇಡೀ ಹಿಂದೂಸ್ತಾನದಲ್ಲಿ ಕುಮಾರಸ್ವಾಮಿಯಂತಹ ಮತ್ತೊಬ್ಬ ಮುಖ್ಯಮಂತ್ರಿಯಿಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ತಿಳಿಸಿದರು. ಚನ್ನಪಟ್ಟಣದ ಶೇರು ಸರ್ಕಲ್ ಬಳಿ ಬಹಿರಂಗ ಸಭೆ ನಡೆಸಿ ಮಾತನಾಡಿದ ಅವರು, ಕುಮಾರಸ್ವಾಮಿ ಕಳೆದೆರಡು ದಿನಗಳಲ್ಲಿ ಹದಿನಾರು ಕ್ಷೇತ್ರಗಳಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಈ ದೇಶದಲ್ಲಿ ರೈತನಿಗೆ ಪಿಂಚಣಿ ಕೊಡುತ್ತೇನೆ ಎಂದು ಹೇಳುವ ವ್ಯಕ್ತಿ ಇದ್ದರೆ ಅದು ಕುಮಾರಸ್ವಾಮಿ. ನುಡಿದಂತೆ ನಡೆಯುವ ರಾಜಕಾರಣಿ ಯಾವನಾದರೂ ಇದ್ದರೆ ಅವರೇ ಕುಮಾರಸ್ವಾಮಿಯಾಗಿದ್ದಾರೆ. ಕಾಂಗ್ರೆಸ್ ನವರ ವ್ಯಂಗ್ಯದ ನಡುವೆ ಸಾಲ ಮನ್ನಾ ಮಾಡಿದರು. ಬಜೆಟ್ ಮೇಲಿನ ಚರ್ಚೆಯಲ್ಲಿ ಎರಡನೇ ಸಾಲಿನಲ್ಲಿ ಕುಳಿತ ಸಿದ್ದರಾಮಯ್ಯ ವ್ಯಂಗ್ಯ ಮಾಡಿ ಹೊರಗೆ ಹೋಗುತ್ತಾರೆ ಎಂದು ಹೇಳಿದರು. ಹಿಂದೂಸ್ತಾನದಲ್ಲಿ ಕಾಂಗ್ರೆಸ್‌ನ ಎಲ್ಲಾ ಕಾರ್ಯಕ್ರಮಗಳಿಗೆ ಹೂ ಕೊಟ್ಟು ಕುಮಾರಸ್ವಾಮಿ ಸಾಲ ಮನ್ನಾ ಮಾಡಿದ್ದರು. ಸಿದ್ದರಾಮಯ್ಯ 50 ಸಾವಿರ ಸಾಲಮನ್ನಾ ಮಾಡಿದ್ದರೂ 3,500 ಕೋಟಿ ರೂ. ಬಾಕಿ ಉಳಿದಿತ್ತು. ಅದರ ಜೊತೆಗೆ 26 ಸಾವಿರ ಕೋಟಿ ಸಾಲ ಮನ್ನಾ ಮಾಡಿದ್ದು ಹೆಚ್‌ಡಿಕೆ. ಇಡೀ ಹಿಂದೂಸ್ತಾನದಲ್ಲಿ ಕುಮಾರಸ್ವಾಮಿಯಂತಹ ಮತ್ತೊಬ್ಬ ಸಿಎಂ ಇಲ್ಲ. ಕಾಂಗ್ರೆಸ್ ಬಿಜೆಪಿಯವರು ನನ್ನ ಮುಂದೆ ನಿಂತು ಹೇಳಲಿ, ಇದು ನನ್ನ ಸವಾಲು. ಮಂಡ್ಯದಿಂದ ಸ್ಪರ್ಧೆಗೆ ಒತ್ತಡ ಬಂದರೂ ಚನ್ನಪಟ್ಟಣ ನನ್ನ ಕರ್ಮ ಭೂಮಿ ಅಂತ ನಿರಾಕರಿಸಿದರು.



ಮೈಸೂರಿನ ಮಂಡಿಮೊಹಲ್ಲಾದಲ್ಲಿ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಾಸಕ ಎಲ್.ನಾಗೇಂದ್ರ ಅವರು ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಮುಖಂಡರಾದ ಕೇಬಲ್ ವಿ.ಜಿ.ರಾಜು ವಿಠಲ್, ಹೇಮಾ, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಗಿರೀಶ್, ಸೂರಜ್ ಇತರರು ಉಪಸ್ಥಿತರಿದ್ದರು.

ನಾಡಿಗೆ ಶ್ರೀ ವಿದ್ಯಾಮಾನ್ಯರ ಕೊಡುಗೆ ದೊಡ್ಡದು

● ಪೇಜಾವರ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರಶಂಸೆ ● ಐವರು ವಿದ್ವಾಂಸರಿಗೆ ಪ್ರಶಸ್ತಿ ಪ್ರದಾನ

ಮೈಸೂರು: ನಾಡಿನ ಸನಾತನ ಧರ್ಮ, ವೇದಾಂತ ಮತ್ತು ಮಾಧ್ವ ತತ್ವ ಕ್ಷೇತ್ರಕ್ಕೆ ಶ್ರೀ ವಿದ್ಯಾಮಾನ್ಯತೀರ್ಥರ ಕೊಡುಗೆ ಅಪಾರ ಎಂದು ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಉಡುಪಿ ಭಂಡಾರಕೇರಿ ಮಠ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಶ್ರೀವೇದ ವ್ಯಾಸರ ರಾಷ್ಟ್ರೀಯ ಜಯಂತಿ, ಶ್ರೀವಿದ್ಯಾ ಮಾನ್ಯತೀರ್ಥರ ಆರಾಧನೋತ್ಸವದಲ್ಲಿ ನಾಡಿನ ಐವರು ವಿದ್ವಾಂಸರಿಗೆ ಪ್ರತಿಷ್ಠಿತ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ವಿದ್ಯಾಮಾನ್ಯತೀರ್ಥರ ಜೀವನ ಮತ್ತು ಸಾಧನೆ ಮಹತ್ತರವಾದದ್ದು. ಆಚಾರ್ಯ ಮಧ್ವರ ತತ್ವ ಮತ್ತು ಸಂದೇಶಗಳನ್ನು ಹೊಸ ಪೀಳಿಗೆಗೆ ತಲುಪಿಸುವಲ್ಲಿ ಅವರು ಅಹರ್ನಿಷಿ ಸೇವೆ ಮಾಡಿದ್ದಾರೆ. ಮಾತ್ರವಲ್ಲ, ಅವರು ಪೇಜಾವರ, ಪಲಿಮಾರು ಮತ್ತು ಭಂಡಾರಕೇರಿ ಮಠದ ಯುವ ಯತಿಗಳಿಗೆ ಪಾಠ ಹೇಳಿದ ಗುರುವಾಗಿ ಮಾನ್ಯರಾಗಿದ್ದಾರೆ. ಶ್ರೀ ವಿದ್ಯಾಮಾನ್ಯರು ಹಾಕಿಕೊಟ್ಟ ಮಾರ್ಗದಲ್ಲಿ ಭಂಡಾರಕೇರಿ ಸಂಸ್ಥಾನ ಕಳೆದ ಮೂರು ದಶಕಗಳಿಂದ ನೂರಾರು ರೀತಿಯ ಧಾರ್ಮಿಕ, ಸಾಮಾಜಿಕ ಚಟುವಟಿಕೆ ನಡೆಸುತ್ತಿದೆ. ಸಾಧಕರನ್ನು ಗುರುತಿಸಿ, ಗೌರವಿಸುವ ಮೂಲಕ ಮಠಗಳಿಗೆ ಮಾದರಿಯಾಗಬಲ್ಲ ಕಾರ್ಯವನ್ನು ಮಾಡುತ್ತಿರುವುದು ಈ ನಾಡಿನ ಸುಯೋಗ. ಈ ನಿಟ್ಟಿನಲ್ಲಿ ಶ್ರೀ ವಿದ್ಯೇಶತೀರ್ಥರ ತಪೋನಿಷ್ಠೆ, ಕಾರ್ಯಕ್ಷಮತೆ ಶ್ಲಾಘನೀಯ ಎಂದು ಅವರು ಪ್ರಶಂಸೆ ವ್ಯಕ್ತಪಡಿಸಿದರು.



ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ ಶ್ರೀವೇದವ್ಯಾಸ ಜಯಂತಿ ಸಮಾರಂಭದಲ್ಲಿ ಹಿರಿಯ ವಿದ್ವಾಂಸರಾದ ಕೇಶವ ಬಾಯರಿ, ಸಗ್ರಿ ರಾಘವೇಂದ್ರ ಉಪಾಧ್ಯಾಯ, ಯುವ ವಿದ್ವಾಂಸರಾದ ಸತ್ಯಪ್ರಮೋದ ಕಟ್ಟಿ, ಎನ್.ಗಣಪತಿಭಟ್ಟ, ಉದ್ಯಮಿ ಡಿ.ಪಿ. ಅನಂತ ಅವರಿಗೆ ಮಠದ ವಿವಿಧ ಪ್ರಶಸ್ತಿ ಪ್ರದಾನ ಮಾಡಲಾಯಿತು. ಭಂಡಾರಕೇರಿ ಮಠದ ಶ್ರೀವಿದ್ಯೇಶತೀರ್ಥ ಸ್ವಾಮೀಜಿ, ಪೇಜಾವರ ಶ್ರೀವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಸೋಸಲೆ ಶ್ರೀ ವಿದ್ಯಾಶ್ರೀಶತೀರ್ಥರು ಸಾನ್ನಿಧ್ಯ ವಹಿಸಿದ್ದರು.

ಪ್ರಶಸ್ತಿ ಪ್ರದಾನ: ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ನಿವೃತ್ತ ಪ್ರಾಂಶುಪಾಲ ಪಿ.ಕೇಶವಬಾಯರಿ ಅವರಿಗೆ ಶ್ರೀರಾಜ ವಿದ್ಯಾವಂದ್ಯ ಪ್ರಶಸ್ತಿ, ಉಡುಪಿಯ ಮೂಡುಸಗ್ರಿ ಪರವಿದ್ಯಾ ಪ್ರತಿಷ್ಠಾನದ ಸಗ್ರಿ ರಾಘವೇಂದ್ರ ಉಪಾಧ್ಯಾಯರಿಗೆ ವೇದಪೀಠ ಪ್ರಶಸ್ತಿ, ಬೆಂಗಳೂರಿನ ಯುವ ವಿದ್ವಾಂಸ ಸತ್ಯಪ್ರಮೋದ ಕಟ್ಟಿ ಅವರಿಗೆ ಶ್ರೀಸತ್ಯತೀರ್ಥ ಅನುಗ್ರಹ ಪ್ರಶಸ್ತಿ, ಬೆಂಗಳೂರಿನ ವಿದ್ಯಾಮಾನ್ಯನಗರದ ಎನ್.ಗಣಪತಿಭಟ್ಟರಿಗೆ ಶ್ರೀ ಭಂಡಾರಕೇರಿ ರಾಜಹಂಸ ಪ್ರಶಸ್ತಿ, ಟಿಟಿಡಿ ಬೋರ್ಡ್ ಮಾಜಿ ಸದಸ್ಯ ಡಿ.ಪಿ.ಅನಂತ ಅವರಿಗೆ ಶ್ರೀಶ ರಾಜದರ್ಶನ ಪ್ರಶಸ್ತಿ, ಫಲಕ ಪ್ರದಾನ ಮಾಡಿ ಗೌರವಿಸಲಾಯಿತು.

ಸೋಸಲೆ ವ್ಯಾಸರಾಜ ಮಠದ ಶ್ರೀವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಭಂಡಾರಕೇರಿ ಮಠಾಧೀಶ ಶ್ರೀವಿದ್ಯೇಶ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಬೆಂಗಳೂರು ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಂಶುಪಾಲ ಡಾ.ಎಚ್.ಸತ್ಯನಾರಾಯಣಾಚಾರ್ಯರು ಭಗವಾನ್ ವೇದವ್ಯಾಸರ ಮಹೋನ್ನತ ಕೊಡುಗೆಗಳ ಬಗ್ಗೆ ಉಪನ್ಯಾಸ ನೀಡಿದರು.

ಕೃತಿ ಬಿಡುಗಡೆ: ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ವಿರಚಿತ 200ಕ್ಕೂ ಹೆಚ್ಚು ಗೀತೆಗಳ ಸಂಗ್ರಹ, ವಿದ್ಯೇಶ ವಿಠಲಾಂಕಿತ ಕೃತಿಮಂಜರಿ ಇದೇ ಸಂದರ್ಭ ಸೋಸಲೆ ಮತ್ತು ಪೇಜಾವರ ಶ್ರೀಗಳಿಂದ ಲೋಕಾರ್ಪಣೆಗೊಂಡಿತು. ಮಾತೃಭೂಮಿ ಪದ್ಯಮಾಲಾದ ದೃಶ್ಯ-ಶ್ರಾವ್ಯ ಪ್ರದರ್ಶನವೂ ವಿಶೇಷವಾಗಿತ್ತು.

ವೈಭವದ ಶೋಭಾಯಾತ್ರೆ: ಸಂಜೆ 5ಕ್ಕೆ ಕೃಷ್ಣಮೂರ್ತಿಪುರಂನ ಸೋಸಲೆ ವ್ಯಾಸರಾಜರ ವಿದ್ಯಾಪೀಠದಿಂದ ಶಾರದಾವಿಲಾಸ ಕಾಲೇಜಿನವರೆಗೆ ಶ್ರೀ ವೇದವ್ಯಾಸರ ಭಾವಚಿತ್ರ ಸಹಿತ ವೈಭವಪೂರ್ಣ ಶೋಭಾಯಾತ್ರೆ ನೆರವೇರಿತು. ವಿವಿಧ ಭಜನಾ ಮಂಡಳಿ ಸದಸ್ಯರು ದಾಸರ ಪದಗಳನ್ನು ಹಾಡಿದರು. ವಿದ್ವಾಂಸರು ವೇದಘೋಷ ಮಾಡುವ ಮೂಲಕ ಗಮನ ಸೆಳೆದರು.

ಮಾರಿಷಸ್ ಜೆಎಸ್ಎಸ್ ಅಕಾಡೆಮಿಗೆ ಉಪ ಪ್ರಧಾನಿ ಲೀಲಾದೇವಿ ಭೇಟಿ



ಮೈಸೂರು, ಮೇ3-ಮಾರಿಷಸ್‌ನಲ್ಲಿರುವ ಜೆಎಸ್ಎಸ್ ಅಕಾಡೆಮಿಗೆ ಮಂಗಳವಾರ ಮಾರಿಷಸ್‌ನ ಉಪ ಪ್ರಧಾನಿ ಹಾಗೂ ಉನ್ನತ ಶಿಕ್ಷಣ ಸಚಿವರಾದ ಶ್ರೀಮತಿ ಲೀಲಾದೇವಿ ದೂಖುನ್ ಲುಚೂಮುನ್ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದು, ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್ಎಸ್ ಅಕಾಡೆಮಿ ವತಿಯಿಂದ ಫಾರ್ಮಸಿ ಕಾಲೇಜು, ಎಂಬಿಎ ಮತ್ತು ಜೀವ ವಿಜ್ಞಾನಗಳಿಗೆ ಸಂಬಂಧಪಟ್ಟ ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, ಅವುಗಳ ಕಾರ್ಯವೈಖರಿ ವೀಕ್ಷಿಸಿ, ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು. ಫಾರ್ಮಸಿ ಕಾಲೇಜು ಅತ್ಯುತ್ತಮ ಸೌಲಭ್ಯಗಳನ್ನು ಹೊಂದಿರುವುದರಿಂದ, ಔಷಧಿಗಳ ಪರೀಕ್ಷೆ ಪ್ರಯೋಗಾಲಯಗಳು ಹಾಗೂ ಇತರೆ ಅಧ್ಯಯನ ವಿಷಯಗಳನ್ನು ಪ್ರಾರಂಭಿಸುವ ಬಗ್ಗೆ ಸಲಹೆ ಹಾಗೂ ಮಾರ್ಗದರ್ಶನ ನೀಡಿದ್ದಾರೆ. ಅದಕ್ಕೆ ಸರ್ಕಾರದಿಂದ ಅಗತ್ಯವಿರುವ ಎಲ್ಲಾ ರೀತಿಯ ಸಹಾಯ, ಸಹಕಾರ ನೀಡುವುದಾಗಿಯೂ ಭರವಸೆ ನೀಡಿದ್ದಾರೆ. ಡಾ.ಸಿ.ಜಿ.ಬೆಟಸೂರಮಠ, ಡಾ.ಬಿ.ಸುರೇಶ್, ಎಸ್.ಪಿ. ಮಂಜುನಾಥ್, ಎಸ್.ಪುಟ್ಟಸುಬ್ಬಪ್ಪ, ಡಾ.ಪ್ರವೀಣ್ ಮೊಹದೇಬ್, ಕೆ.ಪಿ. ನವೀನ್, ಆಶಿಶ್ ಡಿ.ವಾಧ್ವಾನಿ, ಡಾ. ಜಯಶ್ರೀ ವೈಜನಾಥಪ್ಪ, ಡಾ.ಗೌತಮ್ ಯರ‍್ರಕುಲ ಈ ವೇಳೆ ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಯೋಗ ಸ್ಪರ್ಧೆಗೆ ಆಯ್ಕೆ

ಗಾವಡಗೆರೆ, ಮೇ 3-ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮದ ಶಿವಾಜಿ ರಾವ್ ಕ್ಷೀರಸಾಗರ್ ಅವರ ಪತ್ನಿ ಶ್ರೀಮತಿ ಉಷಾಬಾಯಿ ಕ್ಷೀರಸಾಗರ್ ಅಂತರರಾಷ್ಟ್ರೀಯ ಯೋಗ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.



ಉಷಾಬಾಯಿ

ಕಳೆದ ಫೆಬ್ರವರಿ 26ರಂದು ಶಿವಮೊಗ್ಗದ ಕೋಟೆ ರಸ್ತೆಯ ವಾಸವಿ ಶಾಲೆಯ ಚಿಗುರು ಸಭಾಂಗಣದಲ್ಲಿ 50ರಿಂದ 60 ವರ್ಷದ ಮಹಿಳೆಯರ ವಿಭಾಗದಲ್ಲಿ ನಡೆಸಿದ 5ನೇ ರಾಷ್ಟ್ರ ಮಟ್ಟದ ಯೋಗಾಸನ ಚಾಂಪಿಯನ್‌ಶಿಪ್‌ನಲ್ಲಿ ಪ್ರಥಮ ಸ್ಥಾನ ಪಡೆಯುವುದರ ಮೂಲಕ ಅಂತರರಾಷ್ಟ್ರೀಯ ಯೋಗ ಸ್ಪರ್ಧೆಗೆ ಆಯ್ಕೆಯಾಗಿದ್ದು, ಮುಂದಿನ ಮೇ ತಿಂಗಳು ದುಬೈನಲ್ಲಿ ನಡೆಯಲಿರುವ ದುಬೈ ಯೋಗ ಯೂತ್ ಅಸೋಸಿಯೇಶನ್ ವತಿಯಿಂದ ಆಯೋಜಿಸಿರುವ ಎರಡನೇ ಅಂತರರಾಷ್ಟ್ರೀಯ ಯೋಗಾಸನ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.



ಮೈಸೂರು ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಭಾರಿ ಉಪನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ ಶ್ರೀಮತಿ ಎಂ.ಪಿ.ನಾಗಮ್ಮ ಅವರನ್ನು ಪ್ರಾಂಶುಪಾಲರಾದ ಲಯನ್ ಸಿ.ಆರ್.ದಿನೇಶ್ ಅಭಿನಂದಿಸಿದರು. ಚಿತ್ರದಲ್ಲಿ ಅಪೂರ್ವ, ಮುಕುಂದ, ಸುನಿಲ್ ಇದ್ದಾರೆ.

ತಮಿಳಿನ ಹಾಸ್ಯ ನಟ, ನಿರ್ದೇಶಕ ಮನೋಬಾಲ ಇನ್ನಿಲ್ಲ


ಚೆನ್ನೈ, ಮೇ 3- ತಮಿಳಿನ ಖ್ಯಾತ ನಿರ್ದೇಶಕ ಹಾಗೂ ನಟ ಮನೋಬಾಲಾ ಇಂದು ನಿಧನರಾಗಿದ್ದಾರೆ. ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಚೆನ್ನೈನ ಮನೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಕೆಲ ದಿನಗಳಿಂದ ಅವರು ಯಕೃತ್ತಿನ ಸಮಸ್ಯೆಯಿಂದ ಬಳಲುತ್ತಿದ್ದರು.



ಭಾರತಿರಾಜ ಅವರ 'ಪುತಿಯ ವಾರ್ಪುಗಳ್' ಚಿತ್ರದ ಮೂಲಕ ನಟರಾಗಿ ಸಿನಿಮಾ ರಂಗಕ್ಕೆ ಪದಾರ್ಪಣೆ ಮಾಡಿದ್ದ ಮನೋಬಾಲಾ, ಆನಂತರ ಭಾರತಿಪುರ ನಿರ್ದೇಶನದ ಚಿತ್ರಗಳಿಗೆ ಸಹಾಯ ನಿರ್ದೇಶಕರೂ ಆಗಿದ್ದರು. ಈವರೆಗೂ 400ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ತೆಲುಗು, ತಮಿಳು ಹಾಗೂ ಮಲಯಾಳಂ ಸಿನಿಮಾದಲ್ಲಿ ಹಾಸ್ಯ ಕಲಾವಿದರಾಗಿ ಗುರುತಿಸಿಕೊಂಡಿದ್ದರು. ಸಾಹಸ ಸಿಂಹ ವಿಷ್ಣುವರ್ಧನ್ ಅವರ ಡಿಸೆಂಬರ್ 31 ಸಿನಿಮಾಗೆ ಮನೋಬಾಲಾ ನಿರ್ದೇಶನ ಮಾಡಿದ್ದಾರೆ. ಹಾಗಾಗಿ ಕನ್ನಡದ ನಂಟು ಕೂಡ ಅವರಿಗಿತ್ತು. ಪತ್ನಿ ಉಷಾ ಮತ್ತು ಪುತ್ರ ಹರೀಶ್ ಅವರನ್ನು ಅಗಲಿರುವ ಮನೋಬಾಲಾಗೆ ದಕ್ಷಿಣದ ಸಿನಿಮಾ ರಂಗ ಕಂಬನಿ ಮಿಡಿದಿದೆ. ಅನೇಕ ಕಲಾವಿದರು ಹಾಗೂ ತಂತ್ರಜ್ಞರು ಅಂತಿಮ ದರ್ಶನ ಪಡೆದಿದ್ದಾರೆ.

ನಿಧನ

ಕೆಂಪನಂಜಮ್ಮ



ಮೈಸೂರು: ತಾಲೂಕಿನ ಲಲಿತಾದ್ರಿಪುರದ ನಿವಾಸಿ ಲೇಟ್ ಅಕ್ಕಿ ಲಿಂಗಯ್ಯ ಅವರ ಪತ್ನಿ ಕೆಂಪನಂಜಮ್ಮ (85) ಬುಧವಾರ ಸಂಜೆ ನಿಧನರಾಗಿದ್ದಾರೆ. ಇವರು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರ ಅಜ್ಜಿ. ಮೃತರು ಬಿಜೆಪಿ ಮುಖಂಡ ಲೇಟ್ ರಾಜಣ್ಣ ಅವರ ತಾಯಿ. ಇವರು ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12 ಗಂಟೆಗೆ ಲಲಿತಾದ್ರಿಪುರದಲ್ಲಿರುವ ಅವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಮತದಾನ ಮಾಡಿದ್ದರು: ಎರಡು ದಿನಗಳ ಹಿಂದಷ್ಟೇ ಕೆಂಪನಂಜಮ್ಮ ಅವರು ಅಂಚೆ ಮತದಾನದ ಮೂಲಕ ಮನೆಯಲ್ಲಿ ತಮ್ಮ ಹಕ್ಕು ಚಲಾಯಿಸಿದ್ದರು.

ಗೋವಿಂದರಾಜು



ಮೈಸೂರಿನ ಕೆ.ಆರ್. ಮೊಹಲ್ಲಾ, ಅಗ್ರಹಾರ ಸಮೀಪ, 6ನೇ ಕ್ರಾಸ್ ನಿವಾಸಿ ಗೋವಿಂದರಾಜು (ಪ್ರಕಾಶ್) ಬುಧವಾರ ಬೆಳಗ್ಗೆ ನಿಧನರಾದರು. ಅವರಿಗೆ 73 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಪ್ರೇಮ, ಪುತ್ರಿ ಜಿ. ರಮ್ಯಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ವೃತ್ತದಲ್ಲಿ ರ್ಯಾಲಿ: ಪ್ರಧಾನಿ ವಿರುದ್ಧ ಪ್ರಕರಣ ದಾಖಲಿಸಲು ಆಗ್ರಹ

ಮೈಸೂರು,ಮೇ 3(ಜಿಎ)-ಮೆರವಣಿಗೆಗೆ ನಿಷೇಧವಿರುವ ಕೆ.ಆರ್.ವೃತ್ತದಲ್ಲಿ ರೋಡ್ ಶೋ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಮುಖಂಡರ ವಿರುದ್ಧ ಪ್ರಕರಣ ದಾಖಲಿಸುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮೈಸೂರು ಸಂಘಟನಾ ಸಮಿತಿ ಜಿಲ್ಲಾ ಕಾರ್ಯದರ್ಶಿ ಎಲ್.ಜಗದೀಶ್ ಸೂರ್ಯ ಒತ್ತಾಯಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್.ವೃತ್ತದಲ್ಲಿ ಟ್ರಾಫಿಕ್ ಜಾಮ್ ಆಗುತ್ತದೆ ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗಲಿದೆ ಎಂದು ಕಳೆದ ಹತ್ತು ವರ್ಷಗಳ ಹಿಂದೆಯೇ ವೃತ್ತದಲ್ಲಿ ಯಾವುದೇ ಪ್ರತಿಭಟನೆ, ಮೆರವಣಿಗೆಗೆ ನಿರ್ಬಂಧ ಹೇರಲಾಗಿದೆ. ಹಾಗೇ ದಸರಾ ಮತ್ತು ಸರ್ಕಾರಿ ಕಾರ್ಯಕ್ರಮ ಹೊರತುಪಡಿಸಿ, ಬೇರೆ ಯಾವುದೇ ಮೆರವಣಿಗೆ, ಪ್ರತಿಭಟನೆಗಳಿಗೆ ಅವಕಾಶ ನೀಡಿಲ್ಲ. ಆದರೆ, ಏ.30 ರಂದು ಪ್ರಧಾನಮಂತ್ರಿ ಮೋದಿ, ಶಾಸಕ ರಾಮದಾಸ್, ಈಶ್ವರಪ್ಪ ಹಾಗೂ ಸಂಸದ ಪ್ರತಾಪ್ ಸಿಂಹ ರೋಡ್ ಶೋ ನಡೆಸಿದ್ದಾರೆ. ಕೂಡಲೇ ಅವರ ವಿರುದ್ಧ ಪ್ರಕರಣವನ್ನು ದಾಖಲಿಸಿ ಕಾನೂನು ಎಲ್ಲರಿಗೂ ಒಂದೇ ಎಂದು ಸಾಬೀತುಪಡಿಸಿ ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಮಿತಿ ಸದಸ್ಯ ಕೆ.ಬಸವರಾಜು, ಜಿ.ಜಯರಾಮ್, ಸ್ಥಳೀಯ ಸಮಿತಿ ಸದಸ್ಯ ರಾಜೇಂದ್ರ ಉಪಸ್ಥಿತರಿದ್ದರು.

ನಾಳೆ ಸಿದ್ದರಾಮಯ್ಯ ಪರ ದುನಿಯಾ ವಿಜಿ ಪ್ರಚಾರ



ಮೈಸೂರು,ಮೇ 3(ಜಿಎ)-ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಅವರ ಪರ ನಟ ದುನಿಯಾ ವಿಜಯ್ ಮೇ 5ರಂದು ಪ್ರಚಾರ ಮಾಡಲಿದ್ದಾರೆ ಎಂದು ದುನಿಯಾ ವಿಜಯ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಚಿನ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಮೇಲಿನ ಅಭಿಮಾನದಿಂದ ದುನಿಯಾ ವಿಜಯ್ ಅವರು ಮೇ 5ರಂದು ವರುಣ ಕ್ಷೇತ್ರದಾದ್ಯಂತ ಅವರ ಪರ ಮತಯಾಚನೆ ಮಾಡಲಿದ್ದಾರೆ. ಅವರಿಗೆ ಅಭಿಮಾನಿಗಳ ಸಂಘವು ಬೆಂಬಲ ಸೂಚಿಸಿದ್ದು, ಅವರೊಟ್ಟಿಗೆ ನಾವು ಪ್ರಚಾರ ಮಾಡಲಿದ್ದೇವೆ ಎಂದರು. ಗೋಷ್ಠಿಯಲ್ಲಿ ಅಭಿಮಾನಿಗಳಾದ ಸುರೇಶ್, ಸ್ವಾಮಿ, ಸೋಮು, ಸವೀನ್, ಸುನೀಲ್, ಶಿವು, ರವಿ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಬೆಂಬಲಿಸಲು ಮೀನುಗಾರ ಸಮುದಾಯಕ್ಕೆ ಮನವಿ

ಮೈಸೂರು,ಮೇ 3(ಪಿಎಂ)- ರಾಜ್ಯದ ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿ ಹಾಗೂ ಮೀನುಗಾರ ಸಮುದಾಯದ ಶ್ರೇಯೋಭಿವೃದ್ಧಿಗೆ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಹಲವು ಯೋಜನೆಗಳನ್ನು ಉಲ್ಲೇಖಿಸಿದ್ದು, ಈ ಬಾರಿಯ ಚುನಾವಣೆಯಲ್ಲಿ ಮೀನುಗಾರ ಸಮುದಾಯ ಕಾಂಗ್ರೆಸ್ ಬೆಂಬಲಿಸಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮೀನುಗಾರರ ವಿಭಾಗದ ರಾಜ್ಯಾಧ್ಯಕ್ಷ ಮಂಜುನಾಥ ಭೀ.ಸುಣಗಾರ ಕೋರಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀನುಗಾರ ಸಮುದಾಯದ ಶ್ರೇಯೋಭಿವೃದ್ಧಿಗೆ ಕಾಂಗ್ರೆಸ್ ಬದ್ಧತೆ ಹೊಂದಿದೆ. ಈ ಬಾರಿಯ ಚುನಾವಣೆಯಲ್ಲಿ ಐದು ಕ್ಷೇತ್ರಗಳಲ್ಲಿ ಸಮುದಾಯದ ಅಭ್ಯರ್ಥಿಗಳ ಸ್ಪರ್ಧೆಗೆ ಅವಕಾಶ ಕಲ್ಪಿಸಿದೆ. ರಾಜ್ಯದಲ್ಲಿ 39 ಪರ್ಯಾಯ ಪದಗಳಿಂದ ಗುರುತಿಸಲ್ಪಡುವ ಮೀನುಗಾರ ಸಮುದಾಯ 80 ಲಕ್ಷ ಜನಸಂಖ್ಯೆ ಹೊಂದಿದ್ದು, ಇಡೀ ಸಮುದಾಯ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಬೇಕೆಂದು ಮನವಿ ಮಾಡಿದರು. ಮೀನುಗಾರರ ವಿಭಾಗದ ಪ್ರಧಾನ ಕಾರ್ಯದರ್ಶಿ ಸುರೇಂದ್ರನಾಥ್, ಪದಾಧಿಕಾರಿಗಳಾದ ಬಿ.ಎಸ್.ಲೋಕೇಶ್ವರ್, ಜೂಲಿ, ಸವಿತಾ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು: 2022-23ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ssp. postmatric.karnataka. gov.in ನಲ್ಲಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಮೇ 6 ಅಂತಿಮ ದಿನ. ಪಿಯುಸಿ ಮತ್ತು ಐಟಿಐ ಹೊರತುಪಡಿಸಿ ಅರ್ಹ ಪ.ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸುವುದು. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು NPCI (National Payment Corporation of India)ರಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವುದು. ಮಾಹಿತಿಗೆ ದೂ.ಸಂಖ್ಯೆ-0821-2520910 ಸಂಪರ್ಕಿಸಿ.

ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿಗಳಿಗೆ ಎಲ್ಲೆಡೆ ವ್ಯಾಪಕ ಬೆಂಬಲ ವಿಶ್ವಾಸ

ಮೈಸೂರು,ಮೇ 3(ಜಿಎ)- ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿಗಳಿಗೆ ಎಲ್ಲೆಡೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ರಂಗಯ್ಯ ವಿಶ್ವಾಸ ವ್ಯಕ್ತಪಡಿಸಿದರು.



ಮೈಸೂರಿನ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಮ್ ಆದ್ಮಿ ಪಾರ್ಟಿ ಕರ್ನಾಟಕದಲ್ಲಿ 209 ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಇವರಲ್ಲಿ 17 ಮಹಿಳೆಯರಿದ್ದಾರೆ. ಮೈಸೂರು ಜಿಲ್ಲೆಯ ಹತ್ತು ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದ್ದು, ಒಳ್ಳೆಯ ಫಲಿತಾಂಶದ ನಿರೀಕ್ಷೆ ಇದೆ ಎಂದರು.

209 ಅಭ್ಯರ್ಥಿಗಳ ಪೈಕಿ 7 ಡಾಕ್ಟರ್, 14 ಇಂಜಿನಿಯರ್, 20 ವಕೀಲರು, 10 ಶಿಕ್ಷಕರು, 30 ರೈತರು, 29 ಸಮಾಜ ಸೇವಕರು, 2 ಕೃಷಿ ವಿಜ್ಞಾನಿಗಳು, 10 ಸರ್ಕಾರಿ ನಿವೃತ್ತ ನೌಕರರು, 4 ಎಂಟೆಕ್, 3 ಪಿಎಚ್.ಡಿ, 36 ಸ್ನಾತಕ ಪದವೀಧರರು, 66 ಸ್ನಾತಕೋತ್ತರರು, 63 ವ್ಯಾಪಾರಸ್ಥರು, 10 ಗುತ್ತಿಗೆದಾರರು, 14 ಸ್ವಂತ ಉದ್ಯೋಗಸ್ಥರು, 8 ಐಟಿ ನೌಕರರು, 23 ಎಸ್ಎಸ್ಎಲ್‌ಸಿ, 35 ಪಿಯುಸಿ ಓದಿದವರು ಸೇರಿದಂತೆ ಹೋಟೆಲ್ ಕಾರ್ಮಿಕ, ಬಸ್ ಕಂಡಕ್ಟರ್ ಮತ್ತು ಆಟೋ ಡ್ರೈವರ್ ಈ ಬಾರಿ ಕಣದಲ್ಲಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಚಾಮರಾಜ ಕ್ಷೇತ್ರ ಅಭ್ಯರ್ಥಿ ಮಾಳವಿಕ ಗುಬ್ಬಿವಾಣಿ ಮಾತನಾಡಿ, ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ನೀರು, ರಸ್ತೆ, ಮನೆ ಮತ್ತು ನಿವೇಶನ ಸೇರಿದಂತೆ ಅನೇಕ ಸಮಸ್ಯೆಗಳಿವೆ. ಮನೆ ಮನೆ ಪ್ರಚಾರಕ್ಕೆ ತೆರಳಿದಾಗ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಜನತೆ ತಮ್ಮ ಬಳಿ ಹೇಳುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದು ಮುಖ್ಯ ಗುರಿಯಾಗಿದೆ ಎಂದರು.

ನಂತರ ನರಸಿಂಹರಾಜ ಕ್ಷೇತ್ರದ ಅಭ್ಯರ್ಥಿ ಧರ್ಮಶ್ರೀ ಮಾತನಾಡಿ, ಕ್ಷೇತ್ರವನ್ನು ಒಂದೇ ಕುಟುಂಬದವರು ಕಳೆದ ಐವತ್ತು ವರ್ಷಗಳಿಂದ ತಮ್ಮ ಸಾಮ್ರಾಜ್ಯ ಮಾಡಿಕೊಂಡಿದ್ದು, ಜನತೆ ಈ ಬಾರಿ ಬದಲಾವಣೆ ಬಯಸಿದ್ದಾರೆ. ಒಂದು ವರ್ಷದ ಹಿಂದೆ ನಾವು ನಾಲ್ಕು ಮಂದಿ ಪೊರಕೆ ಹಿಡಿದು ಕ್ಷೇತ್ರದಲ್ಲಿ ಮನೆ ಮನೆಗೆ ಭೇಟಿ ನೀಡಿದ್ದಾಗ ನಗುತ್ತಿದ್ದರು. ಆದರೆ, ಇಂದು ಉತ್ತಮ ಬೆಂಬಲ ವ್ಯಕ್ತವಾಗಿದೆ. ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ತಾಂಡವವಾಡುತ್ತಿದ್ದು, ಅದರಲ್ಲಿ ಪ್ರಮುಖವಾಗಿ ಯುಜಿಡಿ, ಕಸದ ಸಮಸ್ಯೆ ಜೊತೆಗೆ ಶಾಲೆಗಳ ಮೂಲ ಸೌಕರ್ಯಗಳ ಕೊರತೆಯೂ ಹೇಳತ್ತೀರದಾಗಿದೆ. ಇವುಗಳನ್ನು ಸರಿಪಡಿಸುವುದೇ ನನ್ನ ಉದ್ದೇಶವಾಗಿದೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ಕಿರಣ್ಕಲ್ಯಾಣಿ ಮಾತನಾಡಿ, ಕ್ಷೇತ್ರದ ಶೇ.50ರಷ್ಟು ವಿದ್ಯಾವಂತ ಯುವಕರು ಗಾರೆ ಕೆಲಸಕ್ಕೆ ಹೋಗುತ್ತಿದ್ದಾರೆ. ಅವರಿಗೆ ನಿರಂತರವಾಗಿ ಕೆಲಸ ಕೊಡಿಸುವ ಕಾರ್ಯವಾಗಬೇಕು. ಇಲ್ಲಿ ಶಿಕ್ಷಣ ಮತ್ತು ಆಸ್ಪತ್ರೆ ಮಾಫಿಯಾಗಳು ನಡೆಯುತ್ತಿವೆ ಅದನ್ನು ತಡೆಯಬೇಕಿದೆ. ದೆಹಲಿಯಲ್ಲಿರುವಂತೆ ಸಮಾನತೆ ತರಬೇಕಿದೆ. ಜೊತೆಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶವಿದೆ ಎಂದು ಹೇಳಿದರು.

ನಂತರ ಕೃಷ್ಣರಾಜ ಕ್ಷೇತ್ರದ ಅಭ್ಯರ್ಥಿ ಜಯಶ್ರೀ ಮಾತನಾಡಿ, ಕ್ಷೇತ್ರದಲ್ಲಿ ಹಾಲಿ ಶಾಸಕರು ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ಇದರಿಂದ ಕ್ಷೇತ್ರವೂ ಅಭಿವೃದ್ಧಿ ವಿಷಯದಲ್ಲಿ ಹಿಂದುಳಿದಿದೆ. ರಸ್ತೆಗಳು ಮತ್ತು ಕುಡಿಯುವ ನೀರಿನ ಸಮಸ್ಯೆಗಳು ಹೆಚ್ಚಿದ್ದು, ಕುಡಿಯುವ ನೀರಿಗೆ ಸಮಯವನ್ನು ನಿಗದಿಪಡಿಸಿದ್ದಾರೆ. ಇವುಗಳ ಬದಲಾವಣೆಯಾಗಬೇಕಿದೆ. ಮತ್ತೊಂದೆಡೆ ಕ್ಷೇತ್ರದ ಮಹಿಳೆಯರು ಇಲ್ಲಿರುವ ಜಾಕಿ ಕಂಪನಿಯ ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಬೆಳಗ್ಗೆ 4 ಗಂಟೆಗೆ ಎದ್ದು ಹೋಗುತ್ತಿದ್ದಾರೆ. ಅವರಿಗೆ ಬಡ್ಡಿರಹಿತ ಸಾಲ ನೀಡಿ ಸ್ವಯಂ ಉದ್ಯೋಗಿಗಳಾಗಿ ಮಾಡುವ ಚಿಂತನೆ ಇದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.5.2023 ಗುರುವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ- ಬಾನುಲಿ ಸರಣೀ, ಪ್ರಸ್ತುತಿ- ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ-ಜಿ.ಪುಷ್ಪಲತಾ, ಎಸ್.ಸಂಗೀತಾ, ವ್ಯಾಖ್ಯಾನ-ಡಾ.ಪ್ರದೀಪ್ ಕುಮಾರ್, 8.30 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.30 ಚುನಾವಣೆ 2023-ಮತ ಕ್ಷೇತ್ರ ದರ್ಶನ, ಸಮಗ್ರ ಚಿತ್ರಣ, 10.00 ಎನ್.ಭಾರತಿ-ವೀಣಾವಾದನ, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 1.00 ರಂಗಗೀತೆಗಳು-ಸ್ವಾಮಿಗೌಡ, 1.20 ಭಾವಗೀತೆಗಳು, 4.00 ಜನಪದ ಸಂಗೀತ-ಮೈಸೂರು ಜಿ.ಗುರುರಾಜ್ ಮತ್ತು ಸಂಗಡಿಗರು, 5.00 ಮಿಶ್ರ ಮಾಧುರ್ಯ, 6.55 ಕೃಷಿರಂಗ-ಕಿಸಾನ್‌ವಾಣಿ-ಹಿಪ್ಪುನೇರಳೆ ಬೆಳೆಯಲ್ಲಿ ಬೇರು ಕೊಳೆ ರೋಗದ ಸಮಗ್ರ ನಿರ್ವಹಣೆ-ಕುರಿತು ಡಾ.ಜಿ.ಎಸ್.ಅರುಣ್‌ಕುಮಾರ್ ಅವರೊಂದಿಗೆ ಸಂದರ್ಶನ, 8.00 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 10.00 ನಾಟಕ "ಮತ್ತೆ ಮಕ್ಕಳಂತಾಗಿ ಬಿಡೋಣ", ಮೂಲ ಹಿಂದಿ- ಕ್ಷಮಾ ಶರ್ಮ, ಕನ್ನಡಾನುವಾದ- ಲಕ್ಷ್ಮೀನಾರಾಯಣ ಅರೋರಾ, ನಿರ್ಮಾಣ- ಪ್ರಭುಸ್ವಾಮಿ ಮಳಿಮಠ

■ **ಶ್ರೀ ವೆಂಕಟಾಚಲ ಧಾಮ, ಮಧ್ವ ರಾದ್ಧಾಂತ ಸಂವರ್ಧಕ ಸಭಾ :** ಶ್ರೀ ವೇದವ್ಯಾಸ ಜಯಂತಿ, ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಆರಾಧನೆ ಮತ್ತು ನರಸಿಂಹ ಜಯಂತಿ ಮಹೋತ್ಸವ, ವೆಂಕಟಾಚಲಧಾಮದಲ್ಲಿ ಬೆಳಗ್ಗೆ 9ಕ್ಕೆ ಶ್ರೀ ನರಸಿಂಹ ಮಂತ್ರ ಹೋಮ, ಸಂಜೆ 5.30ಕ್ಕೆ ಶಾರದಾ ವಿಲಾಸ ಕಾಲೇಜಿನ ಶತಮಾನೋತ್ಸವ ಸಭಾಂಗಣದಲ್ಲಿ ಸಭಾ ಕಾರ್ಯಕ್ರಮ, ವಿದ್ವಾನ್ ಬೆ.ನಾ. ವಿಜಯೀಂದ್ರಾಚಾರ್ಯ ಅವರಿಂದ ವಿದ್ವತ್ ಪ್ರವಚನ : ವಿಷಯ : ವಿವಿಧ ಪುರಾಣಗಳಲ್ಲಿ ನರಸಿಂಹನ ಚಿತ್ರಣ, ಸಂಜೆ 6.30 ರಿಂದ ಸುಘೋಷ, ಸುಮುಖ, ಮಧ್ವೇಶ, ಧನ್ಯಾ ಬಾಲ ಕಲಾವಿದರ ತಂಡದಿಂದ ವಿದ್ಯೇಶವಿಠ್ಠಲಾಂಕಿತ ಕೃತಿಗಾಯನ, ಶ್ರೀಗಳವರಿಂದ ಅನುಗ್ರಹ ಸಂದೇಶ, ಫಲಮಂತ್ರಾಕ್ಷತೆ.

■ **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ :** ಮಕ್ಕಳ ಶೀತ, ಕೆಮ್ಮು, ಉಬ್ಬಸ ಮತ್ತು ಇತರೆ ಉಸಿರಾಟದ ಕಾಯಿಲೆಗಳಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ; ಅರ್ಧತಲೆನೋವಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಕದಂಬ ಸೈನ್ಯ ಕನ್ನಡ ಸಂಘಟನೆ :** ನಂದಿನಿ ಹಾಲು ಬಳಸಿ, ಉಳಿಸಿ, ಗುಜರಾತ್ ಅಮುಲ್ ಹಾಲು ಉತ್ಪನ್ನ ತಿರಸ್ಕರಿಸಿ ಕರಪತ್ರ ಚಳವಳಿ, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.15ಕ್ಕೆ.

■ **ಮಧುರಗಾನ ಕಲಾವೃಂದ :** ಡಾ ರಾಜ್‌ಕುಮಾರ್‌ರವರ 95ನೇ ಹುಟ್ಟುಹಬ್ಬದ ಪ್ರಯುಕ್ತ ಎರಡು ನಕ್ಷತ್ರಗಳ ರಸಸಂಜೆ ಕಾರ್ಯಕ್ರಮ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಅತಿಥಿಗಳು : ಡಾ. ರಾಜ್ ಪುತ್ರಿಯರಾದ ಶ್ರೀಮತಿ ಲಕ್ಷ್ಮಿ ಗೋವಿಂದರಾಜ್, ಶ್ರೀಮತಿ ಪೂರ್ಣಿಮಾ ರಾಮ್‌ಕುಮಾರ್, ಪಾರ್ವತಮ್ಮ ರಾಜ್‌ಕುಮಾರ್ ಸಹೋದರ ಎಸ್.ಎ. ಚಿನ್ನೇಗೌಡ, ಎಸ್.ಎ. ಶ್ರೀನಿವಾಸ್, ಎಸ್.ಎ. ಗೋವಿಂದರಾಜ್, ಅಧ್ಯಕ್ಷತೆ : ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ರಂಗಾಯಣ :** ಚಿಣ್ಣರಮೇಳ-2023, ನಮ್ಮೀ ತಾಯ್ನೆಲ' ಚಿಣ್ಣರ ನಾಟಕೋತ್ಸವ, ಪೃಥ್ವಿ ತಂಡದಿಂದ ರಾಜ ಮತ್ತು ವೃಕ್ಷದೇವತೆ, ನಿರ್ದೇಶನ : ಕೆ. ಶ್ರೀನಿವಾಸ, ರಚನೆ : ಶೈಲಿ ಪ್ರಭಾಕರ್, ಸಂಗೀತ : ಆರ್.ಸಿ. ಧನಂಜಯ್; ಧರಣಿ ತಂಡದಿಂದ ಕಪ್ಪು ಕಾಗೆಯ ಹಾಡು, ನಿರ್ದೇಶನ : ಎಸ್. ಶ್ರೀಕಾಂತ್, ಸಂಗೀತ : ಮೂರ್ತಿ ದೇರಾಜೆ, ಸ್ಥಳ: ವನರಂಗ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.



ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಬ್ರಾಹ್ಮಣ ರಕ್ಷಣಾ ವೇದಿಕೆ ಗೌರವಾಧ್ಯಕ್ಷ ಶಶಿಶೇಖರ್ ದೀಕ್ಷಿತ್ ಅವರನ್ನು ಭೇಟಿ ಮಾಡಿದ ಶಾಸಕ ಜಿ.ಟಿ.ದೇವೇಗೌಡರು ಮತಯಾಚಿಸಿದರು. ಈ ವೇಳೆ ಬ್ರಾಹ್ಮಣ ರಕ್ಷಣಾ ವೇದಿಕೆ ಅಧ್ಯಕ್ಷ ಕಡಕೊಳ ಹರೀಶ್ ಇನ್ನಿತರರಿದ್ದರು.



ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ದೇವರಾಜ ಮೊಹಲ್ಲಾದಲ್ಲಿ ಮತಯಾಚಿಸಿದರು. ಈ ವೇಳೆ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಮೇಯರ್ ರವಿಕುಮಾರ್, ನಗರಪಾಲಿಕೆ ಸದಸ್ಯರಾದ ರಮೇಶ್, ಎಸ್‌ಬಿಎಂ ಮಂಜು ಇನ್ನಿತರರಿದ್ದಾರೆ.

ಕೆಆರ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಬಿರುಸಿನ ಪ್ರಚಾರ

ಮೈಸೂರು, ಮೇ 3(ಪಿಎಂ)– ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ತಮ್ಮ ಬಿರುಸಿನ ಪ್ರಚಾರ ಮುಂದುವರೆಸಿದ್ದು, ಅಭಿ ವೃದ್ಧಿಗಾಗಿ ತಮ್ಮನ್ನು ಬೆಂಬಲಿಸುವಂತೆ ಕ್ಷೇತ್ರದ ಮತ ದಾರರಲ್ಲಿ ಮತಯಾಚನೆ ಮುಂದುವರೆಸಿದ್ದಾರೆ.

ಅಂತೆಯೇ ಬುಧವಾರ ಬಿರುಸಿನ ಪ್ರಚಾರ ನಡೆಸಿದ್ದು, ಇದೇ ವೇಳೆ ಕ್ಷೇತ್ರದ ಜನತೆ ಅವರಿಗೆ ಅಪಾರ ಬೆಂಬಲ ವ್ಯಕ್ತಪಡಿಸಿದರು. ಕ್ಷೇತ್ರದ ಟಿ.ಕೆ.ಲೇಔಟ್, ಕುವೆಂಪುನಗರ, ಜಯನಗರ, ಚಾಮುಂಡಿಪುರಂ ಸೇರಿದಂತೆ ಮೊದಲಾದ ಪ್ರದೇಶಗಳಲ್ಲಿ ಪಾದಯಾತ್ರೆ ನಡೆಸಿದ ಶ್ರೀವತ್ಸ, ಡಬಲ್ ಇಂಜಿನ್ ಸರ್ಕಾರದ ಅಭಿವೃದ್ಧಿ ಪರ್ವವು ಕ್ಷೇತ್ರದಲ್ಲಿ ಮುಂದುವರೆಯಲು ತಮ್ಮನ್ನು ಬೆಂಬೆಲಿಸುವಂತೆ ಕೋರಿ ದರು. ಇದೇ ವೇಳೆ ತಮ್ಮ ಪಕ್ಷದ ಸಾಧನೆ ಹಾಗೂ ತಮ್ಮ ವಿವರಗಳಿರುವ ಕರಪತ್ರಗಳನ್ನು ಹಂಚಿ ಮತ ಯಾಚಿಸಿದ ಅವರಿಗೆ ಬೆಂಬಲಿಸುವ ಭರವಸೆ ಮತದಾರ ರಿಂದ ವ್ಯಕ್ತವಾಯಿತು. ಕ್ಷೇತ್ರದ ಅಭಿವೃದ್ಧಿಗಾಗಿ ಸಹಕರಿ ಸುವಂತೆ ಕ್ಷೇತ್ರದ ಮತದಾರರಲ್ಲಿ ಮನವಿ ಮಾಡಿದರು.

ಇದೇ ವೇಳೆ ಕಟ್ಟಡ ಕಾರ್ಮಿಕರನ್ನು ಭೇಟಿ ಮಾಡಿ ಮತ ಯಾಚಿಸಿದ ಅವರಿಗೆ ಬೆಂಬಲ ವ್ಯಕ್ತವಾಯಿತು. ಕ್ಷೇತ್ರದ ಹಾಲಿ



ಬಿಜೆಪಿ ಶಾಸಕ ರಾಮದಾಸ್ ಅವರ ಅಭಿವೃದ್ಧಿ ಮಾದರಿಯನ್ನು ಮುಂದುವರೆಸುವ ಮೂಲಕ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕ್ಷೇತ್ರದಲ್ಲಿ ಕೈಗೊ ಳ್ಳಲು ತಮ್ಮನ್ನು ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯರಾದ ಶಂಕರ್, ಜಗದೀಶ್, ಪಾರ್ಥಸಾರಥಿ ಸೇರಿದಂತೆ ಮತ್ತಿತರ ಮುಖಂ ಡರು ಅವರೊಂದಿಗೆ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.



ಚಾಮರಾಜ ಕ್ಷೇತ್ರ ವ್ಯಾಪ್ತಿಯ ವಿಜಯನಗರ ಬಡಾವಣೆಯಲ್ಲಿ ಶಾಸಕ ಎಲ್.ನಾಗೇಂದ್ರ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಸುಬ್ಬಯ್ಯ, ವಾರ್ಡ್ ಅಧ್ಯಕ್ಷ ವಸಂತ್‌ಕುಮಾರ್, ಬಿಜೆಪಿ ಮುಖಂಡರಾದ ಸತೀಶ್, ದಶರಥ್, ಪ್ರದೀಪ್, ಬಸವರಾಜು, ವಿಜಯ್, ಮಂಜುಳಾ, ಅನು, ಅವಿನಾಶ್, ಅಭಿ ಇನ್ನಿತರರು ಹಾಜರಿದ್ದರು.

ಕಾಂಗ್ರೆಸ್ ಬೆಂಬಲಿಸಲು ಪಜಾ–ಪಂ ಸಮುದಾಯಕ್ಕೆ ಮನವಿ

ಮೈಸೂರು,ಮೇ 3(ಪಿಎಂ)– ಪರಿಶಿಷ್ಟ ಜಾತಿ ಮತ್ತು ಪಂಗಡದ ಶ್ರೇಯೋಭಿ ವೃದ್ಧಿಗಾಗಿ ಕಾಂಗ್ರೆಸ್ ಪಕ್ಷವು ಇಂದಿರಾ ಗಾಂಧಿಯವ ರಿಂದ ಹಿಡಿದು ಸಿದ್ದರಾಮಯ್ಯನವರವರೆಗೆ ನೂರಾರು ಸವಲತ್ತು ನೀಡಿದೆ. ಹಾಗಾಗಿ ಈ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯ ಕಾಂಗ್ರೆಸ್ ಬೆಂಬಲಿಸಬೇಕೆಂದು ಮೈಸೂರು ನಗರ (ಜಿಲ್ಲಾ)



ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ಜಿ.ಮಂಟೇಲಿಂಗಯ್ಯ ಮನವಿ ಮಾಡಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೂರಾರು ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಗೆ ಕಾಂಗ್ರೆಸ್ ಕಾರಣವಾಗಿದೆ. ಆದರೆ ಕಳೆದ 4 ವರ್ಷಗಳಿಂದ ಆಡಳಿತ ನಡೆಸುತ್ತಿರುವ ರಾಜ್ಯ ಬಿಜೆಪಿ ಸರ್ಕಾರ ತಳಸಮುದಾಯದ ಶ್ರೇಯೋಭಿವೃದ್ಧಿಗೆ ಮಾರಕವಾಗಿದೆ. ಹಾಗಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯವು ಅಭಿವೃದ್ಧಿ ಮತ್ತು ಜನಪರ ವಾದ ಕಾಂಗ್ರೆಸ್ ಪಕ್ಷಕ್ಕೆ ಈ ಬಾರಿ ಬೆಂಬಲ ನೀಡಬೇಕೆಂದು ಕೋರಿದರು. ಪರಿಶಿಷ್ಟ ಜಾತಿ ವಿಭಾಗದ ಮುಖಂಡರಾದ ರಾಮು, ಸಿದ್ದರಾಜು, ಉಮೇಶ್‌ಚಂದ್ರ ಗೋಷ್ಠಿಯಲ್ಲಿದ್ದರು.

ಮತದಾನದ ಜಾಗೃತಿಗೆ ರೋಡಿಗಿಳಿಯದ್ದಾರೆ ಹಳೆ ಸುಂದರಿಯರು

ಸ್ವೀಪ್ ವತಿಯಿಂದ ವಿಂಟೇಜ್ ಕಾರು, ಟಾಂಗಾ ಜಾಥಾ ಆಯೋಜನೆ



ಮೈಸೂರು, ಮೇ 3(ಎಂಟಿವೈ)– ಈ ಬಾರಿ ಚುನಾವಣೆಯಲ್ಲಿ ಹೆಚ್ಚಿನ ಪ್ರಮಾ ಣದ ಮತದಾನ ಮಾಡುವುದಕ್ಕಾಗಿ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸ್ವೀಪ್ ಸಮಿತಿಯು ಮೇ 5ರಂದು ಮೈಸೂರಲ್ಲಿ ವಿಂಟೇಜ್ ಕಾರ್ ಮತ್ತು ಟಾಂಗಾ ಜಾಥಾ ಆಯೋಜಿಸಿದೆ. ಈ ಬಾರಿ ಮೈಸೂರಿನ ಎಲ್ಲಾ ಕ್ಷೇತ್ರಗಳಲ್ಲೂ ಮತದಾನದ ಪ್ರಮಾಣ ಹೆಚ್ಚಿಸಲು ವಿವಿಧ ಕಾರ್ಯಕ್ರಮ ಆಯೋ ಜಿಸಲಾಗಿದ್ದು, ಆ ಮೂಲಕ ಮತದಾನ ಮಾಡಲು ಮತಗಟ್ಟೆಗಳಿಗೆ ಬರುವಂತೆ ಜನರಲ್ಲಿ ಜಾಗೃತಿ ಮೂಡಿಸಿ, ಮತದಾನದ ಮಹತ್ವವನ್ನು ತಿಳಿಸುತ್ತಿದ್ದಾರೆ.

ಚುನಾವಣಾ ಆಯೋಗದ ಸ್ವೀಪ್ ವತಿಯಿಂದ ಮೈಸೂರಲ್ಲಿ ಮೇ 5ರಂದು ಬೆಳಗ್ಗೆ 9.30ಕ್ಕೆ ಅರಮನೆಯ ಮುಂಭಾ ಗದ ಕೋಟೆ ಆಂಜನೇಯ ಸ್ವಾಮಿ ದೇವಾ ಲಯದ ಮುಂಭಾಗದಿಂದ ಆರಂಭವಾಗುವ ವಿಂಟೇಜ್ ಕಾರ್ ಹಾಗೂ ಟಾಂಗಾ ಮೆರ ವಣಿಗೆಯು ಕೆ.ಆರ್.ಸರ್ಕಲ್, ಡಿ.ದೇವ ರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ಇರ್ವಿನ್ ರಸ್ತೆ, ರೈಲ್ವೆ ನಿಲ್ದಾಣ, ಕೆ.ಆರ್.ಆಸ್ಪತ್ರೆ ಮುಂಭಾಗ ಸಂಚರಿಸಿ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಸಂಚರಿಸಿ ಚಿಕ್ಕಗಡಿ ಯಾರ ವೃತ್ತದಲ್ಲಿ ಅಂತ್ಯಗೊಳ್ಳುತ್ತದೆ. ಈ ವಿಂಟೇಜ್ ಕಾರ್ ರ‍್ಯಾಲಿಯಲ್ಲಿ 15ಕ್ಕೂ ಹೆಚ್ಚು ಹಳೇ ಕಾರುಗಳು ಸಂಚರಿಸಲಿವೆ.

ಮಾವು ಬಾಯಲ್ಲಿ ನೀರೆ; ಬೆಲೆ ಕೇಳಿದರೆ ಬರೆ!

ಮೈಸೂರು, ಮೇ 3(ಜಿಎ)– ಮಳೆಯ ಎಫೆಕ್ಟ್‌ನಿಂದ ಹಣ್ಣುಗಳ ರಾಜ ಮಾವಿನ ಸಿಹಿಯ ಜೊತೆಗೆ ಕಳೆದ ಬಾರಿಗಿಂತ ಈ ಬಾರಿ ದುಬಾರಿ ಬೆಲೆಯ ಕಹಿ ಅನು ಭವವಾಗುತ್ತಿದೆ. ಮಾವು ಬೆಳೆಯುವ ಮಹಾ ರಾಷ್ಟ್ರ, ಕರ್ನಾಟಕ ಸೇರಿದಂತೆ ವಿವಿಧೆಡೆ ಕಳೆದ ಜನವರಿ ಮತ್ತು ಫೆಬ್ರವರಿಯಲ್ಲಿ ಅಕಾಲಿಕ ಮಳೆಯಾದ ಕಾರಣ ಹಾಗೂ ಮಾವು ಪರ್ಯಾಯ ಬೆಳೆಯಾಗಿರುವುದ ರಿಂದ ಪ್ರತಿವರ್ಷವೂ ಇಳುವರಿಯಲ್ಲಿ ಏರಿ ಳಿತ ಕಾಣುತ್ತದೆ. ಅದರಂತೆ ಕಳೆದ ಹಲ ವಾರು ವರ್ಷಗಳಿಂದ ಮಾವಿನ ಹಣ್ಣಿನ ಬೆಲೆಯಲ್ಲೂ ಏರಿಳಿತ ಕಾಣುತ್ತಿದ್ದು, ಈ ಬಾರಿಯೂ ಮಳೆಯಿಂದ ಹಣ್ಣಿನ ಇಳು ವರಿಯೂ ಕಡಿಮೆಯಾಗಿರುವ ಪರಿಣಾಮ, ಸಹಜವಾಗಿ ಬೆಲೆಯೂ ಹೆಚ್ಚಾಗಿದೆ.

ಬೇಸಿಗೆ ಆರಂಭವಾಗುತ್ತಿದ್ದಂತೆ ಎಲ್ಲರ ಮನೆಯಲ್ಲಿಯೂ ಮಾವಿನ ಘಮಲು ಇರುತ್ತದೆ. ಮಾವಿನ ರುಚಿ ಸವಿಯುವುದೇ ಒಂದು ವಿಶೇಷ ಅನುಭವ. ಅದರಲ್ಲಿಯೂ ಬಾದಾಮಿ, ಮಲ್ಲಿಕಾ, ರಸಪುರಿ, ಮಲ ಗೋಬ, ಸಿಂಧೂರಿ ಹಣ್ಣುಗಳಿಗೆ ಜನರು ಮುಗಿ ಬೀಳುವುದು ಸಹಜ. ಬೆಲೆಯ ಕಹಿ ನಡುವೆಯೂ ಸವಿಯಲ್ಲೇ ಬೇಕಾಗಿದೆ ಎಂಬುದು ಗ್ರಾಹಕರ ಮನದ ಮಾತಾಗಿದೆ.

ಮಾವು ಪ್ರಿಯರಿಗಾಗಿ ತೋಟಗಾರಿಕೆ ಇಲಾಖೆಯೂ ಪ್ರತಿವರ್ಷ ಮಾವಿನ ಮೇಳ ಆಯೋಜಿಸುವುದು ವಾಡಿಕೆ. ಈ ಬಾರಿ ಚುನಾವಣೆ ಇರುವ ಹಿನ್ನೆಲೆಯಲ್ಲಿ ಮೇ ತಿಂಗಳ ಅಂತ್ಯದಲ್ಲಿ ಮೈಸೂರಿನಲ್ಲಿ ಮಾವಿನ ಮೇಳ ಆಯೋಜಿಸುವ ಸಾಧ್ಯತೆ ಗಳಿದ್ದು, ಈ ಸಂಬಂಧ ಇಲಾಖೆ ಅಧಿಕಾರಿ ಗಳು ರೈತರೊಂದಿಗೆ ಚುನಾವಣೆ ಮುಗಿದ ನಂತರ ಸಭೆ ನಡೆಸಿ, ದಿನಾಂಕವನ್ನು ನಿಗದಿಪಡಿಸುವ ಸಾಧ್ಯತೆಗಳಿವೆ. ಈಗಾ ಗಲೇ ರೈತರು ಮಾವು ಮೇಳ ಆಯೋಜಿ ಸುವಂತೆ ಇಲಾಖೆ ಮೊರೆ ಹೋಗಿದ್ದಾರೆ.

ಭಾರತದಲ್ಲಿಯೇ ಶೇ.59ರಷ್ಟು ಮಾವು ಬೆಳೆ ಯುತ್ತಾರೆ. ಮಾವಿನಲ್ಲಿ ಪೊಟ್ಯಾಷಿಯಂ, ಕ್ಯಾಲ್ಸಿಯಂ, ಪಾಸ್ಪರಸ್ ಮತ್ತು ಕಾರ್ಬೋ ಹೈಡ್ರೇಡ್ ಪೌಷ್ಠಿಕಾಂಶಗಳು ಹೆಚ್ಚಿರುವ ಕಾರಣದಿಂದ ಎಲ್ಲರ ನೆಚ್ಚಿನ ಹಣ್ಣಾಗಿದೆ.

ಕಳೆದ ಬಾರಿಯ ಬೆಲೆ(ಕೆ.ಜಿಗೆ): ಮಾವಿನ ಪ್ರಮುಖ ತಳಿಗಳಾದ ಬಾದಾಮಿ 80 ರೂ., ಅಲ್ಫೋನ್ಸ್ 160, ರಸಪುರಿ 50ರಿಂದ 60 ರೂ., ಮಲ ಗೋಬಾ 80 ರೂ.ಗಳಿತ್ತು.

ಈ ಬಾರಿ ಬೆಲೆ (ಕೆ.ಜಿಗೆ): ಬಾದಾಮಿ 160ರೂ., ಅಲ್ಫೋನ್ಸ್ 220, ರಸಪುರಿ 120ರಿಂದ 140 ರೂ., ಮಲಗೋಬಾ 180ರಿಂದ 200 ರೂ., ಸಿಂಧೂರಿ 180 ರೂ. ಹೆಚ್ಚಳವಾಗಿದೆ. ಮಾರುಕಟ್ಟೆಗೆ ನೀಲಂ ಮತ್ತು ರೋಮೋನಿ ಎಂಬ ಎರಡು ತಳಿಯ ಮಾವು ಬರಬೇಕಿದೆ.



ಮಾವಿನ ಮೇಳ ಏರ್ಪಡಿಸುವಂತೆ ಈಗಾಗಲೇ ರೈತರು ಮನವಿ ಮಾಡುತ್ತಿದ್ದಾರೆ. ಚುನಾವಣೆ ಘೋಷಣೆಯಾಗಿರುವುದರಿಂದ ಈ ಬಾರಿ ತಡವಾಗಿದೆ. ಚುನಾವಣೆ ನಂತರ ಮೇ11 ರಂದು ರೈತರ ಸಭೆ ಕರೆದು ನಂತರ ಮೇ19 ರಂದು ಮಾವಿನ ಮೇಳ ಏರ್ಪಡಿಸುವ ಚಿಂತನೆ ಇದೆ.
–ಕೆ.ರುದ್ರೇಶ್, ಸಹಾಯಕ ನಿರ್ದೇಶಕ, ತೋಟಗಾರಿಕಾ ಇಲಾಖೆ

ಮಳೆಯ ಪರಿಣಾಮ ಮಾರುಕಟ್ಟೆಗೆ ಹಣ್ಣುಗಳು ಕಡಿಮೆ ಬಂದಿದ್ದು, ಬೆಲೆಯೂ ಹೆಚ್ಚಳವಾಗಿದೆ. ಗ್ರಾಹಕರು ಮಳೆಯ ನಂತರ ಹಣ್ಣು ತಿನ್ನುವ ವಾಡಿಕೆ ಬೆಳೆಸಿಕೊಂಡಿರುವುದರಿಂದ ವ್ಯಾಪಾರವೂ ಕಡಿಮೆ ಇದೆ.
– ಯಾಸಿನ್, ಹಣ್ಣಿನ ವ್ಯಾಪಾರಿ

ಪ್ರತಿ ಬಾರಿಯೂ ಮಾವಿನ ಹಣ್ಣಿನ ಬೆಲೆ ಏರಿಕೆ ಆಗುತ್ತಲೇ ಇರುತ್ತದೆ. ಆದರೂ ಮಾವಿನ ಪ್ರಿಯರಾಗಿರುವುದರಿಂದ, ಸವಿಯುವುದನ್ನು ಮುಂದುವರೆಸಿದ್ದೇವೆ. **–ರಮೇಶ್, ಗ್ರಾಹಕ**



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಪರ ಕೂರ್ಗಳ್ಳಿ, ಕೆಹೆಚ್‌ಬಿ ಬಡಾವಣೆಯಲ್ಲಿ ಮತಯಾಚನೆ ಮಾಡಲಾಯಿತು. ಚಿತ್ರದಲ್ಲಿ ಜಿಪಂ ಮಾಜಿ ಅಧ್ಯಕ್ಷ ಮಹದೇವು, ಉಪಾಧ್ಯಕ್ಷ ಪಿ.ಮಹದೇವು, ಮುಖಂಡರಾದ ಚಿಕ್ಕಣ್ಣೇಗೌಡ, ಟಿ.ಕೃಷ್ಣ, ನಾಗರತ್ನ, ಶಿವಕುಮಾರ್, ಮಹದೇವು, ಹೇಮಂತ್, ಲಕ್ಷ್ಮಣ, ರಾಧಾ ಕೃಷ್ಣಕುಮಾರ್, ಸಾಜಿ ಇನ್ನಿತರರು ಹಾಜರಿದ್ದರು.



ಎನ್‌ಆರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ ಉದಯಗಿರಿಯಲ್ಲಿ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಹಿಮಪಾತ: ಕೇದಾರನಾಥ ಯಾತ್ರೆ ಸ್ಥಗಿತ

ನವದೆಹಲಿ, ಮೇ 3– ಕೇದಾರನಾಥದಲ್ಲಿ ಕಳೆದ 2 ದಿನಗಳಿಂದ ನಿರಂತರ ಹಿಮಪಾತವಾಗುತ್ತಿರುವ ಹಿನ್ನೆಲೆಯಲ್ಲಿ ಮೇ 3ರಂದು ಯಾತ್ರೆ ಸ್ಥಗಿತಗೊಳಿಸಲಾಗಿದ್ದು, 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಹಿಮಪಾತದಿಂದ ಕೇದಾರ



ನಾಥದಲ್ಲಿ ಚಳಿ ಹೆಚ್ಚಾಗಿದ್ದು, ಇದರಿಂದಾಗಿ ಅಲ್ಲಿಗೆ ಯಾತ್ರೆಗೆ ಹೋಗುವವ ರಿಗೂ ಸಮಸ್ಯೆಗಳು ಎದುರಾಗಿವೆ. ಹಿಮಪಾತ ಹಿನ್ನೆಲೆಯಲ್ಲಿ ಸುರಕ್ಷಿತ ಸ್ಥಳಗಳಲ್ಲಿ ಉಳಿದುಕೊಳ್ಳುವಂತೆ ಯಾತ್ರಾರ್ಥಿಗಳಿಗೆ ಸಲಹೆ ನೀಡಲಾಗುತ್ತಿದೆ. ಈ ಹಿಂದೆ ಏ.30ರವರೆಗೆ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ ಹಿಮಪಾತ ಹಿನ್ನೆಲೆಯಲ್ಲಿ ಯಾತ್ರಿಕರ ನೋಂದಣಿ ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿ ಗಳು ತಿಳಿಸಿದ್ದಾರೆ. ಹವಾಮಾನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನೋಂದಣಿ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ರುದ್ರಪ್ರಯಾಗ್ ಜಿಲ್ಲಾ ಮ್ಯಾಜಿ ಸ್ಟ್ರೇಟ್ (ಡಿಎಂ) ಮಯೂರ್ ದೀಕ್ಷಿತ್ ತಿಳಿಸಿದ್ದಾರೆ. ರಿಷಿಕೇಶದಲ್ಲಿರುವ ಪ್ರಯಾ ಣಿಕರ ನೋಂದಣಿ ಕೇಂದ್ರದಲ್ಲಿ ಬದರಿನಾಥ್, ಗಂಗೋತ್ರಿ ಮತ್ತು ಯಮುನೋತ್ರಿ ಧಾಮಕ್ಕೆ ಮಾತ್ರ ನೋಂದಣಿ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ. ಹವಾಮಾನ ಇಲಾಖೆಯು ಮುಂದಿನ 2–3 ದಿನಗಳ ಕಾಲ ಹಿಮಾಲಯದ ಎತ್ತರದ ಪ್ರದೇಶಗಳಲ್ಲಿ ಮಳೆ ಮತ್ತು ಹಿಮಪಾತದ ಎಚ್ಚರಿಕೆಯನ್ನು ನೀಡಿದೆ.

ಕೋವಿಡ್ ನಿರ್ವಹಣೆ ವೇಳೆ ಕೋಟ್ಯಾಂತರ ರೂ. ಅವ್ಯವಹಾರ ಆರೋಪ

ಬಿಎಸ್‌ವೈ ಸೇರಿದಂತೆ 28 ಜನರ ವಿರುದ್ಧ ಲೋಕಾಯುಕ್ತಗೆ ದೂರು

ಬೆಂಗಳೂರು, ಮೇ 3– ಬರೋಬ್ಬರಿ 821.22 ಕೋಟಿ ಬೃಹತ್ ಮೊತ್ತದ ಹಗ ರಣ ನಡೆಸಿದ ಆರೋಪ ಹಿನ್ನೆಲೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವರು ಮತ್ತು ಐಎಎಸ್ ಅಧಿಕಾರಿಗಳು ಸೇರಿದಂತೆ ಒಟ್ಟು 28 ಜನರ ವಿರುದ್ಧ ಲೋಕಾಯುಕ್ತಗೆ ದೂರು ನೀಡಲಾಗಿದೆ. ದಾಖಲೆ ಸಮೇತ ಆರ್‌ಟಿಐ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಎನ್ನುವವರಿಂದ ಲೋಕಾ ಯುಕ್ತಕ್ಕೆ ದೂರು ನೀಡಲಾಗಿದೆ.



ಕೋವಿಡ್ ನಿರ್ವಹಣೆ ವೇಳೆ ಬಿಬಿಎಂಪಿ ಯಿಂದ ಕೋಟ್ಯಂತರ ಅವ್ಯವಹಾರ, ಆಂಬ್ಯು ಲೆನ್ಸ್ ಖರೀದಿ ನೆಪದಲ್ಲಿ ಹೆಚ್ಚಿನ ವಾಹನ ಗಳ ಸಂಖ್ಯೆ ತೋರಿಸಿದ್ದಾರೆ. ಆ ಸಂದರ್ಭ ದಲ್ಲಿ ಯಡಿಯೂರಪ್ಪ ಕೋವಿಡ್ ವಲಯ ವಾರು ಉಸ್ತುವಾರಿಯಾಗಿದ್ದರು. ಸಚಿವರಾದ ವಿ.ಸೋಮಣ್ಣ ಅಶ್ವತ್ಥ್ ನಾರಾಯಣ, ಸುರೇಶ್ ಕುಮಾರ್, ಎಸ್.ಟಿ.ಸೋಮಶೇಖರ್, ಗೋಪಾಲಯ್ಯ ಜೋನಲ್ ಮ್ಯಾನೇಜ್ ಮೆಂಟ್ ನಿರ್ವಹಿಸಿದ್ದರು ಎಂದಿದ್ದಾರೆ.

ಆಂಬುಲೆನ್ಸ್‌ಗಳ ಖರೀದಿಗೆ ನಕಲಿ ದಾಖಲೆ ಸೃಷ್ಟಿ: IAS ಅಧಿಕಾರಿಗಳಾದ ಗೌರವ್ ಗುಪ್ತಾ, ಪಿ.ಸಿ.ಜಾಫರ್, ಮನೋಜ್‌ಕುಮಾರ್ ಮೀನಾ, ರವಿಕುಮಾರ್, ವಿ.ಅನ್ಬುಕುಮಾರ್, ಉಜ್ವಲ್‌ಕುಮಾರ್, ಪಂಕಜ್‌ಕುಮಾರ್ ಕೋ– ಆರ್ಡಿನೇಟ್ ಮಾಡುತ್ತಿದ್ದರು. 821 ಕೋಟಿಗೂ ಹೆಚ್ಚು ಅವ್ಯವಹಾರದಲ್ಲಿ 28 ಜನರು ಭಾಗಿ ಯಾಗಿದ್ದಾರೆ. ಕೋವಿಡ್ ವೇಳೆ ಬೆಂಗಳೂ ರನ್ನು 8 ವಲಯಗಳಾಗಿ ವಿಂಗಡಿಸಿದ್ದರು. ಸಾವಿರಾರು ಆಂಬುಲೆನ್ಸ್‌ಗಳನ್ನು ಖರೀ ದಿಸಿರುವುದಾಗಿ ನಕಲಿ ದಾಖಲೆ ಸೃಷ್ಟಿಸಿದ್ದಾರೆ.



ಸರ್ಕಾರಿ ಅಧಿಕಾರಿಗಳು ಭಾಗಿ ಆರೋಪ: ಆಂಬುಲೆನ್ಸ್ ಹೊರ ತಾದ ವಾಹನಗಳ ನೋಂದಣಿ ಸಂಖ್ಯೆ ಗಳಿವೆ. ಬಿಎಸ್‌ವೈ ಪುತ್ರ ಬಿ.ವೈ.ವಿಜ ಯೇಂದ್ರ ಆಪ್ತ ನಕಲಿ ದಾಖಲೆ ಸೃಷ್ಟಿಸಿ ದ್ದಾರೆ. ಹಗರಣದಲ್ಲಿ ಬಹುಪಾಲು ಸರ್ಕಾರಿ ಅಧಿಕಾರಿಗಳು ಭಾಗಿಯಾಗಿದ್ದಾರೆ. ಕೋವಿಡ್ ವೇಳೆ ಜನರ ಹೆಣ ಮಾರಿ ಹಣ ಮಾಡಿ ದ್ದಾರೆ. ಟ್ರಾವೆಲ್ಸ್‌ನಲ್ಲಿ ಖರೀದಿ ಮಾಡಿ ರುವುದಾಗಿ ದಾಖಲೆ ಸೃಷ್ಟಿಸಿದ್ದಾರೆ. ಲೋಕಾ ಯುಕ್ತ ಅಧಿಕಾರಿಗಳು FIR ದಾಖಲಿಸಿ ತನಿಖೆ ಮಾಡಬೇಕಿದೆ. ಒಂದು ವೇಳೆ ದಾಖ ಲಿಸದಿದ್ದರೆ ಮುಂದೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಚ್ಚರಿಕೆ ನೀಡಲಾಗಿದೆ.

ನಾಗೇಂದ್ರ, ಶ್ರೀವತ್ಸ, ಸಂದೇಶ್ ಸ್ವಾಮಿ, ಕವೀಶ್‌ಗೌಡರ ಪರ ಮತ ಯಾಚಿಸಿ ಮಾಜಿ ಸಿಎಂ ಯಡಿಯೂರಪ್ಪ ವೀಡಿಯೋ ಸಂದೇಶ

ಮೈಸೂರು, ಮೇ 3–ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬಿಜೆಪಿ ಅಭ್ಯರ್ಥಿಗಳಾದ ಕೆ.ಆರ್.ಕ್ಷೇತ್ರದ ಶ್ರೀವತ್ಸ, ಎನ್.ಆರ್. ಕ್ಷೇತ್ರದ ಸಂದೇಶ್‌ಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಕವೀಶ್ ಗೌಡ ಮತ್ತು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಪರ ಮತ ಯಾಚಿಸಿ ವೀಡಿಯೋ ಸಂದೇಶ ರವಾನಿಸಿದ್ದಾರೆ.



ಶ್ರೀವತ್ಸ ಕೆ.ಆರ್.ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ. 35 ವರ್ಷ ಗಳಿಂದ ಬಿಜೆಪಿಯ ಸಾಮಾನ್ಯ ಕಾರ್ಯಕರ್ತನಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೆ.ಆರ್.ಕ್ಷೇತ್ರದ ಮಹಾ ಜನತೆ ಅವರನ್ನು ಅತ್ಯಂತ ಬಹುಮತದಿಂದ ಗೆಲ್ಲಿಸಿಕೊಡಬೇಕೆಂದು ನಿಮ್ಮೆಲ್ಲರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಸಂದೇಶ್ ಸ್ವಾಮಿ ಎನ್.ಆರ್.ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ. ಅಭಿವೃದ್ಧಿ ಮಾಡದ ಕುಟುಂಬದ ಆಡಳಿತವನ್ನು ಅಂತ್ಯಗೊಳಿಸಿ ಸಂದೇಶ್ ಸ್ವಾಮಿಯವರನ್ನು ಗೆಲ್ಲಿಸಿ. ಕಳೆದ ಚುನಾವಣೆಯಲ್ಲಿ ಕಡಿಮೆ ಮತಗಳ ಅಂತರದಿಂದ ಪರಾಭವಗೊಂಡಿದ್ದು, ಇವರನ್ನು ಗೆಲ್ಲಿಸಿ ಎನ್.ಆರ್.ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಿ ಎಂದು ಮಹಾ ಜನತೆಯಲ್ಲಿ ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ.

ವಿ. ಕವೀಶ್‌ಗೌಡ ಅವರು ನಮ್ಮ ಬಿಜೆಪಿ ಪಕ್ಷದ ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ. ಯುವಕರಿಗೆ ಅವಕಾಶ ಮಾಡಿಕೊಡುವಂತಹದ್ದು ಜನತೆಯ ತೀರ್ಮಾನವಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಯುವಕ ಕವೀಶ್‌ಗೌಡ ಚಾಮುಂಡೇಶ್ವರಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯಲು ಸಿದ್ಧರಿದ್ದಾರೆ. ಕ್ಷೇತ್ರದ ಜನತೆ ಅವರಿಗೆ ಆಶೀರ್ವಾದ ಮಾಡಿ ಗೆಲ್ಲಿಸಿಕೊಡಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

ಎಲ್.ನಾಗೇಂದ್ರ ಅವರು ಮೂರು ಬಾರಿ ಮೈಸೂರು ಮಹಾನಗರ ಪಾಲಿಕೆಯ ಸದಸ್ಯರಾಗಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಶಾಸಕರಾಗಿ ಅತೀ ಹೆಚ್ಚು ಅನುದಾನ ತಂದು ಚಾಮರಾಜ ಕ್ಷೇತ್ರವನ್ನು ಹಿಂದೆಂದೂ ಕಾಣದಂತಹ ಅಭಿವೃದ್ಧಿ ಮಾಡಿದ್ದಾರೆ. ಪ್ರಾಮಾಣಿಕ, ಸರಳ ವ್ಯಕ್ತಿಯಾದ ಇವರನ್ನು ಮತ್ತೊಮ್ಮೆ ಗೆಲ್ಲಿಸುವ ಮೂಲಕ ಜನ ಸೇವೆಗೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುವುದಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನಾಲ್ವರು ಅಭ್ಯರ್ಥಿಗಳ ಪರ ಪ್ರತ್ಯೇಕ ವೀಡಿಯೋ ಸಂದೇಶ ರವಾನಿಸಿದ್ದಾರೆ.

ಮಾಜಿ ಸಿಎಂ ಸಿದ್ದರಾಮಯ್ಯ ಸೋಲಿಸಲು ಸಂಚು

ವರುಣ ಕ್ಷೇತ್ರಾದ್ಯಂತ ಸಿದ್ದರಾಮಯ್ಯ ಪರ ಮತಯಾಚಿಸಿದ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಮೈಸೂರು, ಮೇ 3(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವನ್ನು ಸಾಕಾರ ಗೊಳಿಸುವ ನಿಟ್ಟಿನಲ್ಲಿ ಸಾಮಾಜಿಕ ಪರಿಕಲ್ಪನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮಾಜಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರನ್ನು ಸೋಲಿಸಲೇಬೇಕೆಂದು ಎಲ್ಲಾ ಪಕ್ಷಗಳು ಹುನ್ನಾರ ನಡೆಸಿವೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪಿಸಿದ್ದಾರೆ.

ವರುಣ ಕ್ಷೇತ್ರದ ತಗಡೂರು, ಗೋಣಳ್ಳಿ, ಆಲಂ ಬಳ್ಳಿ ಗ್ರಾಮದಲ್ಲಿ ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರ ಬಿರುಸಿನ ಮತಯಾಚನೆ ನಡೆಸಿ ಮಾತನಾಡಿದ ಅವರು, ಶೋಷಿತರು, ದೀನದಲಿತರು, ದಮನಿತರು, ಬಡವರು, ರೈತರ ಹಿತ ಕಾಪಾಡುವಲ್ಲಿ ಸಿದ್ದರಾಮಯ್ಯ ಇಂದಿಗೂ ಶ್ರಮಿಸುತ್ತಿದ್ದಾರೆ. ಇದನ್ನು ಸಹಿಸದ ಮತೀಯ ಶಕ್ತಿಗಳು ಈ ಚುನಾವಣೆಯಲ್ಲಿ ಹೇಗಾದರೂ ಮಾಡಿ ಸಿದ್ದರಾಮಯ್ಯ ಅವರನ್ನು ಸೋಲಿಸಲೇಬೇಕೆಂದು ಸಂಚು ನಡೆಸಿವೆ. ಇದಕ್ಕೆ ವರುಣ ಕ್ಷೇತ್ರದ ಜನತೆ ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ದಯಮಾಡಿ ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೇ ಹಸ್ತದ ಗುರುತಿಗೆ ಮತ ನೀಡುವ ಮೂಲಕ ಸಿದ್ದರಾಮಯ್ಯಗೆ ಆಶೀರ್ವಾದ ಮಾಡಿ ಹೆಚ್ಚು ಮತಗಳಿಂದ ಆಯ್ಕೆ ಮಾಡಿ ಮತ್ತೊಮ್ಮೆ ಮುಖ್ಯ ಮಂತ್ರಿಯಾಗಿ ರಾಜ್ಯವನ್ನು ಅಭಿವೃದ್ಧಿಪಡಿಸಲು



ಸಹಕರಿಸಬೇಕೆಂದು ಮನವಿ ಮಾಡಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತ ನಾಡಿ, ರಾಜ್ಯದಲ್ಲಿ 4 ದಶಕಗಳ ನಂತರ 5 ವರ್ಷ ಅಧಿಕಾರಾವಧಿ ಪೂರ್ಣಗೊಳಿಸಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಸಿದ್ದರಾಮಯ್ಯ ಪಾತ್ರರಾಗಿದ್ದಾರೆ. ಬಡವರ ಮೇಲೆ ಕಾಳಜಿ ಹಾಗೂ ಅನುಕಂಪ ಹೊಂದಿ ದ್ದರಿಂದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ಹೊತ್ತಿನಲ್ಲೇ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದರು. ಹಲವು ಜನಪ್ರಿಯ ಯೋಜನೆ ಗಳನ್ನು ಅನುಷ್ಠಾನಗೊಳಿಸಿದರು. ದೇಶದ ಕೆಲವು ರಾಜ್ಯಗಳು ಸಿದ್ದರಾಮಯ್ಯ ಜಾರಿಗೆ ತಂದ ಕೆಲ ಯೋಜನೆಗಳನ್ನು ತಮ್ಮ ರಾಜ್ಯಗಳಲ್ಲಿ ಜಾರಿ ಗೊಳಿಸಿವೆ. ಇಂದಿರಾ ಕ್ಯಾಂಟೀನ್ ಕುರಿತು ಅಂತರ ರಾಷ್ಟ್ರೀಯ ಮಾಧ್ಯಮಗಳಲ್ಲಿ ಮೆಚ್ಚುಗೆಯ ವರದಿ ಗಳು ಪ್ರಕಟವಾಗಿವೆ ಎಂದರು.

ಕೇಂದ್ರದ ಬಿಜೆಪಿ ನಾಯಕರು ಚುನಾವಣೆ ಸಂದರ್ಭ ದಲ್ಲಿ ಭ್ರಷ್ಟಾಚಾರ ಅಸ್ತ್ರ, ಮೀಸಲಾತಿ ಹೆಚ್ಚಳ, ಹಂಚಿಕೆ ಅಸ್ತ್ರ ಪ್ರಯೋಗಿಸುತ್ತಿವೆ. ಇದನ್ನು ಜನ ನಂಬುವು ದಿಲ್ಲ. ಇಷ್ಟು ದಿನ ಯಾಕೆ ಸುಮ್ಮನೆ ಇದ್ದಿರಿ ಎಂದು ಪ್ರಶ್ನಿಸುತ್ತಿದ್ದಾರೆ. ಹಾಗಾಗಿ ಬಿಜೆಪಿ ಸರ್ಕಾರದ ಭ್ರಷ್ಟಾ ಚಾರಕ್ಕೆ ಕಡಿವಾಣ ಹಾಕಲು ರಾಜ್ಯದ ಸಂಪತ್ತನ್ನು ಉಳಿಸಲು ಹಾಗೂ ಎಲ್ಲಾ ವರ್ಗ ಬಡವರ ಹಿತ ಕಾಯಲು ಬದ್ಧವಾಗಿರುವ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು. ಅದರಲ್ಲೂ ವರುಣ ಕ್ಷೇತ್ರದಲ್ಲಿ ಸಮಾಜ ದಲ್ಲಿ ಅಶಾಂತಿ ಕದಡುವ ಮೂಲಕ ರಾಜಕೀಯ ಲಾಭ ಮಾಡಿಕೊಳ್ಳಲು ನಡೆಸುತ್ತಿರುವ ಸಂಚಿನ ಬಗ್ಗೆ ಜಾಗೃತರಾಗಬೇಕು. ನಿಮ್ಮ ಊರಿನವರಾದ ಸಿದ್ದ ರಾಮಯ್ಯ ಕೊನೆ ಚುನಾವಣೆಯಲ್ಲಿ ಗೆಲುವು ತಂದು ಕೊಟ್ಟು ಗೌರವಯುತವಾದ ನಿವೃತ್ತಿಗೆ ಕ್ಷೇತ್ರದ ಜನತೆ ಕಾರಣರಾಗಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಪುಟ್ಟರಂಗ ಶೆಟ್ಟಿ, ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಗ್ರಾ.ಪಂ. ಅಧ್ಯಕ್ಷೆ ಸರಸ್ವತಿ ಮಹೇಶ್, ಉಪಾಧ್ಯಕ್ಷೆ ರತ್ನಮ್ಮ ರವಿಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಅನಿಲ್‌ಬೋಸ್, ಬಾಲು, ನಾಗಣ್ಣ, ನಾರಾಯಣನಾಯ್ಕ, ಶಿವರಾಂ, ಆರ್. ಮಹದೇವ, ತಗಡೂರು ಪುಟ್ಟಣ್ಣ, ಚಿನ್ನಂಬಳ್ಳಿ ರಾಜು, ಬಿ.ಎಂ. ನಟರಾಜ್, ಕೆಂಪಣ್ಣ, ಹಳೆಕಾಮನ ಕೊಪ್ಪಲು ಕರೀಗೌಡ, ಚಂದ್ರಶೇಖರ್, ಶಿಂಷಾ ದಿನೇಶ್, ಸಚಿನ್, ರಟ್ನಳ್ಳಿ ಮಹದೇವ್, ಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಮಾಣಿಯೊಡನೆ) ಕಾಫಿ ಬಹಳ ಬಿಸಿ ಇದೆ. ಬೇಗ ಕುಡಿಯೋಕಾಗಲ್ಲ. ನಾನು ಬೆಳಗಾಂ ಬಸ್ ಹಿಡಿಯಬೇಕು. ಆಗುತ್ತೋ?
ಮಾಣಿ: ಆಗಬಹುದು. ಆದರೆ ನೀವು ಬಹಳ ಜೋರಾಗಿ ಓಡಬೇಕಾಗುತ್ತೆ. ಬೆಳಗಾಂ ಬಸ್ ಐದು ನಿಮಿಷಕ್ಕೆ ಮೊದಲೇ ಹೋಯ್ತು!

ಮೈಸೂರು ಮಿತ್ರ
ಗುರುವಾರ, 4 ಮೇ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........
ಮಹತ್ಕಾರ್ಯಗಳೆಲ್ಲವೂ ಮುಗಿಯುತ್ತವೆ ಎಂಬ ನಂಬಿಕೆಯಿಂದಲೇ ಪ್ರಾರಂಭ ಮಾಡುವುದು. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪಥ್ಯ ಮಾಡಿ ಪಿತ್ತ ಹೆಚ್ಚಿತು

ನಿಮ್ಮ ಪತ್ರಗಳು

ಜನರಿಗೆ ಲಭ್ಯವಾಗದ ಸರ್ಕಾರಿ ಆಯುಷ್ ಆಸ್ಪತ್ರೆ ಸೇವೆ

ಮಾನ್ಯರೇ,

ಮೈಸೂರು ನಗರದ ಬೃಂದಾವನ ಬಡಾವಣೆ, ಕೆ.ಆರ್.ಎಸ್ ರಸ್ತೆಯಲ್ಲಿರುವ ಸರ್ಕಾರಿ ಆಯುಷ್ ಇಲಾಖೆಯ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯು ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ಸೇವೆಗಳನ್ನು ಒದಗಿಸುತ್ತಿಲ್ಲ. ಸರ್ಕಾರದಿಂದ ಬೇಕಾದಷ್ಟು ಅನುದಾನ ಬಂದರೂ ಸಹ ಸೂಕ್ತವಾದ ರೀತಿಯ ಸೌಕರ್ಯ, ಸವಲತ್ತುಗಳು ಇರುವುದಿಲ್ಲ. ಇಲ್ಲಿ ಸುಸಜ್ಜಿತವಾದ ಕಟ್ಟಡವಿದ್ದು, ಅಲ್ಲಿನ ಸಿಬ್ಬಂದಿಗಳು ರೋಗಿಗಳಿಗೆ ಸರಿಯಾದ ರೀತಿಯಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸದೇ ಲೋಪವೆಸಗುತ್ತಿದ್ದಾರೆ.

ಆಯುಷ್ ಇಲಾಖೆಯು ಇಂಗ್ಲೀಷ್ ಔಷಧಗಳನ್ನು ಹೊರತುಪಡಿಸಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಮೂಲಕ ಸಾರ್ವಜನಿಕರ ಆರೋಗ್ಯವನ್ನು ಸುಧಾರಿಸುವ ನಿಟ್ಟಿನಲ್ಲಿ ಹಲವಾರು ರೀತಿಯ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಮೈಸೂರಿನಲ್ಲಿ ನೆಲೆ ನಿಂತಿರುವ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯು ಸಾರ್ವಜನಿಕರ ಸೇವೆಗೆ ದುಸ್ತರವಾಗಿರುವುದು ವಿಷಾದನೀಯ. ವಿವಿಧ ಯಂತ್ರೋಪಕರಣಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಿದ್ದರೂ ಸಹ ಸಿಬ್ಬಂದಿಗಳ ಸರಿಯಾದ ನಿರ್ವಹಣೆಯ ಕೊರತೆಯಿಂದಾಗಿ ಸೇವೆಗಳನ್ನು ಒದಗಿಸುತ್ತಿಲ್ಲ. ಈ ಬಗ್ಗೆ ಆಯುಷ್ ಇಲಾಖೆಯ ಉನ್ನತ ಅಧಿಕಾರಿಗಳು ಗಮನಹರಿಸಬೇಕಾಗಿದೆ. ಸರ್ಕಾರದ ಕನಿಷ್ಠ ಮೂಲಭೂತ ಸೌಕರ್ಯವಾದ ಆರೋಗ್ಯವನ್ನು ಸಾರ್ವಜನಿಕರಿಗೆ ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ಸವಲತ್ತನ್ನು ಜನತೆಗೆ ತಲುಪಿಸುವ ಜವಾಬ್ದಾರಿ ಇಲಾಖೆಯದ್ದಾಗಿರುತ್ತದೆ. ಈ ಒಂದು ಗುರುತರ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಲೋಪ ಎಸಗಿದ ಅಧಿಕಾರಿಗಳನ್ನು ಅಮಾನತು ಮಾಡಿ ಪ್ರಕೃತಿ ಚಿಕಿತ್ಸೆ ಆಸ್ಪತ್ರೆಯು ಸಾರ್ವಜನಿಕರಿಗೆ ಅಗತ್ಯವಾದ ಸೇವೆಗಳನ್ನು ಒದಗಿಸಲಿ ಎಂದು ಸಾರ್ವಜನಿಕರ ಪರವಾಗಿ ಕೋರುತ್ತೇನೆ.

–ವೇಣು ಬೀರಿಹುಂಡಿ, ಮೈಸೂರು

ಭೂತಾಯಿಯ ನೈರ್ಮಲ್ಯ ಕಾಪಾಡಿ ಯುವಕರೇ

ಮಾನ್ಯರೆ,

ನನ್ನ ಕೃಷಿಕ ಗೆಳೆಯನೊಬ್ಬ ತನ್ನ ಜಮೀನಿಗೆ ಹಾಕುವ ಕೊಟ್ಟಿಗೆ ಗೊಬ್ಬರದಲ್ಲಿ ಬಳಕೆಯಾದ ಶ್ಯಾಂಪೂ ಸ್ಯಾಚೆಟ್‌ಗಳು, ಪ್ಲಾಸ್ಟಿಕ್ ಲೋಟಗಳನ್ನು ಆಯ್ದು ಬೇರ್ಪಡಿಸುವುದೇ ದೊಡ್ಡ ಸಮಸ್ಯೆಯಾಗಿದೆ ಎನ್ನುತ್ತಿದ್ದರು. ಹೌದು ಈಗ ಪ್ರತಿ ಹಳ್ಳಿಯೂ ಪ್ಲಾಸ್ಟಿಕ್ ತ್ಯಾಜ್ಯದಿಂದ ಗಬ್ಬೆದ್ದು ನಾರುತ್ತಿದೆ.

ಈಗ ಪ್ರತಿ ಹಳ್ಳಿಯಲ್ಲಿಯೂ ಜಾತ್ರೆ, ಹಬ್ಬ ಹರಿದಿನಗಳಲ್ಲಿ ಪ್ಲಾಸ್ಟಿಕ್ ಲೋಟಗಳನ್ನು ಬಳಸುವ ಪರಿಪಾಠ ಹೆಚ್ಚಾಗಿದೆ. ಪ್ರತಿ ಹಳ್ಳಿಯ ಮೂಲೆ ಮೂಲೆಗಳಲ್ಲಿ, ತಿಪ್ಪೆ ಗುಂಡಿಗಳಲ್ಲಿ, ಮೋರಿ ಗಟಾರಗಳಲ್ಲಿ, ಬಳಸಿ ಬಿಸಾಡಿದ ಲೋಟಗಳು, ಶ್ಯಾಂಪೂ ಸ್ಯಾಚೆಟ್‌ಗಳು, ಲೇಸ್ ಮತ್ತಿತರೆ ಕುರುಕು ತಿಂಡಿಗಳ ಪೊಟ್ಟಣಗಳ ಕವರ್‌ಗಳು ರಾಶಿಗಟ್ಟಲೇ ಹರಡಿವೆ. ಪಟ್ಟಣಗಳಲ್ಲಿ ಈ ರೀತಿಯ ರಾಶಿಗಳು ಇಲ್ಲವೆಂದಲ್ಲ. ಆದರೆ ಪಟ್ಟಣಗಳಲ್ಲಿ ಸಂಗ್ರಹಿಸಿ ವಿಲೇ ಮಾಡಲು ವ್ಯವಸ್ಥೆ ಇದೆ. ಆದರೆ ಹಳ್ಳಿಗಳಿಗೆ ಈ ವ್ಯವಸ್ಥೆ ಬರಲು ಇನ್ನು ಹಲವಾರು ದಶಕಗಳೇ ಅಥವಾ ಶತಮಾನವೇ ಬೇಕಾಗಬಹುದು. ಅಲ್ಲಿಯವರೆಗೆ ಸ್ವಯಂ ಪ್ರೇರಿತರಾಗಿ ಜನರೇ ಬಳಕೆಯನ್ನು ನಿಯಂತ್ರಿಸಬೇಕು.

ತ್ಯಾಜ್ಯವನ್ನು ಸಮಾರಂಭ ಮುಗಿದ ನಂತರ ಊರ ಹೊರಗಿನ ಕೆರೆ ಬಯಲಿಗೋ ತಿಪ್ಪೆ ಗುಂಡಿಗೋ ಸಾಗಿಸಿದರೆ ಮುಗಿಯಿತು ಎಂಬಂತಿರುತ್ತದೆ ನಮ್ಮ ಹಳ್ಳಿಗಾಡಿನ ಕಾರ್ಯಕ್ರಮದ ಆಯೋಜಕರ ಮನೋಧೋರಣೆ. ನಮ್ಮ ಹಳ್ಳಿಗಾಡಿನ ಯುವ ಜನತೆ ಮಾಡಬೇಕಾದ ತುರ್ತು ಕರ್ತವ್ಯವೆಂದರೆ ತಮ್ಮ ತಮ್ಮ ಹಳ್ಳಿಗಳಲ್ಲಿ ಒಂದು ಬಾರಿ ಬಳಸಿ ಬಿಸಾಡುವ ಏಕ ಬಳಕೆಯ ಪ್ಲಾಸ್ಟಿಕ್ ಬಳಸದಂತೆ ಜಾಗೃತಿ ಮೂಡಿಸುವುದು. ಸಮಾರಂಭಗಳಲ್ಲಿ ನೀರಿನ ಬಾಟಲಿಗಳ ಬದಲು ಶುದ್ಧೀಕರಿಸಿದ 20 ಲೀಟರ್ ನೀರಿನ ಟ್ಯಾಂಕ್‌ಗಳಿಂದ ಪೇಪರ್ ಲೋಟಗಳಲ್ಲಿ ನೀರು ಸರಬರಾಜು ಮಾಡುವಂತೆ ಜಾಗೃತಿ ಮೂಡಿಸಿ ಫಲವತ್ತಾದ ಮಣ್ಣಿನ ನಿರ್ಮಲತೆಯನ್ನು ಕಾಪಾಡಿ. ನಿಮ್ಮ ಮುಂದಿನ ಪೀಳಿಗೆಗೆ ನಿರ್ಮಲ ಪರಿಸರವನ್ನು ನೀಡಿ. ಇಲ್ಲವಾದರೆ ನಗರದ ಜನರಂತೆ ನೀವುಗಳೂ ನರಕಯಾತನೆ ಅನುಭವಿಸಬೇಕಾಗಬಹುದು.

–ಎಸ್.ರವಿ, ವಕೀಲ, ಮೈಸೂರು

ಹಿರಿಯ ನಾಗರಿಕರಿಗೆ ಮಹಾ ದ್ರೋಹವಲ್ಲವೇ?

ಮಾನ್ಯರೆ,

ಭಾರತೀಯ ರೈಲ್ವೆ, ರೈಲು ಪ್ರಯಾಣದಲ್ಲಿ ಹಿರಿಯ ನಾಗರಿಕರಿಗೆ ಇದುವರೆಗೆ ನೀಡುತ್ತಿದ್ದ ರಿಯಾಯ್ತಿಯನ್ನು ರದ್ದುಪಡಿಸಿದ್ದು ಅಕ್ಷಮ್ಯವಲ್ಲವೆ? ಇಳಿ ವಯಸ್ಸಲ್ಲಿ ದುಡಿಮೆಯು ಇಲ್ಲದೆ, ಇತರರ ಆಶ್ರಯಿಸಬೇಕಾದ ಪರಿಸ್ಥಿತಿಯಲ್ಲಿ ಎಲ್ಲಿ ಹೋಗುವುದು ಸ್ವಾಮಿ. ಕನಿಷ್ಠ ಒಂದೆಡೆಯಿಂದ ಇನ್ನೊಂದೆಡೆ ಸಾಗಲು ರಿಯಾಯ್ತಿ ರೈಲು ಪ್ರಯಾಣದ ನೆಮ್ಮದಿಯಲ್ಲಿದ್ದ ನಮಗೆ ಈಗ ಆಘಾತವೇ ಆಗಿದೆ. ಕೂಡಲೇ ಈ ರಿಯಾಯ್ತಿ ಮುಂದುವರೆಸಲು ಕಳಕಳಿ ಮನವಿ ಮಾಡುತ್ತೇವೆ.

–ವೆಂಕಟೇಶ್, ಅಯ್ಯನಹುಂಡಿ, ಮಳವಳ್ಳಿ ತಾಲೂಕು, ಮಂಡ್ಯ ಜಿಲ್ಲೆ

ಮತದಾರರನ್ನು ಜಾಗೃತಗೊಳಿಸಿ

ಮಾನ್ಯರೆ,

2023 ರಾಜ್ಯ ವಿಧಾನಸಭೆ ಚುನಾವಣೆಗೆ ದಿನಗಣನೆ ಪ್ರಾರಂಭವಾಗುತ್ತಿದ್ದಂತೆ ವಿವಿಧ ಪಕ್ಷಗಳು ಆಶ್ವಾಸನೆಯ ಸುರಿಮಳೆಗಳನ್ನೇ ಹರಿಸಿ ಮತಯಾಚನೆ ಮಾಡುತ್ತಿವೆ. ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಪ್ರಾಮಾಣಿಕವಾಗಿ ಚುನಾವಣೆ ನಡೆಸುವುದು ಸಾಧ್ಯವಿಲ್ಲದಂತಾಗಿದೆ ಎಂದು ರಾಜಕೀಯ ಮುಖಂಡರುಗಳು ಹೇಳುವುದನ್ನು ಕೇಳಿದರೆ ಪ್ರಜಾತಂತ್ರ ವ್ಯವಸ್ಥೆ ಎತ್ತ ಸಾಗುತ್ತಿದೆ ಎನಿಸುತ್ತದೆ.!

ಈ ಮಧ್ಯೆ ದಾಖಲೆಗಳು ಇಲ್ಲದ ಹಣ ಪತ್ತೆಯಾಗಿವೆ ಎಂಬುದನ್ನು ಮಾಧ್ಯಮದ ಮೂಲಕ ನೋಡಿದ್ದೇವೆ. ಹಣ ಇಲ್ಲದೆ ಚುನಾವಣೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಮಾಧ್ಯಮದ ಮುಂದೆ ಹೇಳುವ ಮುಖಂಡರ ಮಾತು ಕೇಳಿದರೆ, ಆಧುನಿಕ ಗಾದೆ ಮಾತಾದ "ಓಟಿಗಾಗಿ ನೋಟು" ಎಂಬ ಸ್ಲೋಗನ್ ನೆನಪಿಗೆ ಬರುತ್ತದೆ.

ಪ್ರಜಾಪ್ರಭುತ್ವ ದೇಶದಲ್ಲಿ ಮತದಾನ ಬಹಳ ಪ್ರಮುಖವಾದದ್ದು, ಪ್ರಜೆಗಳೇ ಪ್ರಭುಗಳು, ಮತದಾರರು ಈ ದೇಶದ ಭದ್ರತೆಯ ಬುನಾದಿ ಎಂಬ ಅರಿವಿನ ಪ್ರಜ್ಞೆ ಇರಬೇಕು ಮತ್ತು ಆಮಿಷಗಳಿಗೆ ಮಾರು ಹೋಗುವ ಮತದಾರನಿಗೆ, ದೇಶದ ಹಿತಾಸಕ್ತಿಗೆ ಕೆಲಸ ಮಾಡುವ ಸಮೂಹವು ಅಲ್ಲಲ್ಲಿ ಜಾಗೃತಿ ಮೂಡಿಸುವ ಆಂದೋಲನಗಳನ್ನು ಹಮ್ಮಿಕೊಳ್ಳ ಬೇಕಾಗಿದೆ. ಜನತಂತ್ರ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳು ಜನಸೇವೆ ಮಾಡುವ ಪ್ರತಿನಿಧಿಯಾಗಿ ಇರಬೇಕೆ ಹೊರತು ಜನರ ಮೇಲೆ ಸವಾರಿ ಮಾಡುವ ನಾಯಕನಲ್ಲ ಎಂಬುದನ್ನು ಮತದಾರ ಪ್ರಭುಗಳು ತಿಳಿಯಬೇಕಿದೆ.

ರಾಜ್ಯ ದೇಶದ ಅಭಿವೃದ್ಧಿಗಾಗಿ ಮತ ಚಲಾಯಿಸಬೇಕಾದುದು ಮತದಾರನ ಅಮೂಲ್ಯ ಹಕ್ಕು. ಸಂವಿಧಾನ ಕೊಟ್ಟಿರುವಂತಹ ಮತದಾನ ಹಕ್ಕನ್ನು ಜನತಂತ್ರ ವ್ಯವಸ್ಥೆಯಲ್ಲಿ ಮತದಾರನಿಗೆ ಆಮಿಷಗಳನ್ನು ನೀಡಿ ಅವನ ಹಕ್ಕನ್ನು ಕಸಿದುಕೊಳ್ಳುವುದು ಪ್ರಜಾಪ್ರಭುತ್ವವನ್ನು ಹತ್ಯೆ ಮಾಡಿದ ಹಾಗೆ.

ಇಂತಹ ಚುನಾವಣೆ ಸಂದರ್ಭದಲ್ಲಿ ತಮ್ಮ ಮತದಾನ ಮೌಲ್ಯವನ್ನು ತಿಳಿಸಿಕೊಡಬೇಕಾದದ್ದು ತಿಳಿದಿರುವವರ ಕರ್ತವ್ಯ. ಆಮಿಷಗಳಿಗೆ ಮಾರುಹೋಗದಿರಿ. ದೇಶದ ಭವಿಷ್ಯಕ್ಕೋಸ್ಕರ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಮಾಡಬೇಕಾದದ್ದು ಪ್ರತಿ ಭಾರತೀಯನ ಕರ್ತವ್ಯ ಕೂಡ.

– ಪಿ.ಸಿ. ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ನೀವೂ ನನ್ನನ್ನು ಮರೆಯಲ್ಲ ತಾನೇ...!



> “ ಮರೆವೆಂಬ ಮಾಯಾಂಗನೆಯನ್ನು ಗೆಲ್ಲಲೇಬೇಕೆಂದು ಹಠ ತೊಟ್ಟ ಮನುಷ್ಯ ಕಂಪ್ಯೂಟರ್ ಕಂಡುಹಿಡಿದು, ಅದಕ್ಕೊಂದು ಬ್ರೈನ್ ಸೃಷ್ಟಿಸಿದ. ಅದಕ್ಕೊಂದು ಮೆಮೋರಿ ಕ್ರಿಯೇಟ್ ಮಾಡಿದ. ತಾನು ನೆನಪಿಟ್ಟುಕೊಳ್ಳಬೇಕಾದ ಎಲ್ಲ ಮುಖ್ಯ ವಿಷಯಗಳನ್ನೆಲ್ಲಾ ಕಂಪ್ಯೂಟರ್ ಮೆಮೊರಿಗೆ ತುಂಬಿದ. ಮರೆವೆಂಬ ಮಾಯಾಂಗನೆಯ ಮುಂದೆ ನಿಂತು ತಾನು ಗೆದ್ದೇ ಎಂದು ಗಹಗಹಿಸಿದ. ತಮಾಷೆಯೆಂದರೆ ಸಂಗಾತಿಯಂತೆ ಬಂದ ಮರೆವು ಮನುಷ್ಯನ ಕಿವಿಯಲ್ಲಿ ಹೇಳಿತು! ಎಲ್ಲಿ ನಿನ್ನ ಪಾಸ್‌ವರ್ಡ್, ಪಿನ್ ನಂಬರ್ ಹೇಳು ನೋಡೋಣ! ಎಂದಿತು.

ಕೆಲವೊಮ್ಮೆ ನಮಗೆ ಬೇಡವಾದ ವಿಚಾರಗಳು ನಾವು ಬೇಡವೆಂದರೂ ನಮ್ಮನ್ನೇ ಹುಡುಕಿ ಬಂದು ತಲೆತಟ್ಟಿ ಮಾತಾಡಿಸುತ್ತವೆ. ಬೇಕೇ ಬೇಕು ಎಂದು ನಾವೇ ಬಯಸುವ ಕೆಲವು ವಿಷಯಗಳು ಜಪ್ಪಯ್ಯ ಎಂದರೂ ಹತ್ತಿರ ಬರುವುದಿಲ್ಲ. ಅಂಥ ಸಾವಿರ ಸಾವಿರ ವಿಷಯಗಳಲ್ಲಿ ಈ ಮರೆವು ಮತ್ತು ನೆನಪು ಎರಡೂ ಕೂಡ ನಮ್ಮನ್ನು ಎಗ್ಗುಸಿಗ್ಗಿಲ್ಲದೆ ಆಟವಾಡಿಸಿ ಮಜಾ ತೆಗೆದುಕೊಳ್ಳುತ್ತವೆ. ಹಾಗಂತ ಈ ಎರಡೂ ಕ್ರಿಯೆಗಳ ಫಲಾನುಭವಿಗಳು ಯಾರಪ್ಪ ಎಂದರೆ ಇಡಿಯಾಗಿ ಜಗತ್ತಿನ ಮಾನವಕುಲ. ಅಂದರೆ ಇದು ವಿಶ್ವವ್ಯಾಪಿ. ಇದಕ್ಕೆ ಆ ದೇಶ, ಈ ದೇಶ, ಈ ಭಾಷೆ, ಆ ಭಾಷೆ ಎಂಬ ಗಡಿ ನಿಯಮಗಳ ಕಟ್ಟುಪಾಡಿಲ್ಲ. ಅಂಕೆಶಂಕೆಗಳ ಅಂಜುಗುಳಿತನ ಇಲ್ಲ. ಅಮೆರಿಕಾದ ಅಧ್ಯಕ್ಷನಿಂದ ಹಿಡಿದು ನೈಜೀರಿಯಾದ ಸಾಮಾನ್ಯ ಪ್ರಜೆಯತನಕ ಪೌರಾತ್ಯ–ಪಾಶ್ಚಿಮಾತ್ಯ ಜನಸಂಕುಲದ ತನಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿರುವ ಈ ಮರೆವು ಎಂಬ ಮಹಾಪತಿವ್ರತೆ ಬಹುಶಃ ನಿಮ್ಮ ಬದುಕಿನ ಜೀವದ್ರವ್ಯದಲ್ಲಿ ಸೇರಿ ಏನೇನು ಅನಾಹುತಗಳನ್ನು ಮಾಡಿದ್ದಿರಬೇಕೆಂಬ ಸತ್ಯ ನಿಮಗೇ ಗೊತ್ತಿರಬೇಕು. ಒಂದಂತೂ ಸತ್ಯ. 'ನೀ ಕೊಡೆ ನಾ ಬಿಡೆ' ಎಂಬ ನಾಣ್ನುಡಿಯಂತೆ ಮರೆವು ಎಂಬ ಮೂರಕ್ಷರದ ಪದ 'ನೆನಪು' ಎಂಬ ಮೂರಕ್ಷರದ ಜೊತೆ ನಿತ್ಯ ಸೆಣಸುತ್ತಲೇ ನಮ್ಮನ್ನು ಸತಾಯಿಸುತ್ತಿರುತ್ತದೆ.

ಯಾವ ಘಟನೆಗಳು ನಮ್ಮ ಸ್ಮೃತಿಪಟಲದಿಂದ ಮಾಸಿ ಹೋಗಬಹುದು ಎಂದು ನಾವಂದು ಕೊಳ್ಳುತ್ತೇವೋ ಅದೆಲ್ಲವನ್ನೂ ಒಂದು ಪುಸ್ತಕ ರೂಪದಲ್ಲಿ ಬರೆದಿಟ್ಟುಕೊಳ್ಳುತ್ತೇವಲ್ಲ. ಅಂದರೆ ದಿನನಿತ್ಯ ಡೈರಿ ಬರೆಯುವ ಹವ್ಯಾಸ ರೂಢಿಸಿಕೊಳ್ಳುತ್ತೇವಲ್ಲ ಅದು ಈ ಮರೆವು ಮತ್ತು ನೆನಪುಗಳೆಂಬ ಸಮ್ಮಿಶ್ರಣದ ಪ್ರಸಾದ. ಡೈರಿ ಬರೆದು ನಿತ್ಯದ ಘಟನೆಗಳನ್ನು ಅಕ್ಷರ ರೂಪಕ್ಕಿಳಿಸುವ ಹವ್ಯಾಸ ಬೆಳೆಸಿಕೊಂಡವರನ್ನು ನಾವು ಹೊಗಳಿಕೆಯ ರೂಪದಲ್ಲಿ ಹುರುದುಂಬಿಸುತ್ತೇವೆ ನಿಜ. ಆದರೆ ಎಲ್ಲವನ್ನೂ ನೆನಪಿಟ್ಟುಕೊಳ್ಳಲಾಗದ ಅಸಹಾಯಕ ಮಾನಸಿಕ ಒಳತೋಟಿಗೆ ಹೆದರಿ ಇನ್ನೆಲ್ಲಿ ಈ ಘಟನೆಗಳೆಲ್ಲಾ ಮರೆತು ಹೋಗುತ್ತವೋ ಎಂಬ ಧಾವಂತಕ್ಕೆ ಬಿದ್ದು ಡೈರಿಯಲ್ಲಿ ಎಲ್ಲವನ್ನೂ ದಾಖಲಿಸಿಬಿಡುತ್ತೇವೆ. ಈ ಮರೆವು ಎಂಬ ಮಹಾಪತಿವ್ರತೆ ಸೃಷ್ಟಿಸುವ ಈ ಪರಿಯ ವರಾತಕ್ಕೆ ಒಮ್ಮೆ ಕರ್ನಾಟಕದ ರಾಜಕಾರಣದಲ್ಲಿ 'ಡೈರಿ ರಾದ್ಧಾಂತ' ಸೃಷ್ಟಿಯಾಗಿ ಹೋಗಿತ್ತು. ಬಹುಶಃ ಅದಿನ್ನೂ ನಿಮಗೆ ಮರೆತಿರಲಿಕ್ಕಿಲ್ಲ. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ 'Public memory is very short' ಅಂತ. ಅಂದರೆ ಸಾರ್ವಜನಿಕರು ರಾಷ್ಟ್ರದ, ರಾಜ್ಯದ, ಜಗತ್ತಿನ ವ್ಯಕ್ತಿ ಕೇಂದ್ರಿತ, ಜನಕೇಂದ್ರಿತ ಅಪರೂಪದ ಘಟನೆಗಳನ್ನು ಆದಷ್ಟು ಬೇಗ ಮರೆತುಬಿಡುತ್ತಾರೆ! ದೀರ್ಘ ಕಾಲ ನೆನಪಿಟ್ಟುಕೊಳ್ಳುವುದಿಲ್ಲ ಎಂಬ ಭಾವನೆ. ಒಬ್ಬ ಜನನಾಯಕ ಅಧಿಕಾರದಲ್ಲಿದ್ದಾಗ ಮಾಡಿದ ತಪ್ಪಿಗೆ ಜನ ಆತನನ್ನು ಸೋಲಿಸಿ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿದ್ದೇವೆಂದು ಕೊಳ್ಳುತ್ತಾರೆ. ಆದರೆ ಅದೇ ಮುಂದಿನ ಬಾರಿಗೆ ಏನೆಲ್ಲಾ ವಿಚಾರಗಳಿದ್ದವೋ ಅದೆಲ್ಲವನ್ನೂ ಮರೆತು ಬಹುಮತದಿಂದ ಮತ್ತೆ ಆತನನ್ನೇ ಗೆಲ್ಲಿಸುತ್ತಾರೆ. ಜನ ಎಲ್ಲವನ್ನೂ ಬಹಳ ಬೇಗ ಮರೆಯುತ್ತಾರೆ. ಮರೆವು ಎಂಬ ಈ ಮಾಯಾಂಗನೆಗೆ ಇಡೀ ಸಮಯವನ್ನೇ ತಿರುವು ಮುರುವು ಮಾಡುವ ಚಾಕಚಕ್ಯತೆಯಿದೆ. ಆ ಪರಿಯ ಮರೆವಿನ ಉಡುಗೊರೆ ಜಗತ್ತಿನ ಜೀವಜಾಲವನ್ನು ಸದ್ದಿಲ್ಲದೇ ಆಳುತ್ತಿದೆ. ಯುದ್ಧ ಕಾಲದಲ್ಲಿ ದಶರಥ ಕೈಕೇಯಿಗೆ ವರಕೊಟ್ಟು ಮರೆತು ಹೋದ ವಿವರವನ್ನು ರಾಮಚಂದ್ರನ ಪಟ್ಟಾಭಿಷೇಕದ ದಿನ 'ನೆನಪು' ಎಂಬ ಮಾಯಾಮೃಗ ಮಿಂಚಿನಂತೆ ಸುಳಿದಾಡಿ ರಾಮಾಯಣಕ್ಕೆ ನಾಂದಿ ಹಾಡಿಸಿದ್ದು ಇದೇ ಮರೆವು ಮತ್ತು ನೆನಪುಗಳೆಂಬ ಮಿಂಚಿನ ಓಟಗಳು.

ನಮ್ಮಲ್ಲಿ ಲೇಖಕರಾದವರು ತಮ್ಮ ತಮ್ಮ ಆತ್ಮಚರಿತ್ರೆ ಬರೆದುಕೊಳ್ಳುತ್ತಾರಲ್ಲ! ಅವರಿಗೂ ಈ ಮರೆವಿನ ಹೊಡೆತ ತಾಕಿರುತ್ತದೆ. ಅದರ ನಡುವೆಯೇ ನೆನಪಿಸಿಕೊಂಡು ತಮ್ಮ ಜೀವಿತಾವಧಿಯಲ್ಲಿ ಸಿಕ್ಕ ಅನುಭವಗಳ ಪರಮ ಪಾರಮ್ಯವನ್ನು ಸಿಕ್ಕಿದಷ್ಟು ದಕ್ಕಿಸಿಕೊಳ್ಳುವ ಸೃಷ್ಟಿ ಕ್ರಿಯೆಯಲ್ಲಿ ಅವರು ತೊಡಗುತ್ತಾರೆ. ಅವೇ ಆತ್ಮಚರಿತ್ರೆಗಳು. ಆತ್ಮ ತೆಗೆದುಬಿಟ್ಟರೆ ಇತಿಹಾಸಕಾರರು ದಾಖಲಿಸಿದ ದೇಶದ ಚರಿತ್ರೆಗಳು. ಅಂದರೆ ಮರೆತುಹೋಗುವ ಅಪಾಯಕ್ಕೆ ಹೆದರಿಯೇ ನಡೆದ ಸಂಗತಿಗಳನ್ನು ದಾಖಲಿಸುವ ಚರಿತ್ರಾರ್ಹ ಚರಿತ್ರೆ ಹುಟ್ಟಿಕೊಂಡಿತು.

ಮತ್ತೆ ಮತ್ತೆ ಬಿಡದೇ ಕಾಡುವ ನೆನಪುಗಳೇ ಕವಿತೆಗಳ ವಸ್ತುಗಳಾಗಿ ಎಲ್ಲರಿಂದಲೂ ಒಂದೊಂದು ಕವಿತೆ ಬರೆಸಿಕೊಂಡಿವೆ. ಕನ್ನಡ ಚಿತ್ರರಂಗದಲ್ಲಂತೂ ಈ ನೆನಪಿನ ಮೇಲೆ ನೂರಾರು ಚಿತ್ರಗೀತೆಗಳು ಹುಟ್ಟಿಕೊಂಡಿವೆ. 'ರಾಜಾ ನನ್ನ ರಾಜಾ' ಸಿನಿಮಾ ಈ ನೆನಪು ಮತ್ತು ಮರೆವುಗಳನ್ನು ಇಟ್ಟುಕೊಂಡೇ ಚಿತ್ರೀಕರಿಸಿಕೊಂಡಿದೆ. ಸಂಸ್ಕೃತದ ಮಹಾನಾಟಕ ಕಾಳಿದಾಸನ ಅಭಿಜ್ಞಾನ ಶಾಕುಂತಲಾದ ಎರಡನೇ ಭಾಗ ನಡೆಯುವುದೇ ಈ 'ಮರೆವು' ಎಂಬ ಮಹಾಪತಿವ್ರತೆಯ ಕಾಟದಿಂದ. ಶಕುಂತಲೆಯನ್ನು ಮರೆತ ದುಷ್ಯಂತ ಮುಂದೆ ಅವನ ಮಗನ ಕಾಲಕ್ಕೆ ನೆನಪಿನ ಶಕ್ತಿ ಮರುಕಳಿಸೋದು. ಹಾಗೆ ಮಹಾನ್ ಕೃತಿಗಳ ಸೃಷ್ಟಿಗೆ ಈ ಮರೆವು ಮತ್ತು ನೆನಪು ಎಂಬ ಮೂರಕ್ಷರದ ಪದಗಳ ಒಡನಾಟ ಎಡತಾಕುತ್ತಿರುತ್ತದೆ.

ಮಹಾಕಾವ್ಯಗಳ ಕತೆ ಅರಿತಿರಲಿ ಜನಸಾಮಾನ್ಯರ ಪಾಡೇನು ಗೊತ್ತಾ? ಬೆಳಿಗ್ಗೆ ಎದ್ದ ಕೂಡಲೇ ವಾಷ್‌ರೂಮಿನಲ್ಲಿ ಫ್ರೆಷ್ ಆಗುವವರೆಗೆ ಇರುವ ನೆನಪು, ಮೊಬೈಲ್ ಅನ್ನು ಛಾರ್ಜಿಗೆ ಹಾಕುವುದೇ ಮರೆತು ಹೋಗುತ್ತದೆ. ಕನ್ನಡಕವನ್ನೂ ಮನೆಯಲ್ಲೇ ಬಿಟ್ಟು ಆಫೀಸಿಗೆ ಬಂದು ತಡಕಾಡುತ್ತೇವೆ. ಹೊರಡುವ ಅವಸರದಲ್ಲಿ ನಿನ್ನೆ ಬಿಚ್ಚಾಕಿದ ಪ್ಯಾಂಟಿನಲ್ಲಿರುವ ಪರ್ಸು ನಿರುಮ್ಮಳವಾಗಿ ಅಲ್ಲೇ ಕೂತಿರುತ್ತದೆ. ನೆಗಡಿಯಾಗಿ ಸೀನು ಹೆಚ್ಚಾದಾಗ ಜೇಬಿಗೆ ಕೈಯಿಟ್ಟರೆ ಕರ್ಚಿಫೇ ಮರೆತು ಹೋಗಿರುತ್ತದೆ. ಬ್ಯಾಂಕಿನ ಪಾಸ್‌ಬುಕ್, ಪಾನ್‌ಕಾರ್ಡಿನ ನಂಬರು, ತೀರಾ ಪ್ರೀತಿಪಾತ್ರರ ಬರ್ತ್‌ಡೇ ಡೇಟು, ತಮ್ಮದೇ ಬ್ಲಡ್ ಗ್ರೂಪು, ಒಮ್ಮೊಮ್ಮೆ ಸ್ಕೂಟರಿನ ಕೀ ಇರುವ ಬೀಗದ ಗೊಂಚಲು, ಹೆಂಡತಿ ಹೇಳಿದ ತರಕಾರಿಯ ಲಿಸ್ಟು, ಅಗತ್ಯವಾಗಿ ಕೂಡಲೇ ಸಿಗಬೇಕಾದ ಆಫೀಸಿನ ಫೈಲು, ಯಾವುದೋ ಭ್ರಮೆಯಲ್ಲಿ ಪ್ರೇಯಸಿಗೆ ಕೊಟ್ಟ ಮಾತು, ಸರಿಯಾದ ಡೇಟಿಗೆ ಕಟ್ಟಬೇಕಿದ್ದ ಕರೆಂಟು ಬಿಲ್ಲು; ಫೋನಿನ ರೀಚಾರ್ಜು– ಹೀಗೆ ಒಂದೇ ಎರಡೇ ಚಿಕ್ಕ ಚಿಕ್ಕ ಸಂಗತಿಗಳೆಲ್ಲವನ್ನೂ ಮರೆತೇ ಬಿಡುತ್ತದೆ. ಈ ಮಾಯಾವಿ ಮನಸ್ಸು. ಅದಕ್ಕೆ ಕಾರಣ ಈ ಮರೆವು ಎಂಬ ಮಹಾಪತಿವ್ರತೆ. ಮರೆತದ್ದನ್ನು ಮತ್ತೆ ನೆನಪಿಸುವ ನೆನಪೆಂಬ ಮಾಯಾಂಗನೆ ನೆನಪಾದ ವಸ್ತುಗಳು ನಮ್ಮ ಬಳಿಯಲ್ಲಿ ಇಲ್ಲವೆಂದು ಗೊತ್ತಾದಾಗ ಒತ್ತಡಕ್ಕೆ ಒಳಗಾಗಿ ಮತ್ತೆ ದೌಡಾಯಿಸುವಂತೆ ಮಾಡುತ್ತದೆ.

ಜೀವನದಲ್ಲಿ ಈ ಒಂದನ್ನೂ ಮರೆಯದೆ ಜೀವನ ನಡೆಸಿದ ಪುಣ್ಯಾತ್ಮರಾದರೂ ಇದ್ದರೆ ತಿಳಿಸಿ! ಅವರಿಗೊಂದು ನಮಸ್ಕಾರ ಹೇಳೋಣ. ಪ್ರಾಯಶಃ ಈ ವಿಷಯದಲ್ಲಿ ನಮಸ್ಕಾರಕ್ಕೂ ಜನ ಸಿಗುವುದಿಲ್ಲ. ಅದೆಲ್ಲಾ ಒತ್ತಟ್ಟಿಗಿರಲಿ. ಈ ಸಾರ್ವಜನಿಕ ಜೀವನದಲ್ಲಿರುವ ಸೆಲೆಬ್ರಿಟಿಗಳನ್ನು ಈ ಮರೆವು ಎಂಬ ಮಾಯಾಂಗನೆ ಹೇಗೆ ಆಟವಾಡಿಸುತ್ತಾಳೆ ನೋಡಬೇಕು ನೀವು! ನೂರಾರು ಜನರಿರುವ ಕಾರ್ಯಕ್ರಮಗಳಲ್ಲಿ ಜನ ಕಿಕ್ಕಿರಿದು ತುಂಬಿರುತ್ತಾರೆ. ಅಲ್ಲಿ ತುಂಬಾ ಪರಿಚಿತರು ಕೈಕುಲುಕಿ ಮಾತಾಡಿಸುತ್ತಾರೆ. ಆದರೆ ಇವರಿಗೆ ಅವರ ಹೆಸರಿಡಿದು ಮಾತಾಡಿಸಲು ಅವರ ಹೆಸರೇ ಗೊತ್ತಿರುವುದಿಲ್ಲ. ಕಡೇವರೆಗೂ ಮಾತಾಡಿದ ಮೇಲೂ ಅವರು ಯಾರು ಅಂತ ಗೊತ್ತಾಗದೆ, ಅವರು ಆ ಕಡೆ ಹೋದ ಮೇಲೆ ಪಕ್ಕದಲ್ಲಿರುವ ಇನ್ಯಾರನ್ನೋ ಅವರು ಯಾರು ಎಂದು ಕೇಳಿರುವ ಪ್ರಸಂಗಗಳಿವೆ. ಅದಕ್ಕೆ ಕಾರಣ ಈ ಮರೆವು ಎಂಬ ಮಾಯಾಂಗನೆ. ವೇದಿಕೆಗಳ ಮೇಲೆ ನಿಂತು ಯಾರೊಬ್ಬರ ಹೆಸರು ಹೇಳಲು ಹೊರಟರೆ ಎಲ್ಲರ ಹೆಸರು ಏಕಕಾಲಕ್ಕೆ ನೆನಪಾಗುವುದೇ ಇಲ್ಲ ಇದಕ್ಕೇನಂತೀರಿ? ಇತ್ತೀಚೆಗೆ ಈ ಅಪಾಯದಿಂದ ತಪ್ಪಿಸಿಕೊಳ್ಳಲು ಹೊಸ ವರಸೆ ಶುರುವಾಗಿಬಿಟ್ಟಿದೆ. ಲಗ್ನ ಪತ್ರಿಕೆಯ ಮೇಲೆ ಇವರಿಗೆ ಎಂಬ ಜಾಗದಲ್ಲಿ "ನಿಮ್ಮ ಹೆಸರು ನಮ್ಮ ಮನದಲ್ಲಿದೆ" ಎಂದು ಅಚ್ಚು ಹಾಕಿಸಿಬಿಡುವ ಪರಿಪಾಠ ಬೆಳೆದಿದೆ. ಅಂದರೆ ನಿಜಕ್ಕೂ ಅವರ ಹೆಸರು ಅವರ ಮನದಲ್ಲಿರುತ್ತದೋ ಅಥವಾ ಅವರ ಹೆಸರು ಅವರಿಗೆ ಗೊತ್ತೇ ಇಲ್ಲವೋ! ಯಾವುದೋ ಒಂದು. ಒಟ್ಟಿನಲ್ಲಿ ಆಮಂತ್ರಣ ಪತ್ರಿಕೆ ಕೊಟ್ಟು ಮುಗಿಸಿದರೆ ಸಾಕು ಎನ್ನುವ 'Circumstances management' ಕೋರ್ಸಿನ ಮೊದಲ ಅಧ್ಯಾಯ ನಮ್ಮ ಸಮಾಜದಲ್ಲಿ ತೆರಕೊಂಡಿದೆ. ಅದಕ್ಕೆ ಕಾರಣ ಈ ಮರೆವು ಎಂಬ ಮಾಯಾಂಗನೆ.

ಪ್ರೀತಿಸಿದ ಹುಡುಗ ತನ್ನ ಮೊದಲ ಮಾತಲ್ಲೇ ಆ ಹುಡುಗಿಗೆ ಕೇಳುವ ಮೊದಲ ಮಾತೆ ನನ್ನನ್ನು ಮರೆಯಲ್ಲ ತಾನೆ! ನೋಡಿ ಮರೆವು ಎಂಬ ಈ ಮೂರಕ್ಷರದ ಪದ ಎಷ್ಟೊಂದು ಕಾಟ ಕೊಡುತ್ತೇ ಅಂತ.

ಹೇಗಾದರೂ ಮಾಡಿ ಈ ಮರೆವೆಂಬ ಮಾಯಾಂಗನೆಯನ್ನು ಗೆಲ್ಲಲೇಬೇಕೆಂದು ಹಠ ತೊಟ್ಟ ಮನುಷ್ಯ ಕಂಪ್ಯೂಟರ್ ಕಂಡು ಹಿಡಿದು, ಅದಕ್ಕೊಂದು ಬ್ರೈನ್ ಸೃಷ್ಟಿಸಿದ. ಅದಕ್ಕೊಂದು ಮೆಮೊರಿ ಕ್ರಿಯೇಟ್ ಮಾಡಿದ. ತಾನು ನೆನಪಿಟ್ಟುಕೊಳ್ಳಬೇಕಾದ ಎಲ್ಲ ಮುಖ್ಯ ವಿಷಯಗಳನ್ನೆಲ್ಲಾ ಕಂಪ್ಯೂಟರ್ ಮೆಮೊರಿಗೆ ತುಂಬಿದ. ಮರೆವೆಂಬ ಮಾಯಾಂಗನೆಯ ಮುಂದೆ ನಿಂತು ತಾನು ಗೆದ್ದೇ ಎಂದು ಗಹಗಹಿಸಿದ. ತಮಾಷೆಯೆಂದರೆ ಸಂಗಾತಿಯಂತೆ ಬಂದ ಮರೆವು ಮನುಷ್ಯನ ಕಿವಿಯಲ್ಲಿ ಹೇಳಿತು! ಎಲ್ಲಿ ನಿನ್ನ ಪಾಸ್‌ವರ್ಡ್, ಪಿನ್ ನಂಬರ್ ಹೇಳು ನೋಡೋಣ! ಎಂದಿತು. ನಾವೇ ಫಾಸ್ಟು ಎಂದರೆ ಅದು ನಮಗಿಂತ ಸೂಪರ್ ಫಾಸ್ಟ್, ನಾವೆಷ್ಟೇ ಜಾಗೃತರಾದರೂ ಒಮ್ಮೊಮ್ಮೆ ಪಾಸ್‌ವರ್ಡ್, ಪಿನ್ನೇ ಮರೆತು ಹೋಗುತ್ತದೆ. ಹಾಗೆ ಪಾಸ್‌ವರ್ಡ್, ಪಿನ್ನ್ ನಂಬರ್‌ಗಳು ಮರೆಯಬಾರದೆಂದು ಬರೆದಿಟ್ಟಿದ್ದ ಡೈರಿಯ ಹಾಳೆಯ ಮೇಲೆ ಮಗಳು ಚಿತ್ರ ಬಿಡಿಸಿಟ್ಟಿರುತ್ತಾಳೆ. ಅಲ್ಲೂ ಈ ಮರೆವೆಂಬ ಮಾಯಾಂಗನೆ ನಗುತ್ತಾಳೆ.

ಹೆಚ್ಚಾಗಿ ಓದಿಕೊಂಡ ಬುದ್ಧಿವಂತರಿಗೇನೆ ಈ ಮರೆವಿನ ಸಮಸ್ಯೆ ಕಾಡುವುದರಿಂದ ಸಾಮಾನ್ಯರೂ ಕೂಡ ಪದೇ ಪದೇ ಎಲ್ಲವನ್ನೂ ಮರೆಯುತ್ತಿದ್ದರೆ, ಅಂಥವರನ್ನು 'ಆಬ್ಸೆಂಟ್ ಮೈಂಡೆಡ್ ಪ್ರೊಫೆಸರ್' ಎನ್ನುವ ಬಿರುದಾಂಕಿತವನ್ನು ಉಚಿತ ಉಡುಗೊರೆಯಾಗಿ ಕೊಡುತ್ತಾರೆ ಜನ. ಪ್ರೊಫೆಸರ್‌ಗಳಿಗೆ ಏಕೆ ಇದು ತಗುಲಿಕೊಂಡಿತೋ ಗೊತ್ತಿಲ್ಲ. ಪ್ರೊ. ಅ.ರಾ. ಮಿತ್ರ ಅವರು ತಮ್ಮ ಸಂಕಲ್ಪಗಳು ಎಂಬ ಲಲಿತ ಪ್ರಬಂಧಗಳ ಸಂಕಲನದಲ್ಲಿ ಈ ಮರೆಗುಳಿ ಪ್ರೊಫೆಸರೊಬ್ಬರ ಪ್ರಸಂಗವನ್ನು ಬಹಳ ಹಾಸ್ಯಮಯವಾಗಿ ವಿವರಿಸುತ್ತಾರೆ.

ಬಯಾಲಜಿ ಲ್ಯಾಬ್‌ನಲ್ಲಿ ಪ್ರಯೋಗ ನಿರತರಾಗಿದ್ದ ಪ್ರೊಫೆಸರೊಬ್ಬರು ಆ ದಿನದ ಪ್ರಯೋಗಕ್ಕೆ ಲ್ಯಾಬ್ ಅಟೆಂಡರಿಗೆ ಹೇಳಿ ಕಪ್ಪೆಗಳನ್ನು ತರಿಸಿದ್ದರಂತೆ. ಬೆಳಿಗ್ಗೆಯೇ ಪ್ರಾಯೋಗಿಕ ತರಗತಿ ಇದ್ದುದರಿಂದ ಹೋಟೆಲಿನಿಂದ ತಿಂಡಿಯನ್ನೂ ತರಿಸಿಕೊಂಡಿದ್ದರಂತೆ. ಸತ್ತುಹೋದ ಕಪ್ಪೆಗಳ ಪ್ಯಾಕೆಟನ್ನು, ತಿಂಡಿಯ ಪೊಟ್ಟಣವನ್ನೂ ಲ್ಯಾಬ್ ಟೇಬಲ್ಲಿನ ಮೇಲಿಟ್ಟು ಅಟೆಂಡರ್ ಆಚೆ ಹೋಗಿರುತ್ತಾನೆ. ತಿಂಡಿ ತಿನ್ನಲು ಕುಳಿತ ಪ್ರೊಫೆಸರ್ ತಿಂಡಿ ತಿಂದು ಲ್ಯಾಬ್ ಅಟೆಂಡರ್ ಕರೆದು ಡಿಸ್ಸೆಕ್ಷನ್ ಮಾಡಲಿಕ್ಕೆ ಕಪ್ಪೆ ಮರಿಗಳನ್ನು ತಂದಿದ್ದೀಯಾ? ಎಂದು ಕೇಳಿದರಂತೆ. ಕಪ್ಪೆ ಮರಿಗಳ ಪಾಕೇಟ್, ತಿಂಡಿ ಪಾಕೇಟು ಎರಡನ್ನೂ ಟೇಬಲ್ಲಿನ ಮೇಲಿಟ್ಟಿರುವ ವಿಷಯವನ್ನು ಹೇಳುತ್ತಾನೆ ಅಟೆಂಡರ್. ವಿದ್ಯಾರ್ಥಿಗಳ ಎದುರಿಗೆ ಪ್ರಾಯೋಗಿಕ ಪರೀಕ್ಷೆಗಾಗಿ ತರಿಸಿದ ಕಪ್ಪೆಗಳ ಪಾಕೇಟನ್ನು ಬಿಚ್ಚಿ ನೋಡಿದರೆ, ಪಾಕೇಟಿನಲ್ಲಿ ಕಪ್ಪೆಗಳೇ ಇರುವುದಿಲ್ಲ. ಬದಲಿಗೆ ಇಡ್ಲಿಗಳಿರುತ್ತವೆ. ಅಟೆಂಡರ್, ವಿದ್ಯಾರ್ಥಿಗಳು ಹೌಹಾರುತ್ತಾರೆ. ಆ ಮರೆಗುಳಿ ಪ್ರೊಫೆಸರು ಮರೆತು ಇಡ್ಲಿಯ ಬದಲಿಗೆ ಕಪ್ಪೆಗಳಿರುವ ಪಾಕೇಟ್ ಖಾಲಿಯಾಗಿರುತ್ತವೆ. ಬೇಸ್ತುಬಿದ್ದ ಪ್ರೊಫೆಸರು ತನ್ನ ಮರೆಗುಳಿತನದಿಂದ ಇಡ್ಲಿ ತಿನ್ನಲು ಹೋಗಿ ಕಪ್ಪೆ ತಿಂದು ಫಜೀತಿಗಿಟ್ಟುಕೊಂಡ ಪ್ರಸಂಗವನ್ನು ಹಾಸ್ಯಮಯವಾಗಿ ಬರೆಯುತ್ತಾರೆ. ಓದುಗರೂ ಅದನ್ನು ಹಾಸ್ಯ ಎಂತಲೇ ಪರಿಭಾವಿಸಬೇಕಾಗುತ್ತದೆ. ಅಂದರೆ ಈ ಆಬ್ಸೆಂಟ್ ಮೈಂಡ್ನೆಸ್/ಮರೆಗುಳಿತನ ಅನ್ನೋದು ಎಲ್ಲರನ್ನೂ ಕಾಡುತ್ತದೆ. ಇವತ್ತು ನೆನಪಾಗಬೇಕಾದ ವಿಷಯ ವ್ಯಕ್ತಿ, ಹೆಸರು, ಘಟನೆ, ಪ್ರಸಂಗ, ಹಾಸ್ಯ, ವಿನೋದ, ಎಲ್ಲವೂ ಇನ್ಯಾವತ್ತೋ ನೆನಪಾಗುತ್ತದೆ. ಕೆಲಸಕ್ಕೆ ಬೇಕೆಂದಾಗ ಯಾವುದೂ ನೆನಪಾಗದೆ ಕೈಕೊಡುತ್ತದೆ. ಅದೇ ಈ ಮರೆಗುಳಿತನದ ಸ್ಪೆಷಾಲಿಟಿ. ಈ ಮನುಷ್ಯ ಪ್ರಾಣಿಯನ್ನೂ ಇಷ್ಟಕ್ಕೆ ಯಾಕೆ ಬಿಡಬೇಕು ಎಂದುಕೊಂಡ ಈ ಮರೆವು ಇತ್ತೀಚೆಗೆ! ಅಲ್ಜೈಮರ್ ಎಂಬ ಮರೆಗುಳಿತನದ ಖಾಯಿಲೆಯಾಗಿ ಕಾಡುತ್ತಿದೆ. ವಯಸ್ಸಾದಂತೆ ಅಟಕಾಯಿಸಿಕೊಳ್ಳುವ ಇದು ಬದುಕಿನ ಸುದೀರ್ಘ ಪ್ರಯಾಣದ ಎಲ್ಲ ನೆನಪುಗಳನ್ನು ಅಳಿಸಿ ಹಾಕಿ ಮತ್ತೆ ಮಗುವಿನ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಈ ಸಬ್ಜೆಕ್ಟಿನ ಮೇಲೆಯೇ ತಯಾರಾದ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಎಂಬ ಕನ್ನಡ ಚಲನಚಿತ್ರದಲ್ಲಿ ನಟ ಅನಂತನಾಗ್ ಈ ಮರೆವಿನ ವೈರುಧ್ಯಗಳನ್ನು, ಅಲ್ಜೈಮರ್ ಖಾಯಿಲೆಯ ಅವಾಂತರಗಳನ್ನು ನಟಿಸಿ ತೋರಿಸಿದ ದೃಶ್ಯಗಳನ್ನು ಈ ನೆನಪೆಂಬ ಅಣ್ಣಮ್ಮ ಕಣ್ಣ ಮುಂದೆ ತರುತ್ತಿದೆ. ಆದರೆ ಕಿವಿಯಲ್ಲಿ ಮಾತ್ರ ಕವಿ ಕೆ.ಎಸ್. ನಿಸಾರ್ ಅಹಮದ್ ಅವರು ಬರೆದ ಭಾವಗೀತೆಯ ಸಾಲೊಂದು ನೆನಪಾಗುತ್ತಿದೆ. 'ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ ಹೂಡಿ ಬರದಿರು ಮತ್ತೆ ಹಳೆಯ ನೆನಪೆ ಮರೆವು ಶಾಪವೂ ಅಲ್ಲ! ವರವೂ ಅಲ್ಲ! ಮರೆಗುಳಿತನ ಯಾರನ್ನೂ ಬಿಡುವುದಿಲ್ಲ. ಆದ್ದರಿಂದ ಈ ಜೀವನ ಪ್ರಯಾಣದಲ್ಲಿ ನಿರಂತರವಾಗಿ ಕಹಿನೆನಪುಗಳು ಮರೆಯಲಿ, ಸವಿನೆನಪುಗಳು ಸಾಗಿ ಬರಲಿ. ಎಲ್ಲರಿಗೂ ಆದದ್ದು ನಮಗೂ ಆಗುತ್ತೆ. ನಮಗೆ ಆದದ್ದೂ ಎಲ್ಲರಿಗೂ ಆಗುತ್ತೆ, ಏನಂತೀರಿ?

ಮುಂದೆ ಹೀಗೂ ಉಂಟೆ...; ಉಚಿತ! ಉಚಿತ!! ಉಚಿತ!!!

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ.... ಇವೆಲ್ಲ ಖಚಿತ!!

● ಪ್ರತಿ ಕುಟುಂಬದ ವಿದ್ಯುತ್ ಬಿಲ್, ಫೋನ್ ಬಿಲ್, ವಾಟರ್ ಬಿಲ್ ಉಚಿತ

● ಮಹಿಳೆಯರಿಗೆ "ಬ್ಯೂಟಿ ಭತ್ಯೆ" ಅಂತ ತಿಂಗಳಿಗೆ ಬ್ಯೂಟಿ ಪಾರ್ಲರ್ ವೆಚ್ಚಕ್ಕಾಗಿ ರೂ. 6,000 ನೀಡಲಾಗುವುದು.

● ಕೆಲಸಕ್ಕೆ ಹೋಗುವ ಗಂಡಸರ ಕೆಲಸ ಬಿಡಿಸಿ ಅವರಿಗೆ ಪ್ರತಿ ತಿಂಗಳು 20 ಸಾವಿರ ಗೌರವ ಧನ ಸಂಬಳವನ್ನು ಉಚಿತವಾಗಿ ನಮ್ಮ ಸರ್ಕಾರ ನೀಡುತ್ತದೆ.

● ಸಸ್ಯಹಾರಿಗಳಿಗೆ ತರಕಾರಿ ಹಾಗೂ ಮಾಂಸಾಹಾರಿಗಳಿಗೆ ಮಾಂಸದ ವೆಚ್ಚಕ್ಕಾಗಿ ಪ್ರತಿ ತಿಂಗಳು ಒಂದು ಕುಟುಂಬಕ್ಕೆ 'ಮೈ ಖಾವ್ರಂಗಾ' ಯೋಜನೆಯ ಅಡಿಯಲ್ಲಿ ಮೂರು ಸಾವಿರ ರೂಪಾಯಿಗಳನ್ನು ಉಚಿತವಾಗಿ ನೀಡಲಾಗುವುದು.

● 'ಕುಡಿಯಿರಿ ಕುಡಿಸಿರಿ' ಯೋಜನೆಯ ಅಡಿಯಲ್ಲಿ ಕುಟುಂಬದ ಯಜಮಾನನಿಗೆ ವಾರಕ್ಕೆ ಎರಡು ಬಾಟಲ್ ಉಚಿತವಾಗಿ ನೀಡಲಾಗುವುದು.

● 'ಭೂಖ್ ಮಿಟಾದೋ' ಯೋಜನೆಯ ಮೂಲಕ ತಿಂಗಳಿಗೊಮ್ಮೆ ಪ್ರತಿ ಕುಟುಂಬಕ್ಕೆ ಅಕ್ಕಿ, ಬೇಳೆ, ಎಣ್ಣೆ, ಸಕ್ಕರೆ, ಹಾಲು, ತುಪ್ಪ ಇರುವ ಕಿಟ್ ಉಚಿತವಾಗಿ ನೀಡಲಾಗುತ್ತದೆ.

● ಉದ್ಯೋಗ ಮಾಡಲು ಆಸಕ್ತಿ ಇಲ್ಲದವರನ್ನು ವಿಶೇಷವಾಗಿ ಗುರುತಿಸಿ ಅವರಿಗೆ 'ಆರಾಮ್ ಕರೋ' ಯೋಜನೆಯ ಅಡಿಯಲ್ಲಿ ತಿಂಗಳಿಗೆ 7,000 ನಿರುದ್ಯೋಗ ಭತ್ಯೆ ಹಾಗೂ ತಿಂಗಳಿಗೊಮ್ಮೆ ಗೋವಾ ಪ್ರವಾಸಕ್ಕೆ ಹೋಗಲು ಉಚಿತ ಕೂಪನ್ ನೀಡಲಾಗುತ್ತದೆ.

● ಮನೆಯಲ್ಲಿ ಮಲಗುವುದಕ್ಕೆ ಅನುಕೂಲ ಇಲ್ಲದವರಿಗೆ ಸರ್ಕಾರದ ವತಿಯಿಂದ ಪ್ರತಿ ಜಿಲ್ಲೆಯಲ್ಲಿ ಮೆತ್ತನೆಯ ಹಾಸಿಗೆ ಹೊಂದಿರುವ ಹತ್ತು ಸಾವಿರ 'ನಿದ್ರಾ ಕೇಂದ್ರ'ಗಳನ್ನು ತೆರೆಯಲಾಗುತ್ತದೆ. ಅಲ್ಪಸಂಖ್ಯಾತ ಹಾಗೂ ಹಿಂದುಳಿದವರಿಗೆ ಮೀಸಲಾಗಿರುವ ನಿದ್ರಾ ಕೇಂದ್ರಗಳಲ್ಲಿ ಎಸಿಯನ್ನು ಅಳವಡಿಸಲಾಗುತ್ತದೆ.

● ಸರ್ಕಾರಿ ನೌಕರರ ಕೆಲಸದ ಒತ್ತಡವನ್ನು ಕಡಿಮೆ ಮಾಡಲು ಕೆಲಸದ ಸಮಯವನ್ನು ದಿನದಲ್ಲಿ ಕೇವಲ ನಾಲ್ಕು ಗಂಟೆಗಳಿಗೆ ಇಳಿಸಲಾಗುವುದು. ಹಾಗೂ ಪ್ರತಿ ದಿನ ಕಚೇರಿಗಳಲ್ಲಿ ಎರಡು ಗಂಟೆ 'ಹರಟೆ ಸಮಯ' ಎಂದು ಮೀಸಲು ಇಡಲಾಗುವುದು.

● ಸೋಮಾರಿತನವನ್ನು ಪ್ರೋತ್ಸಾಹಿಸುವುದಕ್ಕಾಗಿ ಪ್ರತಿ ವರ್ಷ ಸಾವಿರ ಸೋಮಾರಿಗಳನ್ನು ಆಯ್ಕೆ ಮಾಡಿ 'ಸೋಮಾರಿ ನಾಗರಿಕ' ಪ್ರಶಸ್ತಿಯನ್ನು ನೀಡಲಾಗುತ್ತದೆ. ಪ್ರಶಸ್ತಿ ಸಮಾರಂಭಕ್ಕೆ ಬರುವುದಕ್ಕೂ ಸಾಧ್ಯವಾಗದ ಸೋಮಾರಿಗಳಿಗೆ ಸರ್ಕಾರವೇ ಅವರ ಮನೆ ಬಾಗಿಲಿಗೆ ಹೋಗಿ ಸನ್ಮಾನವನ್ನು ಮಾಡುವ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ಈ ಎಲ್ಲಾ ಉಚಿತ–ಖಚಿತ ಸೌಲಭ್ಯಗಳನ್ನು ನೀಡುವುದಾಗಿ ಮನೆ–ಮನೆಗೂ ಖಾತರಿ ನೀಡುತ್ತೇನೆ. ಎಲ್ಲರೂ ನಮಗೆ ಮತ ನೀಡಿ ನಮ್ಮನ್ನು ಗೆಲ್ಲಿಸಿ, ದೇಶವನ್ನು ಮಾರಾಟ ಮಾಡುವುದಕ್ಕೆ ಸಹಕರಿಸಿ!!

ಕೃಪೆ: ವಾಟ್ಸ್‌ಆಪ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್‌ನಿಂದ ಸುಮಾರು 1.5 KMS
MUDA APPROVED
ಸುತ್ತಮುತ್ತ ಮೂಡಾ ಲೇಔಟ್‌ಗಳಿವೆ
GSS 89512-76688

WANTED
1. FIELD EXECUTIVES (AGE 25 TO 35) (ANY DEGREE 2 TO 5 YR EXP)
2. OFFICE HELPER / PUC + COMPUTER / MS WORD
3. DRIVER (2TO 5 YR EXP) AGE 25 TO 35 YEARS
4. SECURITY GUARD (AGE 25 TO 40)
9036745292
(10 AM TO 6 PM)

ಬೇಕಾಗಿದ್ದಾರೆ
ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ಕಾಫಿ ಮಾಸ್ಟರ್ ಬೇಕಾಗಿದ್ದಾರೆ.
9900661620
ಆಕರ್ಷಕ ಸಂಬಳ ನೀಡಲಾಗುವುದು.

Wanted
Wanted teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685
9980631121

ಬಾಡಿಗೆಗೆ
ಕಛೇರಿ, ವಾಣಿಜ್ಯ, ಬ್ಯಾಂಕ್ ಮೊದಲನೇ ಮಹಡಿ
2000 Sq.Ft.
ನಿರ್ಮಲ ಆಸ್ಪತ್ರೆ (OLD) ಹತ್ತಿರ ಟಿ.ನರಸೀಪುರ ಮೇನ್ ರಸ್ತೆ, ಗಿರಿದರ್ಶಿನಿ ಬಡಾವಣೆ, ಆಲನಹಳ್ಳಿ, ಮೈಸೂರು
9964346133
9986205201

TEACHER WANTED
Gayathri Vidyalaya
Hosa undavadi K.R.Sagara, S.R.Patna Taluk, Mandya District
B.Ed -03, D.Ed-03
BSc B.Ed-03
Montessori Teacher-03
Female P.E Teacher-01
8892927318, 6360302911
8183054747

Admission Open
NTTC
Nursery Teacher Training Course
ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ
PUC Pass/Fail
Contact: Ramakrishna Nagar, Mysore
8310306882, 9964790442

ಶ್ರೀ ರಾಯಲ್ ವಾರಿಯರ್ ಬೇಕರಿಗೆ ಅನುಭವವುಳ್ಳ ಸೇಲ್ಸ್ ಮ್ಯಾನ್ ಗಳು ಮತ್ತು ಮ್ಯಾನೇಜ್ಮೆಂಟ್ ಎಕ್ಸಿಕ್ಯೂಟಿವ್ ವಿತ್ ಕಂಪ್ಯೂಟರ್ ನಾಲೆಡ್ಜ್ ಇನ್ ಸಾಫ್ಟ್‌ವೇರ್ ಪ್ರಾಂಟಿಂಗ್ ಗೆ ಅನುಭವವುಳ್ಳ ವರ್ಕರ್ಸ್ ಮತ್ತು ಕ್ಲೀನಿಂಗ್ ಲೇಡೀಸ್‌ಗಳು ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತವಾಗಿ ದೊರಕುತ್ತದೆ. ಶ್ರೀ ರಾಯಲ್ ವಾರಿಯರ್ ಬೇಕರಿ ಅಂಡ್ ಸ್ವೀಟ್ಸ್ ನೃಪತುಂಗ ರಸ್ತೆ ಸೆಕೆಂಡ್ ಸ್ಟೇಜ್ ಎಂ ಬ್ಲಾಕ್ ನಿಯರ್ ವೈ ಎಸ್ ಆಫೀಸ್. ಈ ಕೂಡಲೇ ಸಂಪರ್ಕಿಸಿ:
ಮಾಲೀಕರು – 9686907943
ಮ್ಯಾನೇಜರ್–9019876412

ಶಿಕ್ಷಕರು ಬೇಕಾಗಿದ್ದಾರೆ
1. B.A.-B.Ed/M.A-B.Ed (English Teacher-1 Post)
2. B.Sc-B.Ed/M.Sc-B.Ed (ಗಣಿತ ಶಿಕ್ಷಕರು ಕನ್ನಡ ಮಾಧ್ಯಮ)-1 Post)
3. NSTಶಿಕ್ಷಕರು-2 Posts)
ಆಸಕ್ತರು ತಮ್ಮ ಮೂಲ ದಾಖಲಾತಿಯೊಂದಿಗೆ ಈಮೇಲ್‌ಗೆ 10 ದಿನದ ಒಳಗೆ ಭೇಟಿ ನೀಡತಕ್ಕದ್ದು. ದೂರವಾಣಿಸಂಖ್ಯೆ
9916195956

ಸೈಟ್ಸ್ @ ಮೈಸೂರು
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ
DTCP APPROVED
ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ ಮುಂಬರಲಿರುವ ಮೈಸೂರು ಕುಶಾಲ್ ನಗರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ
GSS 89512-76688

ROOF WATERPROOFING
GET READY FOR MONSOON
7 YEARS WARRANTY WITH ELASTOMERIC TECHNOLOGY
3 LAYERS OF PROTECTION
9611526934 | 9611692311
HARD & SHINE CHEMICALS
Changing The Way The World Does Concrete
PRICE STARTS FROM ₹30

GSS Property Mall
VERIFIED PROPERTIES IN MYSORE
THE MOST TRUSTED REAL ESTATE BRAND IN MYSURU
REQUIRED FOR PURCHASE
30X40, 30X50, 40X60, 50X80
SITES AND HOUSES
Near Kuvempunagar, Vijayanagar, Hebbal, Bogadi and Dattagalli
2 to 3 Acres
AGRICULTURAL LAND
Within 20kms radius of Mysuru
GSS 96868-25025

SB GOLD COMPANY
ಗಿರವಿ ಚಿನ್ನಾಭರಣ ಖರೀದಿ
ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ
ಕೂಡಲೇ ಸಂಪರ್ಕಿಸಿ:-
9036409930

V-GUARD
10 ವರ್ಷಗಳ ವ್ಯಾರಂಟಿ
Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

PG ನಡೆಸಲು ಸಿಟಿ ಸರೌಂಡಿಂಗ್‌ನಲ್ಲಿ ಬಿಲ್ಡಿಂಗ್ ಬೇಕಾಗಿದೆ
ಮಧ್ಯವರ್ತಿಗಳಿಗೆ ಅವಕಾಶವಿದೆ.
6366200865

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು
ಗಂಡಸರು ಮತ್ತು ಹೆಂಗಸರು
ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ:
9880102700

ಬೇಕಾಗಿದ್ದಾರೆ
Part / Full Time- Job, M/F For a Direct Selling Company. No Age Limit, No Education Qualification, On Commission Basis, No Targets. For More Details, Contact : -
93414 42690
81979 45400

S.K. ಕನ್ಸ್ಟ್ರಕ್ಷನ್
ನಾವು ಮೈಸೂರು, ಮಡಿಕೇರಿ, ಹಾಸನ, ಮಂಡ್ಯ, ಚಾಮರಾಜನಗರದಲ್ಲಿ ಮನೆ ಹಾಗೂ ಕಮರ್ಷಿಯಲ್ ಕಟ್ಟಡವನ್ನು ಕಟ್ಟಿಕೊಡಲಾಗುವುದು
ಫೋನ್: 9742057923

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಸಂಬಳ: 16,500/– 8 Hrs (26 Days)
ವಯೋಮಿತಿ: 45 ವರ್ಷದೊಳಗೆ.
ವಿದ್ಯಾರ್ಹತೆ: SSLC ಮೇಲ್ಪಟ್ಟು
ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9620777819/9538567819

KINZA STEEL DOORS
T.K. Kayout,
WANTED
BUSINESS DEVELOPMENT EXECUTIVE: (Male/Female)
Experience in Constructiion Materials. Marketing is an added advantage. Contact:
9686116168/9686550330

BOYS HOME ENGLISH SCHOOL, MALAVALLI MANDYA DIST
Vacancies available for Teaching Posts
1) English and Social Science BA, B.Ed.,/M.A.B.Ed.,
2) Hindi Teacher : D.Ed.,
3) P.E.T : B.A. B.PED/C.PED
9986380044,9740281225

WANTED TEACHERS
S.D.E.T. School, Siddalingapura
BA. B.Ed - Kannada
BA. B.Ed - Social, English, Hindi
B.Sc. B.Ed - Science, Maths
BA. D.Ed, NST, PPT. Any Degree in English Medium, Timings: 10am to 2pm. Contact:
9845924194 / 9535587045

ಬೇಕಾಗಿದ್ದಾರೆ
ಆಲನಹಳ್ಳಿ ಸಿದ್ಧಾರ್ಥನಗರ್ ಸೈಡ್ ಡ್ರೈವರ್ ಬೇಕಾಗಿದ್ದಾರೆ. ವಯಸ್ಸು: 22ರಿಂದ 35 ಇರೋರ್ ಸಂಪರ್ಕಿಸಿ: ಒಳ್ಳೆ ಸಂಬಳ, ಮಧ್ಯಾಹ್ನ ಊಟ ಇರುತ್ತದೆ. ಲೈಸೆನ್ಸ್ DL ಕಡ್ಡಾಯ
ಸಂಪರ್ಕಿಸಿ:8123630683

ಬೇಕಾಗಿದ್ದಾರೆ
ಜೆಎಸ್‌ಎಸ್ ಆಸ್ಪತ್ರೆಯ ಬಳಿಯಿರುವ ಮನೆಯಲ್ಲಿ ಸಸ್ಯಾಹಾರಿ ಉಪಹಾರ ಮತ್ತು ಮಧ್ಯಾಹ್ನದ ಊಟವನ್ನು ತಯಾರಿಸಲು ಮಹಿಳಾ ಅಡಿಗೆಯವರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ:
98451 26661

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಮ್ಮ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತಿಳಿದುಕೊಳ್ಳಿ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಬೇಕಾಗಿದ್ದಾರೆ
ವರ್ಧನಿ ನರ್ಸಿಂಗ್ ಕಂಪನಿಗೆ ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು 8th, 9th, SSLC ಪಾಸ್ ಫೇಲಾದ ಯುವಕ ಯುವತಿಯರು ಮಹಿಳೆಯರು ಬೇಕಾಗಿದ್ದಾರೆ ಉತ್ತಮ ಸಂಬಳ ಉಳಿಯುಕೊಳ್ಳಲು ವ್ಯವಸ್ಥೆ ಊಟ ತಿಂಡಿ ಇರುತ್ತದೆ ESI/PFಯುನಿಫಾರ್ಮ್ ಐಡಿ ಕಾರ್ಡ್ ಇರುತ್ತದೆ.
ಸಂಪರ್ಕಿಸಿ:8123630683

ಕುರಿ, ಕೋಳಿ ಸಾಕಾಣಿಕೆಗೆ+ ಹಸು ಸಾಕಾಣಿಕೆಗೆ+ಮೀನುಸಾಕಾಣಿಕೆಗೆ
ಮೈಸೂರಿನಿಂದ 12ಕಿ.ಮೀ ದೂರದಲ್ಲಿ ಕೋಳಿ ಸಾಕಾಣಿಕೆಗೆ 20X30 ಕಲ್ಯಾಣ್‌ಶೆಡ್ ಮತ್ತು 4 ಸಾವಿರ 15X40 ಹಸು ಸಾಕಾಣಿಕೆಗೆ/ಕಲ್ಯಾಣ್‌ಶೆಡ್ ಮನೆ 6ರಿಂದ 10 ಹಸುಗಳಿಗೆ/4X40 ಉದ್ದ ಕಲ್ಯಾಣ್‌ಶೆಡ್ ಶೆಡ್ 40X80 ಆಳತೆಯ ಹೊಂಡದ ಜಾಗ ಇದೆ. ಮೀನು ಸಾಕಾಣಿಕೆಗೆ 18 ಸುಂಟಿಯಲ್ಲಿ 12 ಅಡಿ ಆಳದ ಬಾವಿ ನೀರು, ಕರೆಂಟ್, ಪಂಪ್‌ಸೆಟ್ ನೀರಿನ ಸೌಲಭ್ಯ. ಕೋಳಿ ಸಾಕಾಣಿಕೆಯ ಅನುಭವಿಗಳಿದ್ದಲ್ಲಿ ಸಂಪರ್ಕಿಸಿ:
9686282115/9448051478

ಸೈಟು ಮಾರಾಟಕ್ಕಿದೆ
30x40 ಅಳತೆಯ DTCP "A"ಯುಳ್ಳ ಸೈಟು ಮಾರಾಟಕ್ಕಿದೆ 12 ಲಕ್ಷದ 50 ಸಾವಿರಗಳು ತಳೂರು ಸರ್ಕಲ್ ಹತ್ತಿರ ಹುಲ್ಲಹಳ್ಳಿ ಮುಖ್ಯ ರಸ್ತೆ, ಮೈಸೂರು
9742198093

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಪ್ರೇಷನ್ ಕೆಲಸ/ ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ.
ಒಂದು ಚದರಕ್ಕೆ 1,80,000/–
*ಷರತ್ತು ಅನ್ವಯ
ಸ್ವಾಮಿ ಎಂ., ಸಿವಿಲ್ ಕಂಟ್ರಾಕ್ಟರ್
9945442361,9380885787

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ : 7th, 10th, ITI, SSLC, PUC, Diploma, Any Degree (Pass or Fail)
ಸ್ಯಾಲರಿ: 18000-30000
ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ
ವಯಸ್ಸು : 35 Below
ತರಬೇತಿ ಸಮಯದಲ್ಲಿ ವೇತನ ಕೊಡಲಾಗುವುದು
8217557212,6366638189
8884466359

ಬೇಕಾಗಿದ್ದಾರೆ
18 ವರ್ಷ ಮೇಲ್ಪಟ್ಟ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ಟ್ರೈನಿಂಗ್ ಕೊಡಲಾಗುವುದು ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಕೊಡಲಾಗುವುದು
7483960098
9743135666

SALE
Site @ Roopanagar
78x50 (4500)
Per Sq.Feet
North Facing Site with Teak Plant Near Roopa Nagar Club.
8904319072

SHOWROOM AVAILABLE FOR RENT
Area : 1500 sqft.
Ideal for banks/Gold finance companies, automobiles/EV showrooms
Location: chamaraja double road , opposite Gayatri Theatre.Mysore
Contact: 94484 56835

WANTED
We require
ITI Turner and Fitter
Preferably Female.
Ph: 0821-2582668,
Mob: 7204445679.
Address: Mystech Machines
Q113, 4th Cross, 8th Main, Hebbal Industrial Estate, Mysore-570016

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷ)– ಬೋಗಾದಿ ರಿಂಗ್ ರೋಡ್, ಕೆ.ಆರ್.ಎಸ್. ಆನಂದೂರು, ಚಾಮುಂಡಿಪುರಂ, ಬನ್ನಿಮಂಟಪ, ಹಿನ್ಕಲ್, ಟೆರಿಶಿಯನ್ ಕಾಲೇಜ್ ಹತ್ತಿರ.
ಹೌಸ್ ಕೀಪಿಂಗ್ (ಮಹಿಳೆಯರು)– ಟೆರಿಶಿಯನ್ ಕಾಲೇಜ್, ಬನ್ನಿಮಂಟಪ ಹತ್ತಿರ ಈ.ಎಸ್.ಐ. ಹಾಗೂ ಪಿ.ಎಫ್ ಕೊಡಲಾಗುವುದು. ವಯಸ್ಸು–50ರೊಳಗೆ ಆಸಕ್ತಿ ಇದ್ದವರು ಸಂಪರ್ಕಿಸಿ
8310098788,6361439167

ಬೇಕಾಗಿದ್ದಾರೆ
ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕಿನ ಮೇಗಳಪುರ ಹತ್ತಿರವಿರುವ ಎಸ್.ಆರ್.ಇಂಡಸ್ಟ್ರಿ ವಾಟರ್ ಫ್ಯಾಕ್ಟರಿಯಲ್ಲಿ ಅನುಭವವುಳ್ಳ ಇಂಚಾರ್ಜ್ ಮ್ಯಾನೇಜರ್ ಬೇಕಾಗಿದ್ದಾರೆ.
9972729997
9900134961

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
8/6: ಚಂದ್ರಧಾಮ ಯಾತ್ರ, ಕೇದಾರ್‌ನಾಥ, ಭದ್ರಿನಾಥ್, ಗಂಗೋತ್ರಿ, ಯಮುನೋತ್ರಿ, ಹರಿದ್ವಾರ, ಋಷಿಕೇಶ್.
22/6: ಅಮರ್‌ನಾಥ್ ಯಾತ್ರ, ಅಮೃತಸರ್, ವೈಷ್ಣೋದೇವಿ, ಕಾಶ್ಮೀರ್, ಸೋನಮಾರ್ಗ, ದೆಹಲಿ
17/5: ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ, ಅಯೋಧ್ಯ
9591017782,9964527782

ಬೇಕಾಗಿದ್ದಾರೆ
1. ಹೌಸ್ ಕೀಪಿಂಗ್ ಸೂಪರ್‌ವೈಸರ್– 02 ಹುದ್ದೆ (ಅನುಭವಿ)
2. ಎಲೆಕ್ಟ್ರಿಷಿಯನ್ 02 ಹುದ್ದೆ
3. ಪ್ಲಂಬರ್ – 01 ಹುದ್ದೆ
ದಿ ಕೋರಮ್ ಹೋಟೆಲ್
2257/1, ವಿನೋಬ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು
9620274629
9620274630

JOBNET
ಮೊಬೈಲ್‌ನಲ್ಲಿ ಕೆಲಸ ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

AFFIDAVIT
I, Naveen Kumar Krishna Reddy, R/at # 117, 1st Main, 2nd Cross, Mahadeshwara Layout, Kumbarakoppal, Metagalli, Mysuru-570016, do here by affirm on oath that my correct name is Naveen Kumar Krishna Reddy, but in my ICICI Bank document my name is mentioned as Naveen Kumar K. Hence I confirm that both names belong to me only, vide affidavit sworn in before Notary C. Mangala, dated
Sd/-Naveen Kumar Krishna Reddy

ಬೇಕಾಗಿದ್ದಾರೆ
Pharma Wholesale Distribution ನಲ್ಲಿ ಕೆಲಸಕ್ಕೆ
ಹುಡುಗರು / ಹುಡುಗಿಯರು
ಬೇಕಾಗಿದ್ದಾರೆ. Age: 20-30
9902356334/9902356331

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಂಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ /ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI +PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ / ಓಟಿ, 15200-86000
9740733021, 9535028750

WANTED
MBA. IN HR, TELE CALLERS, DATA ENTRY OPERATORS, ACCOUNTANT, SALES EXECUTIVE, RECEPTIONIST, ITI IN DIPLOMA MECHANICAL.
Call: 8867196098

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬಾಡಿಗೆಗೆ
ನಂ.914, ಸುನೀತ ನಿಲಯ, ಗ್ರೌಂಡ್ ಫ್ಲೋರ್ /ಸೆಲಮಹಡಿ, 30x40 2 ಬಿ.ಹೆಚ್.ಕೆ ವಿತ್ ಅಟ್ಯಾಚ್ಡ್ ಬಾತ್‌ರೂಮ್, ವಿಜಯನಗರ 2nd ಫೇಸ್, 4th ಸ್ಟೇಜ್, ಮೈಸೂರು ನಗರ. ಸೋಲಾರ್ ವಾಟರ್ ಹೀಟರ್ ಅಳವಡಿಸಿದೆ. ಗೀಜರ್ ಕೂಡ ಅಳವಡಿಸಿದೆ. Contact:
9449003320/9483150804

ಬೇಕಾಗಿದ್ದಾರೆ
ಮೈಸೂರಿನ AW Group of Companyಗೆ SSLC (Pass), PUC, ITI, any Degree ಆಗಿರುವ ಗ್ರಾಮೀಣ+ನಗರದ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕನ್ನಡ ಬಲ್ಲವರಿಗೆ ಮೊದಲ ಆದ್ಯತೆ. (Consultancy ಅಲ್ಲ)
ವಯೋಮಿತಿ: 18ರಿಂದ 30 Years
ತಿಂಗಳಿಗೆ: 27,560 - 31,770+ ಉಚಿತ ವಸತಿ
ಕೂಡಲೇ ಕರೆ ಮಾಡಿ:
ಫೋನ್: 9900163228/ 7349699460

(30x40)Sale
@ OLIVE ENCLAVE
MYS-B'Lore High Way ,
3 km From Columbia Asia
26 Lakhs.
95388-39926

ಮನೆ ಕಟ್ಟಿ ಕೊಡಲಾಗುವುದು
ಈ ಕೆಳಕಂಡ ಜಿಲ್ಲೆಗಳ, ನಗರ ಮತ್ತು ಹಳ್ಳಿಗಳಲ್ಲಿ, ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಹಾಸನ, ಕೊಡಗು, ಚಾಮರಾಜನಗರ
ಸಂಪರ್ಕಿಸಿ:
9740081795

Site for sale
Krishna Layout (Muda approved) 40x60 West - 48 lac
Kuberananda sagara - 30x40 East - 28 lac
Nityananda sagara - 30x40 West , 40x60 West
Kbl Gardenia 30x40 west - 45 lac
ananda sagara 40x60 South - 45 Lac
Ph: 8197707001
Jk Properties

ಬಾಡಿಗೆಗೆ
ಮೈಸೂರು ಸಿಟಿ ವಿದ್ಯಾರಣ್ಯಪುರಂ 4ನೇ ಮುಖ್ಯ ರಸ್ತೆಯ 27ನೇ ಕ್ರಾಸಿನ ಕಾರ್ನರ್‌ನಲ್ಲಿ 3 ಅಂಗಡಿಗಳು (10x10 ಅಡಿ), ಗೋಡೌನ್ (10X40 ಅಡಿ) ಮತ್ತು ಮನೆ (2ಬಿಹೆಚ್‌ಕೆ) ಲಭ್ಯವಿದೆ. ಸಂಪರ್ಕಿಸಿ
9448872684/ 9900079871

ಮೈಸೂರು ಮಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತ, ಸಂಪರ್ಕಿಸಿ, ಡಾ॥ ಗುರೂಜಿ
7899625268, 9448229184
ಲೇಡಿ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ

FOR SALE
1) 30x40 15 lakhs sites in H D Kote Road, 2)40x60 60 feet road sites Somanatha Nagar ,
3) 30x40 N G+2 House Near Ashwini Choultry, Srirampura,
4) 17/60 House opp Park Kamakshi Hospital SS Puram
5) 40x60 site RT Nagar
95386 90359/90359 90359

Herbal Cure Wellness
PART TIME JOBS
Part time /Full time Jobs)
ಮೊಬೈಲ್ ಮೂಲಕ ನಮ್ಮ ಆಯುರ್ವೇದ ಉತ್ಪನ್ನಗಳನ್ನು ಪ್ರಚಾರ ಮಾಡುವ ಮೂಲಕ ದಿನಗಳಲ್ಲಿ 800 ರಿಂದ 5,000ವರೆಗೂ ಗಳಿಸಿ. ಸಂಪರ್ಕಿಸಿ:
8197695295

WANTED
PU Female Office Asst. at Saraswathipuram, Kamakshi Hospital Road (Near Kuvempu School) Mysore. Contact:
93421 25252

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ (ಪ್ರತಿಷ್ಠಿತ ಕಂಪನಿಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ ಯುವತಿಯರು ಬೇಕಾಗಿದ್ದಾರೆ.
Any Qualification (7th 10th, PUC to any Degree pass/fail ಆದವರಿಗೆ ಅರ್ಹತೆಯ ಕೆಲಸ, ಸಂಬಳ: 14500–39000 ESI+PF+OT ಸೇರಿ). ಷರತ್ತು ಅನ್ವಯ. ಸಂಪರ್ಕಿಸಿ:
9980692151/9036548905

ಬೇಕಾಗಿದ್ದಾರೆ
ಮೈಸೂರು ನಗರದಲ್ಲಿ ಕೇಬಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. (ಹತ್ತಿರದವರಿಗೆ ಮಾತ್ರ) ಸಂಪರ್ಕಿಸಿ:
9880122689

WANTED
TELECALLERS
Male No 10, Female No 10
Tamil. Telugu Language Required. Salary 15k
Meghana H R
7829803426

ಮನೆ ಬಾಡಿಗೆ / ಭೋಗ್ಯಕ್ಕೆ
4BHK ಹೌಸ್ ಗ್ರೌಂಡ್ ಫ್ಲೋರ್, ಕಾರ್ ಪಾರ್ಕಿಂಗ್‌ನೊಂದಿಗೆ ಉತ್ತರ ದಿಕ್ಕಿನ ಬಾಗಿಲು, ಸೋಲಾರ್, ಇತ್ಯಾದಿ. ಸರಸ್ವತಿ ಪುರಂ, 6 ನೇ ಮೈನ್, ಈಜುಕೊಳ ರಸ್ತೆ, ಮೈಸೂರು.
ಹೆಚ್ಚಿನ ವಿವರಗಳಿಗಾಗಿ
ಕರೆ ಮಾಡಿ: 8892323823

ಬೇಕಾಗಿದ್ದಾರೆ
ಟ್ರೆಂಡ್ಸ್ ಸೆರಾಮಿಕ್ ಅಂಡ್ ಸಾನಿಟೇಷನ್ ಬೋಗಾದಿ, ಮೈಸೂರಿನಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು ದ್ವಿಚಕ್ರ ವಾಹನ ಹೊಂದಿರಬೇಕು. ಆಕರ್ಷಕ ವೇತನ ಮತ್ತು ಪೆಟ್ರೋಲ್ ಭತ್ಯೆ ನೀಡಲಾಗುವುದು. ಸಂಪರ್ಕಿಸಿ:
9108668282 / 9448361818

ಇಂಡಿಕಾ ಹಾಗೂ ಸ್ವಿಫ್ಟ್ ವಾಹನಗಳು ಬೇಕಾಗಿದೆ
ಮೈಸೂರು ಜಿಲ್ಲೆಯಾದ್ಯಂತ ಇಂಡಿಕಾ ಹಾಗೂ ಸ್ವಿಫ್ಟ್ ವಾಹನಗಳು ಬಾಡಿಗೆಗೆ ಬೇಕಾಗಿದೆ. ದಿನದ ಬಾಡಿಗೆ ನೀಡಲಾಗುವುದು. 04 to 13 ತನಕ ಮಾತ್ರ
(Election Duty)
ಇಂಡಿಕಾ–1700/– ಸ್ವಿಫ್ಟ್–2000/–
9845525122 / 8296262047

WANTED
BUSINESS ASSOCIATES
Male Only
For Nidhi Bank in Mysore, Hassan, K.R. Nagar, Madikeri & T. Narasipura
For more details please Contact
9902510263

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ನಾಯ್ಡುನಗರ ಬಸ್ ಸ್ಟ್ಯಾಂಡ್ ಹತ್ತಿರ ಇರುವ ಆನಂದ ಎಂಟರ್‌ಪ್ರೈಸಸ್ ಸಂಸ್ಥೆಗೆ ಕಂಪ್ಯೂಟರ್ ಜ್ಞಾನವಿರುವ ಕಂಪ್ಯೂಟರ್ ಆಪರೇಟರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ: ಆನಂದ್
9482136128

ಹೆಲ್ತ್‌ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮಾ ಇನ್ ಹೆಲ್ತ್‌ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM/GNM ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ, ಏರ್ಪೋರ್ಟ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು.
9916908454

MEDICAL SHOP FOR SALE
Well running Medical Shop with Clinic for sale at Sri Rampura. Contact:
9902356334/9902356331

REQUIRED FEMALE TELECALLERS
Ready to work in Financial Services . Qualfication SSLC or PUC above with Computer basic Knowledge and salary around 8000+ Incentives work place : SLV Enterprises # 2060, 2nd Floor Vaibhav Complex, Madvachar Road, Near 101 Ganapathi Temple, Agrahara, Mysore: 570004.
9513965656 / 0821-4281421

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ಹೌಸ್ ಕೀಪಿಂಗ್ ಬಾಯ್ಸ್ & ಗರ್ಲ್ಸ್, ಹೆಲ್ಪರ್‌ಗಳು, ಸಿದ್ಧಾರ್ಥ್ ಲೇಔಟ್ ಹಾಗೂ ಕೂರ್ಗಳ್ಳಿ ಸುತ್ತಾಮುತ್ತ ಪ್ರದೇಶಕ್ಕೆ, ಸಂಪರ್ಕಿಸಿ
9035367083, 8123769346

ಬೇಕಾಗಿದ್ದಾರೆ
ಬಿಕಾಂ ಮತ್ತು ಕಂಪ್ಯೂಟರ್ ನಾಲೆಡ್ಜ್ ಇರುವ ಮಹಿಳಾ ಅಭ್ಯರ್ಥಿ ಆಡಿಟರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕುವೆಂಪುನಗರ ಸುತ್ತ–ಮುತ್ತ ಇರುವವರಿಗೆ ಮೊದಲ ಆದ್ಯತೆ
9880692485

ತಕ್ಷಣ ಬೇಕಾಗಿದ್ದಾರೆ
ಮೈಸೂರು ಸಿಟಿ, ಗೋಕುಲಂ, ಹೆಬ್ಬಾಳು ಮತ್ತು ಬೆಳವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳ ಬೇಕಾಗಿದ್ದಾರೆ. ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟ, 30 ರಿಂದ 50 ವರ್ಷದೊಳಗಿನವರು ಸಂಪರ್ಕಿಸಿ:
9739199355, 9844235981

ನಾಟಿ ಔಷಧಿ
ಕೆ.ಜಿ.ಕೊಪ್ಪಲು, ಮೈಸೂರು
ಮಂಡಿ ನೋವು ಎಷ್ಟು ಹಳೆಯದಾದರು ನಾವು ಕೊಡುವ ನಾಟಿ ಔಷಧದಿಂದ ಕೇವಲ 15 ದಿವಸಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ.
8951451333, 9900502224

RENT & LEASE
House for Rent 4 bed Rooms all attach Bath & Toilet 40/60 Duplex with Car Garage & portico 33000 rents. Near Harsha Bar Bogadhi 2nd Stage
Brand New House for Rent Second Floor 1500 sqft Build 2 Bed rooms Two Houses in Ramswamy Circle 20,000 rent.
House for Ren: 2 Bed Room + 1 Duplex room in 2nd floor in saraswathipuram Mysore rent 18000 rent.
House for Lease in T K Layout 3bhk 22 lakhs. in Saraswathipuram 1bhk and another one 2bhk.
9900794922

SALES
For sale Corner Semi Commercial 1100 Square Area 50 squares meter build up area 3 floors Ground Floor Commercial shop & office space First Floor 2 bhk and 1 bhk in another flat with fully furnished 2nd Floor Same as.Price of 2.90cr with the rent of 1 lakh above per Month in Kuvempunagar.House for Sale 40/60 Build area 3 Bed Room Good Condition House for Sale near Vijay Nagar 3rd Stage Price 1.85cr &House for Sale 20/30 Two Floor Good Condition price 68 lakhs in Dattagalli.
9900794922

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಸೂಕ್ಷ್ಮ ವೀಕ್ಷಕರು ಮತದಾನದ ಪ್ರಕ್ರಿಯೆ ಬಗ್ಗೆ ನಿಗಾ ವಹಿಸಿ

ವೀಕ್ಷಕ ತನ್ಮಯ್ ಚಕ್ರಭರ್ತಿ ಸೂಚನೆ



ಮಂಡ್ಯ, ಮೇ 3– ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ಹಿನ್ನೆಲೆ ನೇಮಕವಾಗಿರುವ ಸೂಕ್ಷ್ಮ ವೀಕ್ಷಕರು ಮೇ 10 ರಂದು ತಮಗೆ ನಿಯೋಜಿಸಲಾಗುವ ಮತಗಟ್ಟೆಯಲ್ಲಿ ನಡೆಯುವ ಮತದಾನ ಪ್ರಕ್ರಿಯೆಯ ಬಗ್ಗೆ ನಿಗಾ ವಹಿಸಿ ಸಾಮಾನ್ಯ ವೀಕ್ಷಕರಿಗೆ ವರದಿ ನೀಡಬೇಕು ಎಂದು ಮಂಡ್ಯ ಮತ್ತು ನಾಗ ಮಂಗಲ ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕ ತನ್ಮಯ್ ಚಕ್ರಭರ್ತಿ ಅವರು ತಿಳಿಸಿದರು.

ಅವರು ಇಂದು ಅಂಬೇಡ್ಕರ್ ಭವನ ದಲ್ಲಿ ಆಯೋಜಿಸಲಾಗಿದ್ದ ಮೈಕ್ರೊ ಅಬ್ಸರ್ವರ್ ತರಬೇತಿಯಲ್ಲಿ ಮಾತನಾಡಿ ದರು. ಮೇ 9 ರಂದು ತಮಗೆ ನಿಯೋಜಿ ಸಲಾಗಿರುವ ಮತಗಟ್ಟೆಯ ಬಗ್ಗೆ ಮಾಹಿತಿ ದೊರೆಯುತ್ತದೆ. ಅಲ್ಲಿಗೆ ತೆರಳಿ ಮೇ 10 ರಂದು ಬೆಳಿಗ್ಗೆ ಮತಯಂತ್ರದ ನೈಜತೆಯ ಬಗ್ಗೆ ನಡೆಯುವ 50 ಮಾಕ್ ಪೋಲ್ ಸಂದರ್ಭದಲ್ಲಿ ತಪ್ಪದೇ ಹಾಜರಿರ ಬೇಕು. ಮಾಕ್ ಪೋಲ್ ಮುಗಿದ ನಂತರ ಮತಯಂತ್ರದಲ್ಲಿ ಕ್ಲೋಸ್ ಬಟನ್‌ನ್ನು ಚುನಾವಣೆಗೆ ನಿಯೋಜಿಸಿರುವ ಸಿಬ್ಬಂದಿ ಒತ್ತಬೇಕು. ಇದನ್ನು ಸರಿಯಾಗಿ ವೀಕ್ಷಿಸಿ. ಮಾಕ್ ಪೋಲ್ ಪ್ರಮಾಣ ಪತ್ರದಲ್ಲಿ ನಿಗದಿಪಡಿಸಿರುವವರು ಸಹಿ ಮಾಡಿರುವ ಬಗ್ಗೆ ಗಮನಿಸಿ, ಮತದಾರರ ರಿಜಿಸ್ಟರ್, ಮತದಾನ ಸಂಪೂರ್ಣವಾದ ನಂತರ ಮತ ಯಂತ್ರದಲ್ಲಿ ಚಲಾಯಿಸಿರುವ ಮತದಾರರ ಸಂಖ್ಯೆಯನ್ನು ಗಮನಿಸಬೇಕು ಎಂದರು.

ಮಳವಳ್ಳಿ ಮತ್ತು ಮದ್ದೂರು ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರಾದ ಅಮಿತ್ ಕುಮಾರ್ ಅವರು ಮಾತನಾಡಿ, ಮತದಾನ ಪ್ರಕ್ರಿಯೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆದಲ್ಲಿ ತಕ್ಷಣ ತಮ್ಮ ವ್ಯಾಪ್ತಿಗೆ ಬರುವ ವೀಕ್ಷಕರಿಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದರು.

ಮೇಲುಕೋಟೆ ಮತ್ತು ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕ ರಾದ ಅಮಿತ್ವ ಬ್ಯಾನರ್ಜಿ ಮಾತನಾಡಿ, ಮೇ 10 ರಂದು ಮತದಾನ ಪ್ರಕ್ರಿಯೆ ಮುಗಿದ ನಂತರ ಚುನಾವಣಾ ಆಯೋಗ ನೀಡಿರುವ ನಿರ್ದೇಶನದಂತೆ ಮತಗಟ್ಟೆವಾರು ವರದಿ ನೀಡಬೇಕು. ಕೆಲವು ಕಡೆ ಎರಡು ಮತ ಗಟ್ಟೆಗಳು ಒಟ್ಟಿಗೆ ಇದ್ದು, ಒಬ್ಬರೇ ಮೈಕ್ರೋ ಅಬ್ಸರ್ವರ್ ಇದ್ದಾಗ ಎರಡು ಪ್ರತ್ಯೇಕ ವರದಿ ನೀಡಬೇಕು ಎಂದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಸಾಮಾನ್ಯ ವೀಕ್ಷಕರಾದ ಡಾ: ಎಸ್ ಸುರೇಶ್ ಕುಮಾರ್ ಅವರು ಮಾತನಾಡಿ, ಶ್ರೀರಂಗಪಟ್ಟಣದಲ್ಲಿ ಹೆಚ್ಚಿನ ಅಭ್ಯರ್ಥಿಗಳಿದ್ದು, ಎರಡು ಬ್ಯಾಲೆಟ್ ಯೂನಿಟ್‌ಗಳು ಇರುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಕಾರ್ಯನಿರ್ವಹಿ ಸುವವರು ಹೆಚ್ಚಿನ ಗಮನವಿಟ್ಟು ಕಾರ್ಯ ನಿರ್ವಹಿಸಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್ ನಾಗರಾಜ್ ಅವರು ಮೈಕ್ರೋ ಅಬ್ಸರ್ವರ್ ಗಳಿಗೆ ತರಬೇತಿ ನಡೆಸಿಕೊಟ್ಟರು. ತರಬೇತಿ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ: ಹೆಚ್.ಎನ್ ಗೋಪಾಲಕೃಷ್ಣ, ಜಿಲ್ಲಾ ಸಮಾಜ ಕಲ್ಯಾಣಾ ಧಿಕಾರಿ ಸಿದ್ದಲಿಂಗೇಶ್ ಉಪಸ್ಥಿತರಿದ್ದರು.

ಕಾಮನಾಯಕನಹಳ್ಳಿಯಲ್ಲಿ ಪುಟ್ಟರಾಜುಗೆ ಅದ್ಧೂರಿ ಸ್ವಾಗತ



ಚಿನುಕುರಳಿ, ಮೇ 3– ಚುನಾವಣಾ ಪ್ರಚಾರಕ್ಕೆ ಆಗಮಿಸಿದ ಜೆಡಿಎಸ್ ಅಭ್ಯರ್ಥಿ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ತಾಲೂಕಿನ ಕಾಮನಾಯಕನಹಳ್ಳಿ ಗ್ರಾಮದಲ್ಲಿ ಹೃದಯಸ್ಪರ್ಶಿ ಸ್ವಾಗತ ನೀಡಲಾಯಿತು.

ಬುಧವಾರ ಬೆಳಿಗ್ಗೆ ಸುಮಾರು 8 ಗಂಟೆಗೆ ಗ್ರಾಮಕ್ಕೆ ಆಗಮಿಸಿದ ಪುಟ್ಟರಾಜು ಅವರನ್ನು ಕಳಸ ಹೊತ್ತ ನೂರಾರು ಮಹಿಳೆಯರು ಮಂಗಳವಾದ್ಯಗಳೊಂದಿಗೆ ಗ್ರಾಮದೊಳಗೆ ಕರೆತಂದರು. ಈ ವೇಳೆ ಅಭಿಮಾನಿಗಳು ಪಟಾಕಿ ಸಿಡಿಸಿ ತಮ್ಮ ನೆಚ್ಚಿನ ನಾಯಕನನ್ನು ಸ್ವಾಗತಿಸಿದರೆ, ನೂರಾರು ಜನರು ಗ್ರಾಮದ ರಸ್ತೆಯುದ್ದಕ್ಕೂ ಹೂವಿನ ಮಳೆ ಹರಿಸಿ ಪುಟ್ಟರಾಜು ಅವರನ್ನು ಅದ್ಧೂರಿಯಾಗಿ ಸ್ವಾಗತಿಸಿದರು. ಬಳಿಕ ಪುಟ್ಟರಾಜು ಅವರು ಗ್ರಾಮದಲ್ಲಿ ಜೀರ್ಣೋದ್ಧಾರಗೊಳ್ಳುತ್ತಿರುವ ನಾರಾಯಣಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಈ ವೇಳೆ ಕ್ರೇನ್ ಮೂಲಕ ಪುಟ್ಟರಾಜು ಅವರಿಗೆ ಕಾಮನಾಯಕನಹಳ್ಳಿ ಗ್ರಾಮಸ್ಥರು ಮತ್ತು ಸಿಎಸ್‌ಪಿ ಬಾಯ್ಸ್ ವತಿಯಿಂದ ಬೃಹತ್ ಮೋಸಂಬಿ ಹಾರ ಹಾಕಲಾಯಿತು.

ಇದೇ ಸಂದರ್ಭದಲ್ಲಿ ಪುಟ್ಟರಾಜು ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮೆಚ್ಚಿ ವಳಗೆರೆ ದೇವರಹಳ್ಳಿ ಗ್ರಾಮದ ವಿನಿತ್, ಪರಮೇಶ್ ಮತ್ತಿತರರು ಕಾಂಗ್ರೆಸ್ ಪಕ್ಷವನ್ನು ತೊರೆದು ಜೆಡಿಎಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಪುಟ್ಟರಾಜು ಮಾತನಾಡಿ, ಕೃಷಿ ಪ್ರಧಾನವಾದ ತಾಲೂಕಿನ ಗ್ರಾಮೀಣ ಪ್ರದೇಶಗಳಿಗೆ ಏತ ನೀರಾವರಿ ಯೋಜನೆಗಳ ಮೂಲಕ ನೀರು ಹರಿಸಿ ಕೆರೆ ಕಟ್ಟೆಗಳನ್ನು ತುಂಬಿಸಲಾಗಿದೆ. ಕಾಮನಾಯಕನಹಳ್ಳಿ ಸೇರಿದಂತೆ ಸುತ್ತಮುತ್ತಲಿನ 700ಕ್ಕೂ ಹೆಚ್ಚು ಎಕರೆ ಜಮೀನುಗಳಿಗೆ ನೀರು ಒದಗಿಸಲು 10 ಕೋಟಿ ರೂ. ವೆಚ್ಚದಲ್ಲಿ ವಡಕೆಕಟ್ಟೆ ಕೆರೆಯನ್ನು ಹೊಸದಾಗಿ ನಿರ್ಮಾಣ ಮಾಡಲಾಗಿದೆ. ಕಾಮನಾಯಕನಹಳ್ಳಿ ಗ್ರಾಮ ದಲ್ಲಿ ಕಾಂಕ್ರಿಟ್ ರಸ್ತೆಗಳನ್ನು ನಿರ್ಮಿಸಲಾಗಿದೆ. ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾ ಗಿದ್ದು, ಈ ಚುನಾವಣೆಯನ್ನು ಅತಿ ಹೆಚ್ಚು ಮತಗಳಿಂದ ತಮ್ಮನ್ನು ಗೆಲ್ಲಿಸಬೇಕೆಂದು ಅವರು ಮತದಾರರಲ್ಲಿ ಕೋರಿದರು. ಈ ಸಂದರ್ಭದಲ್ಲಿ ನೂರಾರು ಸಂಖ್ಯೆ ಯಲ್ಲಿ ಗ್ರಾಮದ ಮಹಿಳೆಯರು ಮತ್ತು ಗ್ರಾಮಸ್ಥರು ಸೇರಿ ದಂತೆ ಸಿಎಸ್‌ಪಿ ಬಾಯ್ಸ್ ಯುವಕರು ಹಾಜರಿದ್ದರು.

ಡಿಸಿ, ಜಿಪಂ ಸಿಇಓರಿಂದ ಮತದಾರರಿಗೆ ಸವಿನಯ ಆಮಂತ್ರಣ

"ಮಂಡ್ಯ ಜಿಲ್ಲಾ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿ ಮತದಾರರಾಗಿ ರುವುದು ಸಂತೋಷದ ವಿಚಾರವಾಗಿದೆ. ಭಾರತ ಚುನಾವಣಾ ಆಯೋಗ ಹಾಗೂ ಮಂಡ್ಯ ಜಿಲ್ಲಾಡಳಿತವು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಜ್ಞಾವಂತ ಮತದಾರರಾಗಿ ಜವಾಬ್ದಾರಿಯನ್ನು ಹೊಂದಿರುತ್ತೀರಿ. ಮುಂಬರುವ ಎಲ್ಲಾ ಚುನಾವಣೆಯಲ್ಲಿ ತಾವು ಯಾವುದೇ ಆಮಿಷಕ್ಕೆ ಒಳಗಾಗದೇ ನಿರ್ಭೀತಿಯಿಂದ ಮತವನ್ನು ಚಲಾಯಿಸಬಹುದು. ತಮ್ಮ ಮತವು ಅತ್ಯಮೂಲ್ಯವಾದುದ್ದು. ಪ್ರತಿಯೊಬ್ಬ ಮತದಾರರು ಚುನಾವಣೆ ಸಂದರ್ಭದಲ್ಲಿ ತಪ್ಪದೇ ಮತಗಟ್ಟೆಗೆ ತೆರಳಿ ಮತ ಚಲಾಯಿಸುವ ಮೂಲಕ ಸದೃಢ ಪ್ರಜಾಪ್ರಭುತ್ವವನ್ನು ಸ್ಥಾಪಿಸಬಹುದು. ತಾವುಗಳು ದಿನಾಂಕ: 10.05.2023 ರಂದು ತಪ್ಪದೇ ತಮ್ಮ ಮತಗಟ್ಟೆಗೆ ತೆರಳಿ ಮತದಾನದಲ್ಲಿ ಭಾಗವಹಿಸಿ ತಮ್ಮ ಹಕ್ಕನ್ನು ಚಲಾಯಿಸಿ. "ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ"

– ಡಿಸಿ ಡಾ. ಹೆಚ್.ಎನ್ ಗೋಪಾಲಕೃಷ್ಣ, ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್,

ಪಿಎಸ್ಎಸ್‌ಕೆ ನಿವೃತ್ತ ಕಾರ್ಮಿಕರಿಗೆ ಬಾಕಿ ಹಣ ಬಿಡುಗಡೆ

ಪಾಂಡವಪುರ, ಮೇ 3– ಪಿಎಸ್ಎಸ್‌ಕೆ ನಿವೃತ್ತ ಕಾರ್ಮಿಕರಿಗೆ ಸರ್ಕಾರ ನೀಡಬೇಕಿದ್ದ 1.91 ಕೋಟಿ ರೂ. ಬಾಕಿ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಇದನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗುವುದು ಎಂದು ಸಹಕಾರ ಸಂಘಗಳ ನಿಬಂಧಕರಾದ ವಿಕ್ರಂರಾಜೇ ಅರಸ್ ಹೇಳಿದ್ದಾರೆ.

ಪಿಎಸ್ಎಸ್‌ಕೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 62 ಜನ ಕಾರ್ಮಿಕರು ಕಳೆದ ಮೂರ್‍ನಾಲ್ಕು ವರ್ಷದಿಂದ ನಿವೃತ್ತರಾಗಿದ್ದರೂ ಇವರಿಗೆ ನೀಡಬೇಕಿದ್ದ ನಿವೃತ್ತಿ ಹಣ ಮಂಜೂರಾಗಿರಲಿಲ್ಲ. ಈ ಬಗ್ಗೆ ಕಾರ್ಮಿಕರು ಕಳೆದ 120 ದಿನಗಳಿಂದ ಪಿಎಸ್ಎಸ್‌ಕೆ ಕಾರ್ಖಾನೆ ಎದುರು ನಿರಂತರವಾಗಿ ಪ್ರತಿಭಟನೆ ನಡೆಸಿದ್ದರು. ನಿವೃತ್ತರಾದ ಕೆಲವು ನೌಕರರು ಮೃತಪಟ್ಟಿದ್ದು, ಇವರ ಕುಟುಂಬಗಳು ಸಂಕಷ್ಟಕ್ಕೆ ಈಡಾಗಿದ್ದವು. ಶಾಸಕ ಸಿ.ಎಸ್. ಪುಟ್ಟರಾಜು ನಿವೃತ್ತ ನೌಕರರಿಗೆ ನೀಡಬೇಕಿರುವ ಬಾಕಿ ಹಣವನ್ನು ಮಂಜೂರು ಮಾಡು ವಂತೆ ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ಹೇರಿದ್ದನ್ನು ಇಲ್ಲಿ ಸ್ಮರಿಸಬಹುದು.

ಜೆಡಿಎಸ್ ಅಭ್ಯರ್ಥಿ ರವೀಂದ್ರ ಶ್ರೀಕಂಠಯ್ಯ ಭರ್ಜರಿ ಪ್ರಚಾರ



ಶ್ರೀರಂಗಪಟ್ಟಣ, ಮೇ 3– ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ಕೊತ್ತತ್ತಿ ಭಾಗದಲ್ಲಿ ಜೆಡಿಎಸ್ ಅಭ್ಯರ್ಥಿ ರವೀಂದ್ರ ಶ್ರೀಕಂಠಯ್ಯ ಭರ್ಜರಿ ಮತಪ್ರಚಾರ ನಡೆಸಿದರು.

ತೆರೆದ ವಾಹನದ ಮೂಲಕ ಈ ಭಾಗದ ಹಲವು ಗ್ರಾಮಗಳಲ್ಲಿ ರೋಡ್ ಶೋ ನಡೆಸಿದ ಅವರು, ಕೋವಿಡ್ ಹಾಗೂ ಪ್ರವಾಹದ ಸಮಯದಲ್ಲಿ ರಾಜ್ಯ ನೆನಪಾಗದ ಕೇಂದ್ರದ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರುಗಳಿಗೆ ಇಂದು ಚುನಾವಣೆ ಹತ್ತಿರವಾದ ಮೇಲೆ ನೆನಪಾಗಿದೆ. ಎರಡೂ ರಾಷ್ಟ್ರೀಯ ಪಕ್ಷಗಳ ಹಿರಿಯ ಮುಖಂಡರು ನಾ ಮುಂದು ತಾ ಮುಂದು ಎಂಬಂತೆ ರಾಜ್ಯಕ್ಕೆ ಆಗಮಿಸುತ್ತಿದ್ದು, ರೈತರ ಸರಣಿ ಆತ್ಮಹತ್ಯೆಯಾದಾಗ ಇವರೆಲ್ಲರೂ ಎಲ್ಲಿದ್ದರು. ಅವಾಗ ಅವರಿಗೆ ಮಂಡ್ಯ ಜಿಲ್ಲೆಯ ನೆನಪಾಗಲಿಲ್ಲವೇ?. ಇವರಿಗೆ ರಾಜ್ಯದ ಜನತೆಯ ಹಿತ ಬೇಕಿಲ್ಲ. ರಾಜ್ಯದ ಜನತೆಯ ಮತವಷ್ಟೇ ಬೇಕಾಗಿರುವುದು. ಇಂದು ಅವರು ಚುನಾವಣಾ ಗಿಮಿಕ್‌ಗಾಗಿ ಆಗಮಿಸುತ್ತಿದ್ದು, ಯಾರೂ ಅವರ ಬಣ್ಣದ ಮಾತಿಗೆ ಮರುಳಾಗದೆ ಅವರ ಪಕ್ಷಗಳಿಗೆ ಕೈ ಜೋಡಿಸಬಾರದೆಂದು ಮನವಿ ಮಾಡಿದರು.

ಇಂದು ಬೆಲೆಯೇರಿಕೆಯಿಂದಾಗಿ ರಾಜ್ಯದ ಬಡ ಜನತೆ ತತ್ತರಿಸಿಹೋಗಿದ್ದು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿರವರ ಕನಸಿನ ಪಂಚರತ್ನ ಯೋಜನೆ ರಾಜ್ಯದ ಜನತೆಗೆ ಸಂಜೀವಿನಿಯಾಗಲಿದೆ. ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಕಾಳಜಿ ವಹಿಸಿ ಹಲವು ವರ್ಷಗಳಿಂದ ಸಾಕಾರಗೊಳ್ಳದ ಮೊಗರಳ್ಳಿ ಮಂಟಿ ಭಾಗದ ಜನತೆಗೆ ಹಕ್ಕು–ಪತ್ರ ವಿತರಣೆ, ಕೆ.ಆರ್.ಎಸ್.ಕಂದಾಯ ಗ್ರಾಮ ಘೋಷಣೆ, ಮಹದೇವಪುರ ಬಹುಗ್ರಾಮಗಳ ಶುದ್ಧ ಕುಡಿಯುವ ನೀರು ಯೋಜನೆ ಸೇರಿದಂತೆ ನಿಮ್ಮ ಭಾಗದ ಹಲವು ಗ್ರಾಮಗಳಲ್ಲಿ ಹಳ್ಳ–ಕೊಳ್ಳ ಬಿದ್ದಿದ್ದ ರಸ್ತೆಗಳನ್ನು ಡಾಂಬರೀಕರಣಗೊಳಿಸಿದ್ದೇನೆ. ನನ್ನ ಎಲ್ಲಾ ಅಭಿವೃದ್ಧಿಗಳನ್ನು ಮನಗಂಡಿರುವ ತಾವುಗಳು ಪ್ರತೀ ಮನೆಮನೆಗಳಿಗೆ ತೆರಳಿ ಮತದಾರರಲ್ಲಿ ಅರಿವು ಮೂಡಿಸಬೇಕು. ಈ ಭಾಗದಲ್ಲಿ ನಮ್ಮ ತಾಯಿ ಪಾರ್ವತಮ್ಮ ಶ್ರೀಕಂಠಯ್ಯ ರವರು ಶಾಸಕರಾಗಿದ್ದ ವೇಳೆ ಕೆಲ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದು ಬಿಟ್ಟರೆ, ನಂತರದ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳು ನನ್ನ ಅವಧಿಯಲ್ಲಿ ನಡೆದಿವೆ. ಮತ್ತೊಮ್ಮೆ ನನಗೆ ಆಶೀರ್ವಾದ ಮಾಡುವ ಮೂಲಕ ಕುಮಾರಣ್ಣನ ಕೈ ಬಲಪಡಿಸುವುದರ ಜೊತೆಗೆ ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ರವೀಂದ್ರ ಶ್ರೀಕಂಠಯ್ಯ ಮನವಿ ಮಾಡಿದರು.

ರಾಜ್ಯದಲ್ಲಿ ಬಿಜೆಪಿ ಬೆಳೆಯಲು ಜೆಡಿಎಸ್ ಕಾರಣ

ಮಾಜಿ ಸಚಿವ ಜಮೀರ್ ಅಹ್ಮದ್



ಮಂಡ್ಯ, ಮೇ 3– ರಾಜ್ಯದಲ್ಲಿ ಬಿಜೆಪಿ ಬೆಳೆಯಲು ಜೆಡಿಎಸ್ ನಾಯಕರು ಕಾರಣರಾಗಿದ್ದಾರೆ. 2007ರಲ್ಲಿ ಜೆಡಿಎಸ್ ಹಾಗೂ ಬಿಜೆಪಿಯ ಸಮ್ಮಿಶ್ರ ಸರ್ಕಾರದಲ್ಲಿ 20 ತಿಂಗಳ ಅವಧಿ ಬಿಜೆಪಿಗೆ ಬಿಟ್ಟುಕೊಟ್ಟಿದ್ದರೆ ಬಿಜೆಪಿ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಮಾಜಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ನಗರದ ಕಾಳಿಕಾಂಭ ಸಮುದಾಯ ಭವನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪಿ.ರವಿಕುಮಾರ್ ಗೌಡ ಪರ ಚುನಾವಣಾ ಪ್ರಚಾರದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಬಿಜೆಪಿ ಹಾಗೂ ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ 20 ತಿಂಗಳ ಮುಖ್ಯಮಂತ್ರಿ ಸ್ಥಾನವನ್ನು ಬಿ.ಎಸ್.ಯಡಿಯೂರಪ್ಪ ಅವರಿಗೆ ಬಿಟ್ಟು ಕೊಡುವಂತೆ ನಾನು ಕುಮಾರಸ್ವಾಮಿಗೆ ಹೇಳಿದ್ದೆ. ಆದರೆ ಅವರು ಕೊಡಲಿಲ್ಲ. ಇದರಿಂದ ರಾಜ್ಯದ ಜನತೆಗೆ ಅನುಕಂಪ ಹುಟ್ಟಿ 110 ಸ್ಥಾನ ಗಳನ್ನು ಬಿಜೆಪಿ ಗೆದ್ದಿತ್ತು. ಆಗಲೂ ಬಿಜೆಪಿಗೆ ಬಹುಮತ ಸಿಗಲಿಲ್ಲ. ಆಗ ಆಪರೇಷನ್ ಕಮಲ ಮಾಡಿ ಸರ್ಕಾರ ರಚನೆ ಮಾಡಿದರು ಎಂದು ಹೇಳಿದರು.

ರಾಜ್ಯದಲ್ಲಿ ಯಾವತ್ತು ಬಿಜೆಪಿಗೆ ಬಹುಮತ ಬಂದಿಲ್ಲ. ಮುಂದೆಯೂ ಬರಲ್ಲ. ನಾನು ರಾಜ್ಯ ಪ್ರವಾಸ ಮಾಡುತ್ತಿರುವಾಗ ಜನರು ಸಿದ್ದರಾಮಯ್ಯ ಸರ್ಕಾರದ ಬಗ್ಗೆಯೇ ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ನೀಡಿದ ಅನ್ನಭಾಗ್ಯ, ಕ್ಷೀರಭಾಗ್ಯ, ಪಶು ಭಾಗ್ಯ, ಮಕ್ಕಳ ಶೂ ಭಾಗ್ಯ ಸೇರಿದಂತೆ ಜನಪರ ಭಾಗ್ಯಗಳ ಬಗ್ಗೆ ಈಗಲೂ ಜನರು ನೆನಪಿಸಿಕೊಳ್ಳುತ್ತಿದ್ದಾರೆ ಎಂದರು.

ಮಂಡ್ಯ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಪಿ.ರವಿಕುಮಾರ್ ಗೌಡ ಈ ಬಾರಿ ಗೆಲ್ಲುವುದು ಖಚಿತವಾಗಿದೆ. ಕಳೆದ ಬಾರಿ ಸೋತರೂ ಕ್ಷೇತ್ರದಲ್ಲಿದ್ದುಕೊಂಡು ಜನರ ಸಮಸ್ಯೆಗಳಿಗೆ ರವಿಕುಮಾರ್ ಸ್ಪಂದಿಸಿದ್ದಾರೆ. ಸೋಲಿನ ಅನುಕಂಪದ ಜೊತೆಗೆ ಜನರೊಂದಿಗೆ ಉಳಿದಿದ್ದು, ಈ ಬಾರಿ ಅವರ ಕೈಹಿಡಿಯಲಿದೆ. ಆದ್ದರಿಂದ ಎಲ್ಲರೂ ರವಿಕುಮಾರ್‌ಗೌಡ ಅವರಿಗೆ ಮತ ನೀಡುವ ಮೂಲಕ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಪಿ.ರವಿಕುಮಾರ್‌ಗೌಡ, ಮಾಜಿ ಸಚಿವ ಎಂ.ಎಸ್. ಆತ್ಮಾನಂದ, ಮುಖಂಡರಾದ ಕೀಲಾರ ರಾಧಾಕೃಷ್ಣ, ಎಂ.ಎಸ್.ಚಿದಂಬರ್ ಮಹಮ್ಮದ್ ಜಬೀವುಲ್ಲಾ, ರುದ್ರಪ್ಪ ಸೇರಿದಂತೆ ಮತ್ತಿತರರಿದ್ದರು.

ಕಾಂಗ್ರೆಸ್ ಟಿಕೆಟ್‌ಗೆ ಬಂದಿದ್ದ ನಾರಾಯಣಗೌಡ ಇಡಿಗೆ ಹೆದರಿ ಬಿಜೆಪಿಯಲ್ಲೇ ಉಳಿದರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಂಬ್



ಕೆ.ಆರ್.ಪೇಟೆ, ಮೇ 3– ಕೆ.ಆರ್.ಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಸಚಿವ ಕೆ.ಸಿ. ನಾರಾಯಣಗೌಡ ಕಾಂಗ್ರೆಸ್ ಟಿಕೆಟ್ ಗಾಗಿ ತಮ್ಮ ಬಳಿ ಬಂದಿದ್ದು, ಅಮಿತ್ ಶಾ ಅವರು ಇಡಿ ಅಸ್ತ್ರ ಬಿಟ್ಟು ಬೆದರಿಸಿದ್ದ ರಿಂದ ಬಿಜೆಪಿಯಲ್ಲೇ ಉಳಿದುಕೊಂಡಿ ದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಪುರಸಭೆಯ ಪಕ್ಕದ ಮೈದಾನದಲ್ಲಿ ತಾಲೂಕು ಕಾಂಗ್ರೆಸ್ ಪಕ್ಷದ ವತಿಯಿಂದ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್.ದೇವರಾಜು ಪರವಾಗಿ ಹಮ್ಮಿಕೊಂಡಿದ್ದ ಬೃಹತ್ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಚಿವ ಕೆ.ಸಿ.ನಾರಾಯಣಗೌಡರ ವಿರುದ್ಧ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ, ಕಳೆದ ಉಪ ಚುನಾವಣೆಯಲ್ಲಿ ಗೆದ್ದಿರುವುದು ನಾರಾಯಣಗೌಡರಲ್ಲ, ಬದಲಾಗಿ ಅವರ ಹಣ. ಅಧಿಕಾರ ಮತ್ತು ಹಣಕ್ಕಾಗಿ ಜೆಡಿಎಸ್ ಪಕ್ಷ ತ್ಯಜಿಸಿ ಬಿಜೆಪಿ ಸೇರಿದ ನಾರಾಯಣ ಗೌಡ ತನ್ನನ್ನು ತಾನು ಮಾರಾಟ ಮಾಡಿಕೊಂಡ ವ್ಯಕ್ತಿ ಎಂದು ಜರಿದರು. ತಾಲೂಕಿನಲ್ಲಿ ಕಾನೂನುಬಾಹಿರವಾಗಿ 25 ಎಕರೆ ಭೂಮಿಯನ್ನು ಕೇವಲ 5 ಲಕ್ಷ ರೂಪಾಯಿಗಳಿಗೆ ತನ್ನ ಪತ್ನಿಯ ಹೆಸರಿಗೆ 999 ವರ್ಷಗಳ ಕಾಲ ಭೋಗ್ಯದ ಕರಾರು ಮಾಡಿಕೊಂಡಿದ್ದಾನೆ. ಇಂತಹ ಕಾನೂನುಬಾಹಿರ ಚಟುವಟಿಕೆಗಳಿಂದ ಅಕ್ರಮ ಆಸ್ತಿ ಮಾಡುತ್ತಿರುವ ಇಂತವರು ಹೇಗೆ ಜನನಾಯಕರಾಗಲು ಸಾಧ್ಯ? ಎಂದು ಪ್ರಶ್ನಿಸಿದ ಸಿದ್ದರಾಮಯ್ಯ ಇಂತಹ ಲೂಟಿ ಕೋರರನ್ನು ಮೇ 10ರ ಚುನಾವಣೆಯಲ್ಲಿ ಕ್ಷೇತ್ರದ ಮತದಾರರು ದಕ್ಷ ಆಡಳಿತ ಗಾರರಾಗಿರುವ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್.ದೇವರಾಜು ಅವರಿಗೆ ಮತ ನೀಡಿ ಗೆಲ್ಲಿಸುವ ಮೂಲಕ ಮನೆಗೆ ಕಳುಹಿಸುವಂತೆ ಕರೆ ನೀಡಿದರು.

ರಾಜ್ಯಸಭೆಯ ಮಾಜಿ ಉಪಸಭಾಪತಿ ಕೆ.ರೆಹಮಾನ್‌ಖಾನ್, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಅಭ್ಯರ್ಥಿ ಬಿ.ಎಲ್.ದೇವರಾಜು, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಂಗ್ರೆಸ್ ಮುಖಂಡರಾದ ವಿಜಯರಾಮೇಗೌಡ, ಕಿಕ್ಕೇರಿ ಸುರೇಶ್, ಬಿ.ನಾಗೇಂದ್ರ ಕುಮಾರ್, ಎಂ.ಡಿ.ಕೃಷ್ಣಮೂರ್ತಿ, ಜಿ.ಕೆ.ರುಕ್ಮಾಂಗದ, ಕೆಟಿ.ಗಂಗಾಧರ್, ಬಸ್ತಿ ರಂಗಪ್ಪ, ರಾಜಯ್ಯ, ರೈತ ಸಂಘದ ಮುಖಂಡರಾದ ಕೆ.ಆರ್. ಜಯರಾಂ, ಮರುವನಹಳ್ಳಿ ಶಂಕರ್, ವಕೀಲ ರಾದ ಅನಂತರಾಮಯ್ಯ, ಕೆ.ಎನ್. ನಾಗ ರಾಜು, ಬಳ್ಳೇಕೆರೆ ಯೋಗೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಮಹೇಂದ್ರ, ಚೇತನ್ ಕುಮಾರ್ ಮತ್ತಿತರರು ಮಾತನಾಡಿದರು.

ಸೆರಗೊಡ್ಡಿ ಮತಭಿಕ್ಷೆ ಕೇಳಿದ ಕಾಂಗ್ರೆಸ್ ಅಭ್ಯರ್ಥಿ ಪತ್ನಿ



ಚುನಾವಣಾ ಪ್ರಚಾರ ಸಭೆಯಲ್ಲಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್. ದೇವರಾಜು ಅವರ ಪತ್ನಿ ಸರ್ವ ಮಂಗಳಾ ಸೆರಗೊಡ್ಡಿ ಮತಭಿಕ್ಷೆ ಕೇಳುವ ಮೂಲಕ ಎಲ್ಲರ ಗಮನ ಸೆಳೆದರು.

ತಾವು ಕುಳಿತ ಜಾಗದಿಂದ ಮೇಲೆದ್ದು ವೇದಿಕೆ ಹತ್ತಿದ ಮಂಗಳಾ ಅವರು ನನ್ನ ಜೀವನ ದಲ್ಲಿ ನಾನೆಂದೂ ರಾಜಕೀಯ ವೇದಿಕೆಗಳನ್ನು ಹತ್ತಿಲ್ಲ. ಆದರೆ ಇಂದು ವೇದಿಕೆ ಹತ್ತಿ ನಿಮ್ಮ ಮುಂದೆ ಸೆರಗೊಡ್ಡಿ ಬೇಡುತ್ತಿದ್ದೇನೆ. ನನ್ನ ಪತಿ ದೇವರಾಜು ಅವರಿಗೆ ಮತ ಭಿಕ್ಷೆ ನೀಡಿ. ನಾನು ಇದೇ ತಾಲೂಕಿನ ಹೆಣ್ಣು ಮಗಳು. ಪತಿ ದೇವರಾಜು ಅವರೊಂದಿಗೆ ಸೇರಿ ನಿಮ್ಮ ಕಷ್ಟ ಸುಖಗಳಿಗೆ ಭಾಗಿಯಾಗುತ್ತೇನೆ. ನನ್ನ ಪತಿಗೆ ಇದೇ ಕೊನೆಯ ಚುನಾವಣೆ. ನನ್ನ ಪತಿಯನ್ನು ಕೈ ಬಿಡಬೇಡಿ ಎಂದು ಸೆರಗೊಡ್ಡಿ ಪರಿಪರಿಯಾಗಿ ಬೇಡುತ್ತಾ ಭಾವುಕರಾದರು.

ಪುಟ್ಟಸ್ವಾಮಿಗೌಡ ನಿಧನ



ಕೆ.ಆರ್.ಪೇಟೆ, ಮೇ 3– ತಾಲೂಕಿನ ಅಗ್ರಹಾರಬಾಚ ಹಳ್ಳಿ ಗ್ರಾಮದ ಹಿರಿಯ ಮುಖಂಡ ರಾದ ಬ್ಯಾಟರಿ ಶಾಪ್ ಪುಟ್ಟಸ್ವಾಮಿ ಗೌಡ (69) ಅವರು ಇಂದು ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 10 ಗಂಟೆಗೆ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಡಾ. ರಾಜ್‌ಕುಮಾರ್ ಅಭಿಮಾನಿಯಾಗಿದ್ದ ಪುಟ್ಟಸ್ವಾಮಿ ಗೌಡರು ಮಿಂಟೋ ಆಸ್ಪತ್ರೆಗೆ ನೇತ್ರದಾನ ಮಾಡುವ ಮೂಲಕ ಸಾರ್ಥಕತೆ ಮೆರೆದಿದ್ದಾರೆ. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕಾಂಗ್ರೆಸ್‌ನಿಂದ ಪಾಲಹಳ್ಳಿ ಚಂದ್ರಶೇಖರ್ ಉಚ್ಚಾಟನೆ



ಮಂಡ್ಯ, ಮೇ 3– ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡ ಪಾಲಹಳ್ಳಿ ಚಂದ್ರಶೇಖರ್ ಅವರನ್ನು 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಶಿಸ್ತು ಪಾಲನಾ ಸಮಿತಿ ಅಧ್ಯಕ್ಷ, ಕೇಂದ್ರದ ಮಾಜಿ ಸಚಿವ ಕೆ.ರೆಹಮಾನ್ ಖಾನ್ ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ಗಳ ವಿರುದ್ಧ ಪಕ್ಷೇತರರಾಗಿ (ಬಂಡಾಯ) ಸ್ಪರ್ಧಿಸಿರುವ ಚಂದ್ರಶೇಖರ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಉಚ್ಚಾಟಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಬಂಡಾಯವಾಗಿ ಸ್ಪರ್ಧೆ ಮಾಡಿರುವ ಚಂದ್ರಶೇಖರ್ ಅವರೊಂದಿಗೆ ಪಕ್ಷದ ಕಾರ್ಯಕರ್ತರಾಗಲಿ, ನಾಯಕರಾಗಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಬಾರದೆಂದು ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಯಾರಾದರೂ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದು ಕಂಡುಬಂದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023

ಮೈಸೂರಲ್ಲಿ 3,000 ಪೊಲೀಸರ ನಿಯೋಜನೆ; 20 ಮಂದಿ ರೌಡಿಶೀಟರ್‌ಗಳ ಗಡಿಪಾರು

1,100 ಶಸ್ತ್ರಾಸ್ತ್ರ ಠೇವಣಿ, ಒಬ್ಬರ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲು

ಮೈಸೂರು, ಮೇ 3(ಆರ್‌ಕೆ)–ಮೇ 10ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ಮೈಸೂರು ನಗರದಲ್ಲಿ ಭಾರೀ ಪೊಲೀಸ್ ಭದ್ರತೆಗೆ ಸರ್ವ ರೀತಿಯಲ್ಲಿ ತಯಾರಿ ನಡೆಸಲಾಗಿದೆ. ಮುಕ್ತ, ಪಾರದರ್ಶಕ ಹಾಗೂ ಶಾಂತಿಯುತ ಮತದಾನಕ್ಕಾಗಿ ಮೈಸೂರು ನಗರ ಪೊಲೀಸ್ ಘಟಕವು ಇನ್ನಿಲ್ಲದ ತಯಾರಿ ನಡೆಸಿದ್ದು, 800 ಅರೆಮಿಲಿಟರಿ ಪಡೆ ಸಿಬ್ಬಂದಿ ಸೇರಿ ಒಟ್ಟು 3,000 ಮಂದಿ ಪೊಲೀಸರನ್ನು ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಈಗಾಗಲೇ ವಿಧಾನಸಭಾ ಚುನಾವಣೆ ಭದ್ರತೆಗಾಗಿ ಮೈಸೂರು ನಗರಕ್ಕೆ ಆಗಮಿಸಿರುವ 10 ಅರೆಸೇನಾ ಪಡೆಯ 800 ಶಸ್ತ್ರಸಜ್ಜಿತ ಸಿಬ್ಬಂದಿಗಳಿಗೆ ನಗರದಾದ್ಯಂತ ಹಾಸ್ಟೆಲ್, ಕಲ್ಯಾಣ ಮಂಟಪ, ಸಮು ದಾಯ ಭವನ, ವಸತಿ ಗೃಹಗಳು, ಕಾಲೇಜು ಕೊಠಡಿ ಗಳಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಿ ಊಟ–ತಿಂಡಿ ಪೂರೈಸಲಾ ಗುತ್ತಿದೆ. ಅವರಿಗೆ ಮತಗಟ್ಟೆಗಳು, ಮತ ಎಣಿಕಾ ಕೇಂದ್ರ, ಚೆಕ್‌ಪೋಸ್ಟ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ಬಗ್ಗೆ ಸೂಚನೆಗಳನ್ನು ನೀಡಿ ಮಾನಸಿಕವಾಗಿ ಸಜ್ಜುಗೊಳಿ ಸಲಾಗಿದೆ. ಈಗಾಗಲೇ ಕಳೆದ 20 ದಿನಗಳಿಂದ ಮೈಸೂರು ನಗರ ಪೊಲೀಸ್ ಘಟಕದ ವ್ಯಾಪ್ತಿಯ ಚೆಕ್‌ಪೋಸ್ಟ್ ಗಳಲ್ಲಿ ವಾಹನ ತಪಾಸಣಾ ಕಾರ್ಯದಲ್ಲಿ ನಿರತರಾಗಿ ರುವ ಅರೆಸೇನಾ ಪಡೆ ಸಿಬ್ಬಂದಿ ಗಳಿಗೆ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆ ಗಳಲ್ಲಿ ಮತದಾನ ದಿನದಂದು ನಿಗಾವಹಿಸುವ ಬಗ್ಗೆ ತಿಳುವಳಿಕೆ ನೀಡ ಲಾಗಿದೆ. ಉಳಿದಂತೆ ನಗರ ಸಿವಿಲ್, ಸಂಚಾರ ಠಾಣೆ, ಮೌಂಟೆಡ್, ಸಿಎಆರ್, ಕೆಎಸ್‌ಆರ್‌ಪಿ, ಕಮಾಂಡೋ ಪಡೆ, ಮಹಿಳಾ ಪೊಲೀಸ್ ಹಾಗೂ ಹೋಂ ಗಾರ್ಡ್ ಸೇರಿ 2,200 ಮಂದಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಚುನಾವಣಾ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು, ಮತಗಟ್ಟೆಗಳಲ್ಲಿ ಕರ್ತವ್ಯ ನಿರ್ವಹಿಸು ವವರು ಆಯಾ ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿ ಕಾರಿಗಳ ಬಳಿ ಮೇ 9ರಂದು ಮಸ್ಟರಿಂಗ್ ಪ್ರಕ್ರಿಯೆ ವೇಳೆ ವರದಿ ಮಾಡಿಕೊಳ್ಳು ವಂತೆ ನಿರ್ದೇಶನ ನೀಡಲಾಗಿದೆ. ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ಎಲ್ಲಾ ಠಾಣೆಗಳ ರೌಡಿಶೀಟರ್‌ಗಳ ಮನೆ ಮೇಲೆ ದಾಳಿ ನಡೆಸಿ ಪರಿಶೀಲಿಸಿರುವ ಪೊಲೀಸ್ ಅಧಿಕಾರಿಗಳು, ಸಕ್ರಿಯವಾಗಿ ರುವವರನ್ನು ಪರೇಡ್ ಮಾಡಿ ಎಚ್ಚರಿಕೆ ನೀಡಲಾಗಿದೆ. ಅಲ್ಲದೆ, ಹಲವು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ರುವ 20 ಮಂದಿ ರೌಡಿಶೀಟರ್‌ಗಳನ್ನು ಗಡಿಪಾರು ಮಾಡಿ ಹೊರ ಜಿಲ್ಲೆಗಳಿಗೆ ಕಳುಹಿಸಲಾಗಿದೆ. ಗಂಭೀರ ಪ್ರಕರಣಗಳಲ್ಲಿ ನೇರವಾಗಿ ಭಾಗಿಯಾಗಿ ಸಮಾಜದ ಶಾಂತಿಗೆ ಭಂಗ ತರುತ್ತಿದ್ದ ಒಬ್ಬ ರೌಡಿ ಆಸಾಮಿ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿ ಸಿರುವ ಪೊಲೀಸರು, ಪರವಾನಗಿ ಪಡೆದು ಖರೀದಿಸಿದ್ದ 1,100 ಶಸ್ತ್ರಾಸ್ತ್ರಗಳನ್ನು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿಗಳ ಬಳಿ ಠೇವಣಿ ಇರಿಸಿಕೊಳ್ಳಲಾಗಿದೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕಾಂಗ್ರೆಸ್ ಹಿರಿಯ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರು ಮೈಸೂರಿಗೆ ಭೇಟಿ ನೀಡಿದ್ದ ವೇಳೆ ಯಶಸ್ವಿ ಬಂದೋ ಬಸ್ತ್ ಮಾಡಿರುವ ಮೈಸೂರು ನಗರ ಘಟಕದ ಪೊಲೀಸರು, ಮೇ 10 ರಂದು ನಡೆಯಲಿರುವ ಸಾರ್ವತ್ರಿಕ ಚುನಾವಣೆಗೂ ಭದ್ರತೆ ಒದಗಿಸಲು ಸರ್ವ ರೀತಿಯಲ್ಲಿ ಸಜ್ಜಾಗಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರಿಂದ ಮತಯಾಚನೆ



ಮೈಸೂರು, ಮೇ 3(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡ ಸಾವಿರಾರು ಕಾರ್ಯಕರ್ತರೊಂದಿಗೆ ಕ್ಷೇತ್ರ ವ್ಯಾಪ್ತಿಯ ಬೀರಿಹುಂಡಿ, ಜೆಟ್ಟಿಹುಂಡಿ ಸೇರಿದಂತೆ ಹಲವು ಗ್ರಾಮಗಳ ಮನೆ ಮನೆಗೆ ತೆರಳಿ ಮತಯಾಚಿಸಿದರು.


ಬಳಿಕ ಮಾತನಾಡಿದ ಅವರು, ಬೂತ್ ಗೆದ್ದರೆ ಕ್ಷೇತ್ರ ಗೆದ್ದಂತೆ. ಮತದಾರರ ಆಶೀರ್ವಾದದಿಂದ ಪ್ರತಿ ಬೂತ್‌ಗಳಲ್ಲಿ ಕಾಂಗ್ರೆಸ್ ಲೀಡ್ ಪಡೆಯಲಿದೆ. ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲು ಕಾರ್ಯಕರ್ತರು ಪಣತೊಟ್ಟಿದ್ದು ಹಗಲಿ ರುಳು ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. ಕ್ಷೇತ್ರದ ಜನತೆ ಬದಲಾವಣೆ ಬಯಸಿದ್ದು, ಈ ಬಾರಿ ಕಾಂಗ್ರೆಸ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಬೀರಿಹುಂಡಿ, ಜೆಟ್ಟಿಹುಂಡಿ, ಕುಮಾರ ಬೀಡು, ಗೋಹಳ್ಳಿ, ಬಲ್ಲಹಳ್ಳಿ, ರಾಮನಹುಂಡಿ, ಕೇರ್ಗಳ್ಳಿ, ಬಡಗಲ ಹುಂಡಿ ಗ್ರಾಮಗಳು ಮೂಲಭೂತ ಸೌಕರ್ಯ ಗಳಿಂದ ವಂಚಿತವಾಗಿವೆ. ಹಾಗೆಯೇ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಗಾಗಿ ನನ್ನನ್ನು ಅತೀ ಹೆಚ್ಚು ಮತಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಕೆಪಿಸಿಸಿ ಸದಸ್ಯ ಕೆ.ಮರೀ ಗೌಡ, ಬೀರಿಹುಂಡಿ ಬಸವಣ್ಣ, ಕೆಂಚಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಮೈಸೂರು ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಾವಿನಹಳ್ಳಿ ರವಿ, ಚಾಮುಂಡೇಶ್ವರಿ ಕ್ಷೇತ್ರ ಪ್ರಚಾರ ಸಮಿತಿ ಅಧ್ಯಕ್ಷ ಕಾಡನ ಹಳ್ಳಿ ಸ್ವಾಮೀಗೌಡ ಮತ್ತಿತರರಿದ್ದರು.

ಕಾರ್ಯಾಗಾರ

ಮೈಸೂರು, ಮೇ 3– ಮೈಸೂರಿನ ಆನ್ ಸ್ಟೇಜ್ ಯೂಥ್ ಥಿಯೇಟರ್ ವತಿಯಿಂದ ರಂಗ ತರಬೇತಿ ಕಾರ್ಯಾಗಾರವನ್ನು ಮೇ 14ರಿಂದ ಜೂನ್ 30ರವರೆಗೆ ವಿಜಯನಗರದಲ್ಲಿ ಆಯೋಜಿಸಲಾಗಿದೆ. ಕಾರ್ಯಾಗಾರ 45 ದಿನಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 9 ರವರೆಗೆ ನಡೆಯಲಿದೆ. ರಂಗಭೂಮಿಯನ್ನು ಕೇಂದ್ರವಾಗಿಟ್ಟುಕೊಂಡು ಅಭಿನಯ, ಚಲನೆ, ಧ್ವನಿ, ಭಾಷೆ ಮುಂತಾದವುಗಳನ್ನು ಹೇಳಿಕೊಡಲಾಗುವುದು.

18 ವರ್ಷ ಮೇಲ್ಪಟ್ಟ ಮಹಿಳೆಯರು ಮತ್ತು ಪುರುಷರು ಕಾರ್ಯಾಗಾರದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಮೊ. 8892314554 ಸಂಪರ್ಕಿಸಬಹುದು.



ಮೈಸೂರಿನ ವಿಜಯನಗರದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ ಪರವಾಗಿ ಅವರ ಪತ್ನಿ ಲಲಿತಾ ಜಿ.ಟಿ.ದೇವೇಗೌಡ, ಪುತ್ರಿ ಯಶೋಧ ಮತಯಾಚಿಸಿದರು. ಈ ವೇಳೆ ಪಾಲಿಕೆ ಸದಸ್ಯೆ ಪ್ರೇಮ ಶಂಕರೇಗೌಡ, ಜಿಪಂ ಮಾಜಿ ಅಧ್ಯಕ್ಷೆ ವನಜಾಕ್ಷಿ ನಾಗರಾಜ್ ಮತ್ತು ಸೋಮು ಇನ್ನಿತರರಿದ್ದಾರೆ.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಅವರು ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಚುನಾವಣೆ ಸಂಬಂಧ ಚರ್ಚಿಸಿದರು. ಕ್ಷೇತ್ರದ ಮತದಾರರು ಕವೀಶ್‌ಗೌಡರನ್ನು ಗೆಲ್ಲಿಸುವಂತೆ ಬಿಎಸ್‌ವೈ ಮನವಿ ಮಾಡಿದರು.

ಕಾಂಗ್ರೆಸ್ ಚುನಾವಣಾ ಪ್ರಚಾರ ವಾಹನಕ್ಕೆ ಚಾಲನೆ



ಮೈಸೂರು,ಮೇ 3(ಎಂಟಿವೈ)– ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಪರ ಚುನಾವಣಾ ಪ್ರಚಾರದ ವಾಹನಕ್ಕೆ ಬುಧವಾರ ಚಾಲನೆ ನೀಡಲಾಯಿತು. ಮೈಸೂರಿನ ಕಾಂಗ್ರೆಸ್ ಭವನದ ಮುಂದೆ ನಡೆದ ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ ಪ್ರಚಾರ ವಾಹ ನಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದ ಜನ ಬೇಸತ್ತಿದ್ದಾರೆ. ಅದಕ್ಕಾಗಿ ಈ ಬಾರಿ ಕಾಂಗ್ರೆಸ್‌ಗೆ ವ್ಯಾಪಕ ಬೆಂಬಲ ದೊರೆಯುತ್ತಿದೆ. ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಕಾರ್ಯಕರ್ತರು ಶ್ರಮಿಸಬೇಕು. ಯಾವುದೇ ವೈಮನಸ್ಸು, ಭಿನ್ನಾಭಿಪ್ರಾಯವಿದ್ದರೆ ಅದನ್ನೆಲ್ಲಾ ಬದಿಗೊತ್ತಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು. ಆ ಮೂಲಕ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತರಲು ಪಣ ತೊಡಬೇಕು ಎಂದು ಮನವಿ ಮಾಡಿದರು. ಎಐಸಿಸಿ ಉಸ್ತುವಾರಿ ಪ್ರಕಾಶ್ ಜೋಶಿ, ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಹೆಗಡೆ, ಮಾಜಿ ಸ್ಪೀಕರ್ ಸುದರ್ಶನ್, ಕೆಪಿಸಿಸಿ ಪ್ರಣಾಳಿಕೆ ಸಮಿತಿಯ ರಾಧಾಕೃಷ್ಣ, ಡಿಸಿಸಿ ಪ್ರಚಾರ ಸಮಿತಿ ರಘುರಾಜೇ ಅರಸ್, ಡಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಶಿವಣ್ಣ, ಗಿರೀಶ್, ಈಶ್ವರ್ ಚಕ್ಕಡಿ, ಚಾಮರಾಜ ಕ್ಷೇತ್ರದ ಪ್ರಚಾರ ಸಮಿತಿಯ ಜಗದೀಶ್, ನಗರ ಉಪಾಧ್ಯಕ್ಷ ಪದ್ಮನಾಭನ್, ಲತಾ ರಂಗನಾಥ್, ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ತಾಸಿನ್, ಕೆಂಪರಾಜೇ ಅರಸು, ಮಹೇಶ್‌ಕುಮಾರ್, ಪದ್ಮ, ಶೋಭಾಗೌಡ, ರಕ್ಷಿತಾ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಪರ ಹಿರಿಯ ಸಾಹಿತಿ ದೇವನೂರು ಮಹಾದೇವ ಮತಯಾಚನೆ



ಮೈಸೂರು, ಮೇ 3(ಎಂಕೆ)– ರಾಜ್ಯದ ಗಮನ ಸೆಳೆದಿರುವ ವರುಣಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಿಎಂ ಸಿದ್ದರಾಮಯ್ಯ ಪರ ಹಿರಿಯ ಸಾಹಿತಿ ದೇವನೂರು ಮಹಾದೇವ(ದೇಮಾ) ಬುಧವಾರ ಮತಯಾಚಿಸಿದರು. ರಾಜ್ಯದಲ್ಲಿ ಡಿ.ದೇವರಾಜ ಅರಸು ಅವರ ನಂತರ ಐದು ವರ್ಷದ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಹಲವು ಜನಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀಡಿರುವ ಸಿದ್ದರಾಮಯ್ಯ ಅವರನ್ನು ಗೆಲ್ಲಿಸುವಂತೆ ಮತದಾರರಲ್ಲಿ ಕೋರಿದರು. ಮಾಜಿ ಅಡ್ವೊಕೇಟ್ ಜನರಲ್ ರವಿವರ್ಮಕುಮಾರ್, ನಿವೃತ್ತ ಐಜಿಪಿ ಅರ್ಕೇಶ್, ರಂಗಾಯಣದ ಪಿಚ್ಚಳ್ಳಿ ಶ್ರೀನಿವಾಸ್, ಡಿಎಸ್‌ಎಸ್‌ನ ಆಲಗೂಡು ಶಿವಕುಮಾರ್ ಮತ್ತಿತರರು ಸಾಥ್ ನೀಡಿದರು.

ಬಂಗಾಳ ಕೊಲ್ಲಿಯಲ್ಲಿ ಮೋಚಾ ಚಂಡಮಾರುತ ಸೃಷ್ಟಿ; ಕರ್ನಾಟಕ ಸೇರಿ ಹಲವೆಡೆ ವ್ಯಾಪಕ ಮಳೆ

ನವದೆಹಲಿ: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿದ್ದು, ಮೇ 6ರ ಆಸುಪಾಸಿನಲ್ಲಿ ಆಗ್ನೇಯ ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತ ರೂಪುಗೊಳ್ಳುವ




ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದೆ. ಇನ್ನು ಮೂರ್ನಾಲ್ಕು ದಿನಗಳಲ್ಲಿ, ಅಂದರೆ ಮೇ 6ರ ಆಸುಪಾಸಿನಲ್ಲಿ ಆಗ್ನೇಯ ಬಂಗಾಳ ಕೊಲ್ಲಿಯಲ್ಲಿ ಮೋಚಾ ಚಂಡಮಾರುತ ರೂಪುಗೊಳ್ಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮಂಗಳವಾರ (ಮೇ 2) ಎಚ್ಚರಿಕೆ ನೀಡಿದ್ದು, ಕರ್ನಾಟಕದ ವಿವಿಧ ಭಾಗಗಳಲ್ಲಿ ಮೇ 7ರವರೆಗೆ ಭಾರೀ ಮಳೆಯಾಗಲಿದೆ ಎಂದು ಮಾಹಿತಿ ನೀಡಿದೆ. ಅಮೆರಿಕದ ಹವಾಮಾನ ಮುನ್ಸೂಚನೆ ಘಟಕವಾದ ಗ್ಲೋಬಲ್ ಫೋರ್‌ಕಾಸ್ಟ್ ಸಿಸ್ಟಮ್ ಮತ್ತು ಮಧ್ಯಮ-ಶ್ರೇಣಿಯ ಹವಾಮಾನ ಮುನ್ಸೂಚನೆಗಳ ಯುರೋಪಿಯನ್ ಕೇಂದ್ರದ ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತದ ರಚನೆ ಕುರಿತ ವರದಿ ಬೆನ್ನಲ್ಲೇ ಐಎಂಡಿ ಎಚ್ಚರಿಕೆ ನೀಡಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಐಎಂಡಿಯ ಹವಾಮಾನ ಶಾಸ್ತ್ರದ ಮಹಾನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ಅವರು, 'ಚಂಡಮಾರುತದ ಪರಿಚಲನೆ ಆರಂಭವಾದ 48 ಗಂಟೆಗಳಲ್ಲಿ ಅದರ ಪ್ರಭಾವದಿಂದಾಗಿ ಅದೇ ಪ್ರದೇಶದಲ್ಲಿ ಕಡಿಮೆ ಒತ್ತಡದ ಪ್ರದೇಶವು ರೂಪುಗೊಳ್ಳಬಹುದು. ಕೆಲವು ಹವಾಮಾನ ಮುನ್ಸೂಚನೆ ಘಟಕಗಳು ಇದು ಸೈಕ್ಲೋನ್ ಎಂದು ಸೂಚಿಸುತ್ತಿವೆ. ನಾವು ತೀವ್ರ ನಿಗಾ ಇಡುತ್ತಿದ್ದೇವೆ. ಈ ಬಗ್ಗೆ ನಿಯಮಿತವಾಗಿ ಅಪ್‌ಡೇಟ್‌ಗಳನ್ನು ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಜೀವನ ಆಧಾರಿತ ಕೃತಿ 'ನೇಗಿಲ ಗೆರೆಗಳು' ಲೋಕಾರ್ಪಣೆ

● ಈಗಾಗಲೇ ಸುಗತ ಶ್ರೀನಿವಾಸರಾಜು ಅವರ ಇಂಗ್ಲಿಷ್ ಕೃತಿ ಬಿಡುಗಡೆ ಆಗಿದೆ ● ಇದರ ಕನ್ನಡ ಅನುವಾದ ಬಿಡುಗಡೆಗೆ ಸಾಕ್ಷಿಯಾದ ದೇವೇಗೌಡರು





ಲೇಖಕಿ ರೋಸ್ಸಿ ಡಿ ಸೋಜ್ಹಾ ಅವರು ಕನ್ನಡಕ್ಕೆ ಅನುವಾದಿಸಿರುವ 'ನೇಗಿಲ ಗೆರೆಗಳು' ಹೆಚ್.ಡಿ.ದೇವೇಗೌಡರ ಬದುಕು ಮತ್ತು ದುಡಿಮೆ ಕೃತಿಯನ್ನು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಬಿಡುಗಡೆ ಮಾಡಿದರು. ಪ್ರೊ.ಕೆ.ಎಸ್.ರಂಗಪ್ಪ, ಹಿರಿಯ ಪತ್ರಕರ್ತ ಸುಗತ ಶ್ರೀನಿವಾಸರಾಜು, ಪ್ರೊ.ಸಿ.ನಾಗಣ್ಣ, ಪ್ರಕಾಶಕ ಜಿ.ಮಹಾಂತೇಶ್ ಇದ್ದರು. ಬಲಚಿತ್ರದಲ್ಲಿ ದೇವೇಗೌಡರಿಂದ ಶಾಸಕ ಜಿ.ಟಿ.ದೇವೇಗೌಡರು ಕೃತಿ ಪಡೆದರು.

ಮೈಸೂರು, ಮೇ 3(ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಹಿರಿಯ ಪತ್ರಕರ್ತ ಸುಗತ ಶ್ರೀನಿವಾಸರಾಜು ಬರೆದಿರುವ FURROWS IN A FIELD THE UNEXPLORED LIFE OF H.D.DEVEGOWDA ಕೃತಿಯ ಕನ್ನಡ ಅನುವಾದ 'ನೇಗಿಲ ಗೆರೆಗಳು' ಹೆಚ್.ಡಿ. ದೇವೇಗೌಡರ ಬದುಕು ಮತ್ತು ದುಡಿಮೆ ಕೃತಿಯನ್ನು ಬುಧವಾರ ಲೋಕಾರ್ಪಣೆಗೊಳಿಸಲಾಯಿತು.

ಲೇಖಕಿ ರೋಸ್ಸಿ ಡಿ ಸೋಜ್ಹಾ ಅವರು ಕನ್ನಡಕ್ಕೆ ಅನುವಾದ ಮಾಡಿರುವ ಹಾಗೂ ಪಾರದರ್ಶಕ ಮಾಧ್ಯಮ ಸಂಸ್ಥೆ ಪ್ರಕಟಿಸಿರುವ ಈ ಕೃತಿಯನ್ನು ಮೈಸೂರು ವಿವಿ ವಿಶ್ರಾಂತ ಕುಲಪತಿ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ. ಎಸ್.ಎನ್.ಹೆಗ್ಡೆ ಬಿಡುಗಡೆ ಮಾಡಿದರು.

ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ, 2021ರಲ್ಲಿ ಬಿಡುಗಡೆಯಾದ ಸುಗತ ಶ್ರೀನಿವಾಸರಾಜು ರಚಿತ ಇಂಗ್ಲಿಷ್ ಗ್ರಂಥ ಸಾವಿರಾರು ಓದುಗರ ಕೈ ಸೇರಿದೆ. ಸುಗತ ಅವರ ಪತ್ನಿ, ಲೇಖಕಿ ರೋಸ್ಸಿ ಡಿ ಸೋಜ್ಹಾ ಕನ್ನಡಕ್ಕೆ ಅನುವಾದ ಮಾಡಿರುವುದು ಶ್ಲಾಘನೀಯ. ಅವರ ಬರವಣಿಗೆ ಶೈಲಿ ಅದ್ಭುತವಾಗಿದೆ ಎಂದು ಅಭಿನಂದಿಸಿದರು.

ಘನ ವ್ಯಕ್ತಿಗಳ ಜೀವನ ಮತ್ತು ಸಾಧನೆಯನ್ನು ದಾಖಲಿಸುವುದು ಅತ್ಯಂತ ಮುಖ್ಯವಾದ ಕಾರ್ಯವಾಗಿದೆ. ಅವರ ಆದರ್ಶಗಳು, ನಡೆದು ಬಂದಂತಹ ಹೋರಾಟ ಹಾದಿ ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗಲಿದೆ. ಅಬ್ರಾಹಂ ಲಿಂಕನ್ ಅವರ ಆತ್ಮಕತೆಯಿಂದ ಪ್ರಭಾವಿತರಾಗಿ ಅವರಂತೆಯೇ ಬೆಳೆದು ಬಂದ ಹೆಚ್.ಡಿ.ದೇವೇಗೌಡರು ನನಗೂ ಪ್ರೇರಣೆಯಾಗಿದ್ದಾರೆ ಎಂದು ಹೇಳಿದರು.

ಅರಸು ಮತ್ತು ಹೆಚ್‌ಡಿಡಿ ಸ್ನೇಹ ಸಂಬಂಧ: ಬಳಿಕ ಕೃತಿ ಕುರಿತು ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸ್ನೇಹ ಸಂಬಂಧದ ಕುರಿತು ಚರ್ಚಿಸಲಾಯಿತು. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದ ನಾಯಕರಾಗಿದ್ದ ಹೆಚ್.ಡಿ.ದೇವೇಗೌಡರು ಸದನದಲ್ಲಿ ಸರ್ಕಾರದ ವಿರುದ್ಧ ಗುಡುಗುತ್ತಿದ್ದರೂ ವೈಯಕ್ತಿಕವಾಗಿ ದೇವರಾಜ ಅರಸು ಅವರೊಂದಿಗೆ ಆತ್ಮೀಯ ಸ್ನೇಹ ಸಂಬಂಧ ಹೊಂದಿದ್ದರು. ಅಲ್ಲದೆ ಅರಸು ಅವರಿಂದಲೇ ನಿನಗೆ ಉತ್ತಮ ಭವಿಷ್ಯವಿದೆ ಎಂದು ಹೇಳಿಸಿಕೊಂಡಿದ್ದ ಹೆಚ್.ಡಿ.ದೇವೇಗೌಡರು, ದೇಶದ ಪ್ರಧಾನ ಮಂತ್ರಿಯಾಗಿ 11 ತಿಂಗಳ ಕಾಲ ಸೇವೆ ಸಲ್ಲಿಸಿದರು. ಕಡಿಮೆ ಅವಧಿಯಲ್ಲೇ ಜಗತ್ತು ಕಂಡ ಅತ್ಯಂತ ಶ್ರೇಷ್ಠ 'ನದಿ ಆಧಾರಿತ ಯೋಜಕ (ರಿವರ್ ಬೆಸೆಡ್ ಪ್ಲಾನರ್)' ಎಂದು ಕರೆಸಿಕೊಂಡವರು ಎಂದು ಹಿರಿಯ ಪತ್ರಕರ್ತ ಸುಗತ ಶ್ರೀನಿವಾಸರಾಜು ಹೇಳಿದರು.

ಹೆಚ್.ಡಿ.ದೇವೇಗೌಡರು ಭಾಗಿ: ತಮ್ಮ ಜೀವನಾಧಾರಿತ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಓದುಗ ಅಭಿಮಾನಿಗಳಿಗೆ ಹಸ್ತಾಕ್ಷರ ನೀಡಿದರು. ಸ್ಥಳದಲ್ಲಿಯೇ 'ನೇಗಿಲ ಗೆರೆಗಳು' ಪುಸ್ತಕ ಖರೀದಿಸಿದ ಹಲವರು ಹಸ್ತಾಕ್ಷರ ಪಡೆದು ಫೋಟೋ ತೆಗೆಸಿಕೊಂಡರು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕೆ.ಆರ್ ಕ್ಷೇತ್ರದ ಅಭ್ಯರ್ಥಿ ಕೆ.ವಿ.ಮಲ್ಲೇಶ್, ಎನ್.ಆರ್ ಕ್ಷೇತ್ರದ ಅಭ್ಯರ್ಥಿ ಅಬ್ದುಲ್ ಶಾಹೀದ್ ಖಾದರ್, ಮುಖಂಡ ಹೆಚ್.ಕೆ.ರಾಮು ಸೇರಿದಂತೆ ಹಲವರು ಗೌಡರ ಆಶೀರ್ವಾದ ಪಡೆದರು. ಲೇಖಕಿ ರೋಸ್ಸಿ ಡಿ ಸೋಜ್ಹಾ, ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಪಾರದರ್ಶಕ ಮಾಧ್ಯಮ ಸಂಸ್ಥೆ ನಿರ್ದೇಶಕ ಜಿ.ಮಹಾಂತೇಶ್ ಉಪಸ್ಥಿತರಿದ್ದರು.

ಹೆಚ್.ಡಿ.ದೇವೇಗೌಡರು ರಾಜಕೀಯ ಮುತ್ಸದ್ದಿ.... ಯುಗಪುರುಷ...

ರಾಜಕೀಯ ಕ್ಷೇತ್ರದ ಅಮೋಘ, ಅದ್ಭುತ ಸಾಧನೆಗಳ ಮೂಲಕ ಎತ್ತರದ ಬದುಕನ್ನು ನಡೆಸಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಬರೀ ರಾಜಕಾರಣಿಯಲ್ಲ. ಅವರೊಬ್ಬ ರಾಜಕೀಯ ಮುತ್ಸದ್ದಿ. ಯುಗಪುರುಷ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಹೇಳಿದರು.

'ನೇಗಿಲ ಗೆರೆಗಳು' ಹೆಚ್.ಡಿ.ದೇವೇಗೌಡರ ಬದುಕು ಮತ್ತು ದುಡಿಮೆ ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಹೆಚ್.ಡಿ. ದೇವೇಗೌಡರ ಸಾಧನೆಗಳು ಬಹಳ ದೊಡ್ಡದು. 20ನೇ ಶತಮಾನದಲ್ಲಿ ಕರ್ನಾಟಕ ಕಂಡ ರಾಜಕೀಯ ಮುತ್ಸದ್ದಿ. ಜೀವನದುದ್ದಕ್ಕೂ ಯಾರಿಗೂ ತಗ್ಗದೆ ಬೆಳೆದಿರುವ ಅವರು, ಲೆಜೆಂಡರಿ ಫಿಗರ್.. ಐಕಾನ್ ಆಗಿದ್ದಾರೆ ಎಂದು ಬಣ್ಣಿಸಿದರಲ್ಲದೆ, ಹೆಚ್.ಡಿ.ದೇವೇಗೌಡರ ಸಾಧನೆ ಮುಂದಿನ ಪೀಳಿಗೆಗೆ ತಿಳಿಯಬೇಕಾದರೆ ಪ್ರಾರಂಭಿಕ ಹಂತವಾಗಿ ಪ್ರಾಥಮಿಕ ಶಾಲಾ ಪಠ್ಯಪುಸ್ತಕಗಳಲ್ಲಿ ಪರಿಚಯಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.



ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷ, ಲಿಂಗಾಂಬುದಿ ಪಾಳ್ಯದ ಮುಖಂಡ ಲಕ್ಷ್ಮಯ್ಯ ಹಾಗೂ ಯಜಮಾನ ಕೃಷ್ಣಪ್ಪ ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಜೆಡಿಎಸ್ ಯುವ ಮುಖಂಡರಾದ ಗುರೂರು ಮಹೇಶ್, ಡೈರಿ ನಿರ್ದೇಶಕ ಸೋಮಶೇಖರ್, ದೇವಯ್ಯ ಇದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ ಅವರ ಯುವ ನಾಯಕತ್ವ ಮೆಚ್ಚಿ ದಡದಹಳ್ಳಿಯ ನೂರಾರು ಯುವಕರು ಕಾಂಗ್ರೆಸ್, ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆಗೊಂಡರು. ಈ ಬಾರಿ ಕವೀಶ್‌ಗೌಡರ ಗೆಲ್ಲಿಸುವ ಸಂಕಲ್ಪ ಮಾಡಿದರು.

ಆಂಜನೇಯನಿಗೂ ಭಜರಂಗದಳಕ್ಕೂ ಸಂಬಂಧವಿಲ್ಲ

ಬೆಂಗಳೂರು: ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದಂತೆ ಅಧಿಕಾರಕ್ಕೆ ಬರುತ್ತಿದ್ದಂತೆ ಭಜರಂಗದಳ ನಿಷೇಧ ಮಾಡೇ ಮಾಡುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹೇಳಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿನ ಭಜರಂಗದಳವನ್ನು ನಿಷೇಧ ಮಾಡುವುದಾಗಿ ಕರ್ನಾಟಕ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗದಳ ನಿಷೇಧದ ಕುರಿತು ಘೋಷಣೆ ಮಾಡುತ್ತಲೇ ಬಿಜೆಪಿ ಮತ್ತು ಹಿಂದೂಪರ ಸಂಘಟನೆಗಳು ಕಾಂಗ್ರೆಸ್ ಪಕ್ಷದ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತಪಡಿಸುತ್ತಿದ್ದು, ಕಾಂಗ್ರೆಸ್ ಘೋಷಣೆ ಮಾಡಿದ್ದೇ ತಡ ರಾಜ್ಯ ರಾಜಕಾರಣದಲ್ಲಿ ಬಿರುಗಾಳಿಯೇ ಸೃಷ್ಟಿಯಾಗಿದೆ.



ಭಜರಂಗದಳಕ್ಕೂ ಆಂಜನೇಯನಿಗೂ ಏನು ಸಂಬಂಧ: ಭಜರಂಗ ದಳಕ್ಕೂ ಹನುಮಂತನಿಗೂ ಏನು ಸಂಬಂಧ. ಹನುಮಂತನೇ ಬೇರೆ, ಭಜರಂಗ ದಳವೇ ಬೇರೆ. ಭಜರಂಗ ದಳಕ್ಕೂ ಹನುಮಂತನಿಗೂ ಸಂಬಂಧವೇ ಇಲ್ಲ. ಭಜರಂಗ ದಳ ಸಂಘಟನೆ ಕಾನೂನಿನ ವ್ಯವಸ್ಥೆಗಳನ್ನು ದುರ್ಬಳಕೆ ಮಾಡುತ್ತಿದೆ. ಕಾನೂನು ಸುವ್ಯವಸ್ಥೆಗೂ ಅದರಿಂದ ಧಕ್ಕೆ ಆಗುತ್ತಿದೆ. ನೈತಿಕ ಪೊಲೀಸ್‌ಗಿರಿಯನ್ನೂ ಮಾಡಿ ಸಮಾಜದ ಶಾಂತಿಗೆ ಧಕ್ಕೆ ತರುತ್ತಿದ್ದಾರೆ ಎಂದು ಡಿಕೆ ಶಿವಕುಮಾರ್ ಹೇಳಿದರು.

ಭಜರಂಗದಳ ನಿಷೇಧ ಸಾಧ್ಯವಿಲ್ಲ



ಹುಬ್ಬಳ್ಳಿ: ದೇಶದಾದ್ಯಂತ ಇರುವ ಸಂಘಟನೆಯಾದ ಭಜರಂಗದಳವನ್ನು ನಿಷೇಧಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ. ಅದು ಕೇಂದ್ರದ ಮಟ್ಟದಲ್ಲಿ ಆಗಬೇಕು. ಅಲ್ಲಿ ಇವರ ಸರ್ಕಾರವಿದೆಯೇ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ನಗರದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಗಲಭೆ ಉಂಟುಮಾಡುವ ಉದ್ದೇಶದಿಂದ ಭಜರಂಗದಳ ನಿಷೇಧಿಸುವ ಬಗ್ಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿದೆ ಎಂದು ವಾಗ್ದಾಳಿ ನಡೆಸಿದರು. ಮೀಸಲಾತಿ ಹೆಚ್ಚಳ ಮಾಡುವ ಭರವಸೆಯನ್ನು ಸಹ ನೀಡಿದ್ದಾರೆ. ನಾವು ಮೀಸಲಾತಿ ಹೆಚ್ಚಳ ಮಾಡಿದ್ದನ್ನು ಸಂವಿಧಾನಕ್ಕೆ ವಿರುದ್ಧವಾದುದು ಎನ್ನುವ ಇವರು, ಹೇಗೆ ಮೀಸಲಾತಿ ಏರಿಕೆ ಮಾಡುತ್ತಾರೆ. ಅಷ್ಟಕ್ಕೂ ಕೇಂದ್ರದ ಮಟ್ಟದಲ್ಲಿ ಅದು ಸಾಧ್ಯವಾಗಲಿದೆಯೇ ಎಂದರು. ಕಾಂಗ್ರೆಸ್‌ನದು ಮೋಸದ ಮತ್ತು ಜನರನ್ನು ಮರುಳು ಮಾಡುವ ಪ್ರಣಾಳಿಕೆಯಾಗಿದೆ. ಬಿಜೆಪಿ ಸರ್ಕಾರ ಮಾಡಿರುವ ಕೆಲಸಗಳನ್ನೇ ತಾವೂ ಮಾಡುವುದಾಗಿ ಹೇಳಿರುವ ಅವರ ಪ್ರಣಾಳಿಕೆಯನ್ನು ಜನ ದಿಕ್ಕರಿಸಲಿದ್ದಾರೆ ಎಂದು ಹೇಳಿದರು.

ಸಚಿವ ವಿ.ಸೋಮಣ್ಣ ಬೆಂಬಲಿಸಲು ಸ್ವಾಭಿಮಾನಿ ಮಡಿವಾಳ ಬಳಗ ನಿರ್ಧಾರ



ಮೈಸೂರು, ಮೇ 3(ಎಸ್‌ಪಿಎನ್)– ಮಡಿವಾಳ ಸಮಾಜಕ್ಕೆ ಪರಿಶಿಷ್ಟ ಜಾತಿ ಸ್ಥಾನಮಾನದ ಹೋರಾಟಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯರಿಂದ ನಿರೀಕ್ಷಿತ ಬೆಂಬಲ ದೊರಕುತ್ತಿಲ್ಲ. ಹಾಗಾಗಿ ನಮ್ಮ ಹೋರಾಟಕ್ಕೆ ಬೆಂಬಲ ನೀಡಿರುವ ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರಿಗೆ ಬೆಂಬಲ ನೀಡುವುದಾಗಿ ವರುಣ ಕ್ಷೇತ್ರದ ಸ್ವಾಭಿಮಾನಿ ಮಡಿವಾಳ ಬಳಗ ಬುಧವಾರ ಘೋಷಿಸಿದೆ.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವರುಣ ಕ್ಷೇತ್ರದ ಸ್ವಾಭಿಮಾನ ಮಡಿವಾಳ ಬಳಗದ ಸಂಚಾಲಕ ಮಾದುರಾಜು, ಈ ಹಿಂದೆ ಮಡಿವಾಳ ಸಮುದಾಯಕ್ಕೆ ಪರಿಶಿಷ್ಟ ಜಾತಿ ಸ್ಥಾನಮಾನ ಕಲ್ಪಿಸುವ ಹೋರಾಟಕ್ಕೆ ಬೆಂಬಲ ಸೂಚಿಸುವಂತೆ ಸಿದ್ದರಾಮಯ್ಯನವರಲ್ಲಿ ಮನವಿ ಮಾಡಲು ಹೋದಾಗ ಮನವಿಯನ್ನೂ ಸ್ವೀಕರಿಸಲಿಲ್ಲ. ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಸಮುದಾಯದವರಿಗೆ ಟಿಕೆಟ್ ನೀಡುವಂತೆ ಮನವಿ ಮಾಡಿದರೂ ಈ ಮನವಿಗೆ ಸರಿಯಾಗಿ ಸ್ಪಂದಿಸಲಿಲ್ಲ. ಈಗ ನೋಡಿದರೆ ವರುಣದಲ್ಲಿ ನಿಮ್ಮ ಸಮುದಾಯದ ಮತವೇ ಬೇಡ ಎಂದು ಉಡಾಫೆಯಿಂದ ಮಾತನಾಡಿರುವುದು ಮಾಧ್ಯಮಗಳಲ್ಲಿ ಪ್ರಸಾರವಾಗಿದೆ ಎಂದರು.

ಸಾರ್ವಜನಿಕ ಸಭೆಗಳಲ್ಲಿ ಸಿದ್ದರಾಮಯ್ಯನವರು ಮಡಿವಾಳ ಸಮುದಾಯಕ್ಕೆ ಸಭಾ ಭವನ ಕಟ್ಟಿಸಿಕೊಟ್ಟೆ, ಐದಾರು ಮುಖಂಡರಿಗೆ ವಿವಿಧ ನಿಗಮ ಮಂಡಳಿಗಳಲ್ಲಿ ಸ್ಥಾನಮಾನ ಕಲ್ಪಿಸಿದ್ದೇನೆ. ವಿವಿಯೊಂದಕ್ಕೆ ನಿಮ್ಮ ಸಮುದಾಯದ ಪ್ರಾಧ್ಯಾಪಕರೊಬ್ಬರನ್ನು ಕುಲಪತಿ ಮಾಡಿದ್ದೇನೆ ಎಂದು ಹೋದಲ್ಲಿ-ಬಂದಲ್ಲಿ ಪದೇಪದೆ ಹೇಳುತ್ತಿರುತ್ತಾರೆ. ಹಾಗಾದರೆ, ಪ್ರಾಧ್ಯಾಪಕರ ಬುದ್ಧಿಶಕ್ತಿ, ಸಾಮರ್ಥ್ಯದ ಮೇಲೆ ಕುಲಪತಿ ನೇಮಕ ಮಾಡಲಾಗಿದೆ ಎಂದು ಇಲ್ಲಿವರೆಗೂ ಭಾವಿಸಲಾಗಿತ್ತು. ಇದೀಗ ಕುಲಪತಿ ಸ್ಥಾನಕ್ಕೂ ಜಾತಿ ಆಧಾರದ ಮೇಲೆ ನೇಮಕವಾಗುತ್ತದೆ ಎಂಬುದು ಸಿದ್ದರಾಮಯ್ಯ ಹೇಳಿಕೆಯಿಂದ ಮನವರಿಕೆಯಾಗಿದೆ ಎಂದು ಬೇಸರ ಹೊರ ಹಾಕಿದರು.

ಬಿ.ಎಸ್.ಯಡಿಯೂರಪ್ಪನವರು 2008ರಲ್ಲಿ ಸಿಎಂ ಆಗಿದ್ದಾಗ ನಮ್ಮ ಸಮುದಾಯದವರನ್ನು ಗುರುತಿಸಿ, ರಾಜಕೀಯ ಸ್ಥಾನಮಾನ ಹಾಗೂ ನಮ್ಮ ಸಮುದಾಯಕ್ಕೆ ಕುಲಶಾಸ್ತ್ರ ಅಧ್ಯಯನಕ್ಕೆ ಆದೇಶ ನೀಡಿದ್ದರು. ಈ ವರದಿ 2013ರಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ನಂತರ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯನವರು ನಮ್ಮ ಬೇಡಿಕೆಯನ್ನು ಕುರಿತು ಮಾತನಾಡಲೇ ಇಲ್ಲ. ಹಾಗಾಗಿ ವರುಣ ಕ್ಷೇತ್ರದ ಸ್ವಾಭಿಮಾನಿ ಮಡಿವಾಳರ ಬಳಗದ ಪದಾಧಿಕಾರಿಗಳು ಈ ಬಾರಿ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಬೆಂಬಲಿಸುವುದಾಗಿ ಘೋಷಿಸಿ, ಮನೆ ಮನೆ ತೆರಳಿ ಬಿಜೆಪಿಗೆ ಮತ ಹಾಕುವಂತೆ ನಮ್ಮ ಸಮುದಾಯದವರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲೆ ವರುಣ ಕ್ಷೇತ್ರದ ಮಡಿವಾಳರ ಸ್ವಾಭಿಮಾನಿ ಬಳಗದ ಸಂಚಾಲಕ ಮಾದುರಾಜು, ಪದಾಧಿಕಾರಿಗಳಾದ ರವಿ, ಸುತ್ತೂರು ಗ್ರಾಪಂ ಮಾಜಿ ಸದಸ್ಯ ಬಸವರಾಜು, ಆಯರಹಳ್ಳಿ ವಿಜಯಕುಮಾರ್, ಮಣಿಕಂಠ, ನಂಜನಗೂಡು ವಿಷ್ಣು ಇದ್ದರು.

ಕಾಂಗ್ರೆಸ್‌ನಲ್ಲಿ ದಲಿತ ನಾಯಕರು ಬೆಳೆಯಲು ಸಿದ್ದರಾಮಯ್ಯ ಬಿಡುತ್ತಿಲ್ಲ

● ಸಂಸದ ಶ್ರೀನಿವಾಸಪ್ರಸಾದ್ ವಾಗ್ದಾಳಿ ● ವರುಣ ವ್ಯಾಪ್ತಿ ಬಿಜೆಪಿ ಎಸ್ಸಿ ಮೋರ್ಚಾ ಸಭೆಯಲ್ಲಿ ಭಾಗಿ



ಮೈಸೂರು, ಮೇ 3(ಎಸ್‌ಪಿಎನ್)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಾರ್ಥ ರಾಜಕಾರಣಿ. ತಾವು ಮುಖ್ಯಮಂತ್ರಿಯಾಗಲು ತಮ್ಮ ಪಕ್ಷದ ಡಾ.ಜಿ.ಪರಮೇಶ್ವರ್ ಸೇರಿದಂತೆ ಇತರೆ ದಲಿತ ಮುಖಂಡರನ್ನು ಸೋಲಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ವಾಗ್ದಾಳಿ ನಡೆಸಿದರು.

ವರುಣ ಕ್ಷೇತ್ರದ ನಾಡನಹಳ್ಳಿಯ ಶ್ರೀ ಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮತ್ತೊಮ್ಮೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಸ್ವಾತಂತ್ರ್ಯ ಬಂದ ಮೇಲೆ ದಲಿತರ ಸ್ಥಿತಿಗತಿಗಳು ಏನಿದೆ ಎಂಬುದನ್ನು ವಿಶೇಷವಾಗಿ ಪ್ರಧಾನಿ ಮೋದಿ ಗಮನಹರಿಸಬೇಕು ಎಂದು ಸಲಹೆ ನೀಡಿದ್ದೇನೆ. ಕಾಂಗ್ರೆಸ್ ಸರ್ಕಾರದಿಂದ ದಲಿತರಿಗೆ ಏನೂ ಅನುಕೂಲಗಳಾಗಿಲ್ಲ. ಸಿದ್ದರಾಮಯ್ಯ ಸ್ವಾರ್ಥ ರಾಜಕಾರಣಿ. ತಾವು ಮುಖ್ಯಮಂತ್ರಿಯಾಗಲು ತಮ್ಮ ಪಕ್ಷದ ದಲಿತರನ್ನು ಬೆಳೆಯಲು ಬಿಡುತ್ತಿಲ್ಲ ಎಂದು ಟೀಕಿಸಿದರು.

ನನ್ನ ಐವತ್ತು ವರ್ಷ ರಾಜಕಾರಣದ ಜೀವನದಲ್ಲಿ ನಾನು ಹಂತ ಹಂತವಾಗಿ ಹೋರಾಟ ಮಾಡಿ ಮೇಲೆ ಬಂದಿದ್ದೇನೆ. ಯಾರಿಗೂ ನಾನು ತಲೆಬಾಗುವುದಿಲ್ಲ. ಸಿದ್ದರಾಮಯ್ಯ ರಾಜ್ಯದ ಬೇರೆ ಬೇರೆ ಕ್ಷೇತ್ರಗಳನ್ನು ಅಲೆದು ಕೊನೆಗೆ ವರುಣಕ್ಕೆ ಬಂದಿದ್ದಾರೆ. ಇಲ್ಲಿ ಅವರ ಸಾಮರ್ಥ್ಯ ತೋರಿಸಲಿ ಎಂದು ಸವಾಲು ಹಾಕಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೋರಾಟಗಾರರಲ್ಲ. ಅವರು, ಅವಕಾಶವಾದಿ ರಾಜಕಾರಣಿ. ಖರ್ಗೆ ಎಂದೂ ಹೋರಾಟ ಮಾಡಿ ರಾಜಕಾರಣದಲ್ಲಿ ಮೇಲೆ ಬಂದವರಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಸೋಲು ಅನುಭವಿಸಿದರು. ಆದರೆ, ಅಧಿಕಾರ ಇಲ್ಲದೆ, ಅವರು ಬದುಕಿರಲಾರರು ಎಂದು ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಸಿ.ಎಂ ಮಹದೇವಯ್ಯ, ನಟ ಕೆ.ಶಿವರಾಂ, ವರುಣ ಮಂಡಲ ಅಧ್ಯಕ್ಷ ವಿಜಯಕುಮಾರ್, ಜಿಪಂ ಮಾಜಿ ಸದಸ್ಯ ಸದಾನಂದ, ಗುರುಸ್ವಾಮಿ, ಕಾಪು ಸಿದ್ದಲಿಂಗಸ್ವಾಮಿ, ಚುನಾವಣಾ ವೀಕ್ಷಕ ಪ್ರಕಾಶ್, ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ, ಅರಕಲವಾಡಿ ನಾಗೇಂದ್ರ, ಬಿಜೆಪಿ ಮುಖಂಡರಾದ ನರಸಿಂಹಮೂರ್ತಿ, ವರಹಳ್ಳಿ ನಾಗೇಂದ್ರ, ಶ್ರೀಧರಶಿವಯ್ಯ, ಮಂಜು, ಆನಂದರಾಜು, ಬಲರಾಜು, ನರಸಿಂಹಮೂರ್ತಿ ಸೇರಿದಂತೆ ಇತರರಿದ್ದರು.

ವಿರಾಜಪೇಟೆಯಲ್ಲಿ ಸದಾನಂದಗೌಡ ರೋಡ್ ಶೋ



ವಿರಾಜಪೇಟೆ, ಮೇ 3– ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆ ವಿರಾಜಪೇಟೆಯಲ್ಲಿ ಡಿ.ವಿ. ಸದಾನಂದಗೌಡ ಅವರು ಬಿಜೆಪಿ ಅಭ್ಯರ್ಥಿ ಕೆ.ಜಿ. ಬೋಪಯ್ಯ ಪರ ರೋಡ್ ಶೋ ನಡೆಸಿದರು.

ನಗರದ ತೆಲುಗರ ಬೀದಿಯ ಮಾರಿಯಮ್ಮ ದೇವಸ್ಥಾನ ದಿಂದ ಜೈನರ ಬೀದಿ, ದೊಡ್ಡಟ್ಟಿ ಚೌಕಿ ಮೂಲಕ ಗಡಿಯಾರ ಕಂಬ ಮಾರ್ಗವಾಗಿ ಖಾಸಗಿ ಬಸ್ ನಿಲ್ದಾಣದವರೆಗೆ ರೋಡ್ ಶೋ ನಡೆಸಲಾಯಿತು. ಬಳಿಕ ಮಾತನಾಡಿದ ಅವರು, ಕೊಡಗು ಎಂದಿಗೂ ದೇಶಪ್ರೇಮದ ನಾಡು. ಈ ಕ್ಷೇತ್ರಗಳಿಗೆ ಬಿಜೆಪಿ ಸರ್ಕಾರ ಹಲವು ವಿಶೇಷ ಪ್ಯಾಕೇಜ್‌ಗಳನ್ನು ನೀಡಿದೆ. ಡಬಲ್ ಎಂಜಿನ್ ಸರ್ಕಾರ ಸಾಕಷ್ಟು ಜನಪರ ಕೆಲಸ ಮಾಡಿದೆ. ಕೋವಿಡ್ ಸಂದರ್ಭ ಅತ್ಯುತ್ತಮ ಕಾರ್ಯನಿರ್ವಹಣೆ ಮಾಡಿ ಜನಪ್ರಿಯ ಅಭಿವೃದ್ಧಿ ಕಾರ್ಯ ಮಾಡುವ ಮೂಲಕ ಉತ್ತಮ ಆಡಳಿತ ವನ್ನು ನೀಡುವುದು ನಮ್ಮ ಆದ್ಯತೆಯಾಗಿದೆ ಎಂದರು.

ರಾಜ್ಯದಲ್ಲಿ ಪೂರ್ಣ ಬಹುಮತದ ಬಿಜೆಪಿ ಸರಕಾರ ಅಧಿಕಾರಕ್ಕೆ ಬರಬೇಕಿದೆ. ಕೊಡಗಿನ ಶಾಸಕರು ಕೊಡಗಿಗೆ ಮೆಡಿಕಲ್ ಕಾಲೇಜ್ ಸೇರಿದಂತೆ ಹೆಚ್ಚು ಅನುದಾನ ತಂದು ಜನರಿಗೆ ಕುಡಿಯುವ ನೀರು ಮತ್ತು ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಕೆ.ಜಿ.ಬೋಪಯ್ಯ ಅವರಿಗೆ ಮತ ನೀಡುವಂತೆ ಮನವಿ ಮಾಡಿದರು.

ಬಿಜೆಪಿ ಅಭ್ಯರ್ಥಿ ಕೆಜಿ.ಬೋಪಯ್ಯ ಮಾತನಾಡಿ, ಕೊರೊನಾ ಕಾಲದಲ್ಲಿ, ಪ್ರಕೃತಿ ವಿಕೋಪ ಸಂದರ್ಭ ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಸಾಕಷ್ಟು ಪ್ರಮಾಣದಲ್ಲಿ ಅನುದಾನ ಗಳನ್ನು ಸರಕಾರ ನೀಡಿದೆ. ಸಾಮಾನ್ಯ ರೈತಾಪಿ ವರ್ಗಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಬಿಜೆಪಿ ಸರಕಾರ ಕೆಲಸ ಮಾಡಿ ಜನರಿಗೆ ಎಲ್ಲ ಸೌಲಭ್ಯವನ್ನು ನೀಡಿದೆ ಎಂದರು.

ಈ ಸಂದರ್ಭ ಬಿಜೆಪಿಯ ಜಿಲ್ಲಾ ಮಾಜಿ ಅಧ್ಯಕ್ಷ ಮನು ಮುತ್ತಪ್ಪ ಮಾತನಾಡಿ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕೆಲವರು ಷಡ್ಯಂತ್ರ ನಡೆಸುತ್ತಿದ್ದಾರೆ, ಜನ ಈ ಬಾರಿ ಜಾಗೃತಿ ವಹಿಸಬೇಕಿದೆ. ಕೊಡಗಿನ ಇಬ್ಬರು ಶಾಸಕರಿಂದ ಜನತೆಗೆ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿದ್ದು, ಸ್ಥಳಿಯ ಅಭ್ಯರ್ಥಿ ಬೋಪಯ್ಯ ಅವರನ್ನು ಗೆಲ್ಲಿಸಬೇಕಾಗಿದೆ ಎಂದರು.

ಈ ಸಂದರ್ಭ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ಶಿಸ್ತು ಸಮಿತಿ ಸದಸ್ಯೆ ರೀನಾ ಪ್ರಕಾಶ್, ಬಿಜೆಪಿ ಪ್ರಮುಖ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಹಾಗೂ ಪಕ್ಷದ ಪ್ರಮುಖರು ಕಾರ್ಯಕರ್ತರು ರೋಡ್ ಶೋ ಸಂದರ್ಭ ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪಾದಯಾತ್ರೆ ಮೂಲಕ ಮತಯಾಚಿಸಿದ ಅಪ್ಪಚ್ಚುರಂಜನ್



ಕುಶಾಲನಗರ, ಮೇ 3– ತಾಲೂಕಿನ ಗಡಿಗ್ರಾಮಗಳಾದ ಶಿರಂಗಾಲ, ತೊರೆ ನೂರು ಹಾಗೂ ಹೆಬ್ಬಾಲೆ ಗ್ರಾಮ ಪಂಚಾ ಯಿತಿ ವ್ಯಾಪ್ತಿಯಲ್ಲಿ ಬುಧವಾರ ಬಿಜೆಪಿ ಅಭ್ಯರ್ಥಿ ಎಂ.ಪಿ.ಅಪ್ಪಚ್ಚುರಂಜನ್ ಬಿರು ಸಿನ ಚುನಾವಣಾ ಪ್ರಚಾರ ನಡೆಸಿದರು.

ಶಿರಂಗಾಲ ಗೇಟ್‌ನಿಂದ ಅಪ್ಪಚ್ಚು ರಂಜನ್ ಅವರು ಅಪಾರ ಬೆಂಬಲಿಗ ರೊಂದಿಗೆ ಮತಯಾಚನೆ ಆರಂಭಿಸಿ ದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತದಾರರಿಗೆ ಬಿಜೆಪಿ ಪಕ್ಷದ ಕಮಲದ ಗುರುತಿಗೆ ಮತ ನೀಡುವಂತೆ ಮನವಿ ಮಾಡಿದರು.

ತೊರೆನೂರು, ಅಳುವಾರ, ಸಿದ್ದಲಿಂಗ ಪುರ ಗ್ರಾಮಗಳಿಗೆ ಭೇಟಿ ನೀಡಿದ ರಂಜನ್ ಪಕ್ಷದ ಮುಖಂಡರೊಂದಿಗೆ ಮತಯಾಚನೆ ಮಾಡಿದರು. ನಂತರ ಹೆಬ್ಬಾಲೆ, ಹುಲುಸೆ ಗ್ರಾಮದಲ್ಲಿ ಪ್ರಚಾರ ವಾಹನದಲ್ಲಿ ಮೆರ ವಣಿಗೆ ನಡೆಸಿದರು. ಈ ಸಂದರ್ಭ ರಂಜನ್ ಅವರ ಮೇಲೆ ಕಾರ್ಯಕರ್ತರು ಹೂವಿನ ಮಳೆ ಸುರಿಸಿದರು. ಮಹಿಳೆಯರು ಆರತಿ ಮಾಡಿ ಬರಮಾಡಿಕೊಂಡರು.

ಮತಯಾಚನೆ ನಂತರ ಹೆಬ್ಬಾಲೆಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಭ್ಯರ್ಥಿ ಅಪ್ಪಚ್ಚುರಂಜನ್, ರಾಜ್ಯ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋಟ್ಯಂತರ ರೂ. ಅನುದಾನ ತಂದು ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಒತ್ತು ನೀಡ ಲಾಗಿದೆ. ವಿದ್ಯಾಸಂಸ್ಥೆಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಮಡಿಕೇರಿಯಲ್ಲಿ ಜನರಲ್ ತಿಮ್ಮಯ್ಯ ಅವರ ವಿಧಾನಪರಿಷತ್ ಮಾಜಿ ಸದಸ್ಯ ಎಸ್, ಜಿ ಮೇದಪ್ಪ ಮಾತನಾಡಿ, ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿ ಅಭ್ಯರ್ಥಿಗೆ ಮತ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭ ಕುಶಾಲ ನಗರ ಪುರಸಭೆಯ ಅಧ್ಯಕ್ಷ ಬಿ.ಜೈವರ್ಧನ್, ಜಿಪಂ ಮಾಜಿ ಅಧ್ಯಕ್ಷ ಹೆಚ್.ಎಸ್. ಅಶೋಕ್, ಮಾಜಿ ಸದಸ್ಯ ಹೆಚ್.ಎಸ್.ಶ್ರೀನಿವಾಸ್, ಬಿಜೆಪಿ ಶಕ್ತಿಕೇಂದ್ರದ ಅಧ್ಯಕ್ಷ ಪರಮೇಶ್, ಗ್ರಾಪಂ ಉಪಾಧ್ಯಕ್ಷೆ ಅರುಣಾಕುಮಾರಿ, ಸದಸ್ಯರಾದ ಚಂದ್ರಶೇಖರ್, ಜೋಗಿ, ವೆಂಕಟೇಶ್, ದೇವರಾಜು ಸೇರಿದಂತೆ ಬಿಜೆಪಿ ಪಕ್ಷದ ವಿವಿಧ ಘಟಕದ ಅಧ್ಯಕ್ಷರು, ಸದಸ್ಯರು, ಪದಾಧಿಕಾರಿಗಳು ಇದ್ದರು.

ಕೊಡಗು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ರಾಜೀನಾಮೆ

ಮಡಿಕೇರಿ, ಮೇ 3– ಕಾಂಗ್ರೆಸ್ ನಾಯಕರ ಅಸಹಕಾರ ಧೋರಣೆಯಿಂದ ಕೊಡಗು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಎಸ್. ಅನಂತ್ ಕುಮಾರ್ ತಮ್ಮ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಘೋಷಿಸಿದ್ದಾರೆ.

ಈ ಕುರಿತು ಮಡಿಕೇರಿಯಲ್ಲಿ ಸುದ್ದಿ ಗೋಷ್ಠಿ ಮೂಲಕ ರಾಜೀನಾಮೆ ಪ್ರಕಟಿಸಿದ ಅನಂತ್ ಕುಮಾರ್, ಪಕ್ಷದ ಜಿಲ್ಲಾಧ್ಯಕ್ಷರು ಹಾಗೂ ಜಿಲ್ಲಾ ಮುಖಂಡರು ಅಸಹಕಾರ ಧೋರಣೆ ತೋರುತ್ತಿದ್ದಾರೆ. ಇದರಿಂದ ತೀವ್ರ ನೋವಾಗಿದ್ದು, ಪಕ್ಷಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿದರು.

ಕಾಂಗ್ರೆಸ್‌ನಿಂದ ಗ್ರಾಪಂ ಹಾಗೂ ತಾಪಂ ಸದಸ್ಯರಾಗಿ ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷ ಸಂಘಟನೆಗೆ ಶ್ರಮಿಸಿ ದ್ದೇನೆ. ಇದೀಗ ಚುನಾವಣಾ ಸಮಯದಲ್ಲೂ ತಮಗೆ ಪಕ್ಷದಲ್ಲಿ ಮನ್ನಣೆ ನೀಡುತ್ತಿಲ್ಲ ಎಂದು ಆರೋಪಿಸಿದರು. ಪಕ್ಷ ಸಂಘಟನೆ ಯಲ್ಲಿ ಜಿಲ್ಲಾ ಕಾಂಗ್ರೆಸ್‌ನ ನಾಯಕರ ವೈಫಲ್ಯ ಕಂಡು ಬರುತ್ತಿದೆ. ಕಳೆದ 25 ವರ್ಷ ಗಳಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಸೋಲಿಗೆ ಕಾಂಗ್ರೆಸ್‌ನವರೇ ಕಾರಣ ಎಂಬ ಮಾತಿದೆ. ಆದರೆ ತಾನು ಪಕ್ಷದಲ್ಲಿದ್ದು ದ್ರೋಹ ಬಗೆಯು ವುದಿಲ್ಲ, ಆದ್ದರಿಂದ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದು, ಕಾಂಗ್ರೆಸ್ ಪಕ್ಷ ಹಾಗೂ ಅಭ್ಯರ್ಥಿಯ ಸೋಲಿಗೆ ಪಣತೊಟ್ಟಿದ್ದೇನೆ ಎಂದು ಘೋಷಿಸಿದರು. ಬಿಜೆಪಿ ಪಕ್ಷದ ನಾಯಕರು ಸಂಪರ್ಕದಲ್ಲಿದ್ದಾರೆ. ಇನ್ನೆರಡು ದಿನಗಳಲ್ಲಿ ನಿರ್ಧಾರ ಪ್ರಕಟಿಸುವುದಾಗಿ ಅನಂತ್‌ಕುಮಾರ್ ಹೇಳಿದರು.

ಜೆಡಿಎಸ್‌ನಿಂದ ರೋಡ್ ಶೋ, ಬಹಿರಂಗ ಸಭೆ

ಹೆಚ್‌ಡಿಕೆ ಅಭಿವೃದ್ಧಿ ಕೆಲಸ ಮುಂದಿಟ್ಟುಕೊಂಡು ಮತಯಾಚನೆ

ವಿರಾಜಪೇಟೆ, ಮೇ 3– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ವಿರಾಜಪೇಟೆ ನಗರದ ಪ್ರಮುಖ ಬೀದಿಗಳಲ್ಲಿ ರೋಡ್ ಶೋ, ಬಹಿರಂಗ ಸಭೆ ನಡೆಸಿ ಅಭ್ಯರ್ಥಿ ಎಂ.ಎ.ಮನ್ಸೂರ್ ಆಲಿ ಪರ ಮತಯಾಚಿಸಲಾಯಿತು.

ಇಲ್ಲಿನ ಗಡಿಯಾರ ಕಂಬ ಮತ್ತು ಖಾಸಗಿ ಬಸ್ ನಿಲ್ದಾಣದ ಬಳಿ ನಡೆದ ಬಹಿರಂಗ ಸಭೆಯಲ್ಲಿ ಜೆಡಿಎಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಕೆ.ಎಂ.ಗಣೇಶ್ ಮಾತನಾಡಿ, ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ರೈತರು ಮತ್ತು ಕಾರ್ಮಿಕರಿಗೆ ಉತ್ತಮ ಯೋಜನೆಗಳನ್ನು ಜಾರಿಗೆ ತಂದಿದ್ದರು. ಕೊಡಗಿನ ಪ್ರಕೃತಿ ವಿಕೋಪದ ಸಂದರ್ಭ ಅನೇಕ ಬಾರಿ ಕೊಡಗು ಜಿಲ್ಲೆಗೆ ಭೇಟಿ ನೀಡಿ ನಿರಾಶ್ರಿತರಿಗೆ ಮನೆ ಹಾಗೂ ಇಲ್ಲಿನ ಜನರ ಕಷ್ಟಗಳಿಗೆ ಸ್ಪಂದಿಸಿದ್ದಾರೆ. ರಾಜ್ಯದಲ್ಲಿ ರೈತರ ಸಾಲಮನ್ನಾ ಮಾಡಿದಂತ ಏಕೈಕ ಮುಖ್ಯ ಮಂತ್ರಿ ಕುಮಾರಸ್ವಾಮಿ. ಹೆಚ್‌ಡಿಕೆ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಮತದಾರರ ಮುಂದಿಟ್ಟು ಮತಯಾಚಿಸಲಾಗಿದ್ದು ಜೆಡಿಎಸ್ ಪಕ್ಷ ಗೆಲುವು ಖಚಿತ ಎಂದರು.

ಜೆಡಿಎಸ್ ಪಕ್ಷದ ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷೆ ಪುಷ್ಪಾವತಿ ರಮೇಶ್ ಮಾತ ನಾಡಿ, ಕಾಂಗ್ರೆಸ್ ಪಕ್ಷ 70 ವರ್ಷಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡದೇ ಈಗ ಗ್ಯಾರಂಟಿ ಕಾರ್ಡ್ ಕೊಡುತ್ತಿದೆ. ಈ ಚುನಾವಣೆಯಲ್ಲಿ ಮತದಾರರು ಜೆಡಿಎಸ್



ಪಕ್ಷದತ್ತ ಒಲವು ತೋರಿದ್ದಾರೆ. ಕುಮಾರ ಸ್ವಾಮಿ ಮತ್ತೊಂದು ಬಾರಿ ಮುಖ್ಯಮಂತ್ರಿ ಆಗಲಿದ್ದಾರೆ. ಕೊಡಗಿನ ಹಿಂದುಳಿದ ಜನರಿಗೆ ಇನ್ನೂ ಹೆಚ್ಚು ಮನೆಗಳ ನಿರ್ಮಾಣ ಕಾರ್ಯ ಮಾಡಲಿದ್ದಾರೆ ಎಂದರು.

ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷ ಇಸಾಕ್ ಖಾನ್ ಮಾತನಾಡಿ, ರಾಷ್ಟ್ರೀಯ ಪಕ್ಷಗಳೆ ರಡು ಜಾತಿ, ಧರ್ಮ, ಕೋಮುಗಳ ಮಧ್ಯೆ ವಿಷ ಬೀಜ ಬಿತ್ತುತ್ತಿವೆ. ಅಲ್ಪಸಂಖ್ಯಾತರ ರನ್ನು ಬಳಸಿಕೊಂಡು ಇದುವರೆಗೂ ಯಾವುದೇ ಸ್ಥಾನಮಾನ ನೀಡಿಲ್ಲ. ಕೊಡಗಿನಲ್ಲಿ ಕಳೆದ 20 ವರ್ಷಗಳಿಂದಲೂ ಗ್ರಾಮೀಣ ಭಾಗದ ಜನರಿಗೆ ಮೂಲ ಸೌಲಭ್ಯಗಳೇ ದೊರಕಿಲ್ಲ. ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಬೆಂಬಲಿಸುವಂತೆ ಜನರ ಬಳಿ ಹೋಗಿ ದ್ದೇವೆ ಎಂದರು. ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಪಿ.ಎ.ಮಂಜುನಾಥ್, ಜಿಲ್ಲಾ ಅಲ್ಪಸಂಖ್ಯಾತ ಘಟಕದ ಜಾಸೀರ್, ಕಾರ್ಯದರ್ಶಿ ಮೋಹನ್ ಮೌರ್ಯ ಮಾತನಾಡಿದರು. ರೋಡ್ ಶೋ ಮತ್ತು ಸಭೆಯಲ್ಲಿ ಯುಸೂಫ್ ಕೊಂಡಂಗೇರಿ, ಕಾಲೇರ ಆಲಿ, ಅಮ್ಮತ್ತಿ ಜಯಮ್ಮ ಚೋಕಂಡಳ್ಳಿ ಮಜೀದ್, ಟಿ.ಆರ್.ಹರ್ಷ, ಪಂದ್ಯಂಡ ರವಿ ಮಾದಪ್ಪ, ಬಾಳೆಕುಟ್ಟಿರ ದಿನಿ, ಸೇರಿದಂತೆ ಕಾರ್ಯಕರ್ತರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 3– ಪೊನ್ನಂಪೇಟೆ ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾರ್ಯವನ್ನು ನಿರ್ವಹಿಸಬೇಕಿರುವುದರಿಂದ ಮೇ 4 ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಪೊನ್ನಂಪೇಟೆ, ಗೋಣಿಕೊಪ್ಪಲು, ನಲ್ಲೂರು, ಹುದಿಕೇರಿ, ತಿತಿಮತಿ, ಹಾತೂರು, ಪಾಲಿಬೆಟ್ಟ, ಶ್ರೀಮಂಗಲ, ಬಾಳಲೆ, ಕಾನೂರು, ಬಿರುನಾಣಿ, ಕುಟ್ಟ ವಿರಾಜಪೇಟೆ, ಬಿ.ಶೆಟ್ಟಿಗೇರಿ, ಬೇತ್ರೀ, ಕಡಂಗಮರೂರು, ಕಾಕೋಟುಪರಂಬು, ಅಮ್ಮತ್ತಿ, ಸಿದ್ದಾಪುರ, ಮಾಲ್ದಾರೆ, ಮೂರ್ನಾಡು, ಮರುಗೋಡು, ನಾಪೋಕ್ಲು, ಕಕ್ಕಬೆ, ಅರೆಕಾಡು, ಐಯ್ಯಂಗೇರಿ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ

ಮೇ 6, ಮತದಾನ ಮಹತ್ವ ಸಾರುವ ಸಂದೇಶ

ಮಡಿಕೇರಿ, ಮೇ 3– ಕೊಡಗು ಜಿಲ್ಲಾಡಳಿತ ಹಾಗೂ ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ (ಸ್ವೀಪ್) ವತಿಯಿಂದ ಮೇ 6 ರಂದು ಬೆಳಗ್ಗೆ 10 ಗಂಟೆಗೆ ಬಾಳೆಲೆ ಬಳಿಯ ಕಾರ್ಮಾಡು ಗ್ರಾಮದಲ್ಲಿ ಮತದಾನದ ಮಹತ್ವ ಸಾರುವ ನಿಟ್ಟಿನಲ್ಲಿ ಮಿನಿ ವಿಮಾನಗಳ ಹಾರಾಟ ಪ್ರಾತ್ಯಕ್ಷಿಕೆ ಆಯೋ ಜಿಸಲಾಗಿದೆ ಎಂದು ಕೊಡಗು ಜಿಪಂ ಸಿಇಓ ಮತ್ತು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಡಾ.ಎಸ್.ಆಕಾಶ್ ತಿಳಿಸಿದ್ದಾರೆ.

ಮೇ 6 ರಂದು ಬೆಳಗ್ಗೆ 10 ಗಂಟೆಗೆ ಬಾಳೆಲೆ ಕಾರ್ಮಾಡು ಗ್ರಾಮದ ಕೊಳ್ಳಿಮಾಡ ರಾಜ ಗಣಪತಿ ಮತ್ತು ತಂಡದಿಂದ ಗ್ರಾಮದ ಖಾಸಗಿ ಏರ್‌ಸ್ಟ್ರಿಪ್‌ನಲ್ಲಿ 30ಕ್ಕೂ ಅಧಿಕ ಮಿನಿ ವಿಮಾನಗಳ ಪ್ರದರ್ಶನ ಮತ್ತು ಹಾರಾಟ ಕಾರ್ಯಕ್ರಮ ನಡೆಯಲಿದೆ. ಯುವ ಮತದಾರರು, ಗ್ರಾಮಸ್ಥರು, ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸದಸ್ಯರು, ಸಾರ್ವಜನಿಕರು ಈ ವಿಭಿನ್ನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಿನಿ ವಿಮಾನಗಳ ಹಾರಾಟದ ಪ್ರದರ್ಶನ ವೀಕ್ಷಿಸಿ ಮತದಾನದ ಮಹತ್ವ ಮತ್ತು ಮೇ 10 ರಂದು ಮತದಾನ ಮಾಡಿ ಎಂಬ ಸಂದೇಶವನ್ನು ಎಲ್ಲೆಡೆ ಸಾರುವಂತೆ ಡಾ.ಆಕಾಶ್ ಅವರು ಕೋರಿದ್ದಾರೆ.

36 ದಿನಗಳ ಧರಣಿ ಕೈಬಿಟ್ಟ ಕಾನ್ಶಿರಾಂ ನಿವಾಸಿಗಳು

ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಮನವಿಗೆ ಸ್ಪಂದಿಸಿದ ಪ್ರತಿಭಟನಾಕಾರರು

ಮಡಿಕೇರಿ, ಮೇ 3– ನಿವೇಶನದ ಹಕ್ಕುಪತ್ರ ಮತ್ತು ಮೂಲಭೂತ ಸೌಲಭ್ಯಗಳಿಗಾಗಿ ಒತ್ತಾಯಿಸಿ ಹೊದ್ದೂರು ಗ್ರಾ.ಪಂ ವ್ಯಾಪ್ತಿಯ ಪಾಲೇಮಾಡು ಕಾನ್ಶಿರಾಂ ನಗರದ ನಿವಾಸಿಗಳು ಕಳೆದ 36 ದಿನಗಳಿಂದ ನಡೆಸುತ್ತಿದ್ದ ಧರಣಿ ಸತ್ಯಾಗ್ರಹ ಅಂತ್ಯಗೊಂಡಿದೆ.



ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸ್ಥಳಕ್ಕೆ ಆಗಮಿಸಿ ಸೂಕ್ತ ಭರವಸೆ ನೀಡಿರುವ ಹಿನ್ನೆಲೆ ಧರಣಿಯಿಂದ ಹಿಂದೆ ಸರಿದಿರುವುದಾಗಿ ಸ್ಥಳೀಯರು ತಿಳಿಸಿದ್ದಾರೆ.

ಮಡಿಕೇರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್ ಗೌಡ ಅವರ ಸಲಹೆಯಂತೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ, ಜಿ.ಪಂ ಮಾಜಿ ಸದಸ್ಯ ಪಿ.ಎಂ.ಲತೀಫ್, ಗ್ರಾ.ಪಂ ಅಧ್ಯಕ್ಷರಾದ ಕುಸುಮಾವತಿ ಹಾಗೂ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಮೊಣ್ಣಪ್ಪ ಅವರುಗಳು ಸ್ಥಳಕ್ಕೆ ಭೇಟಿ ನೀಡಿ ಧರಣಿ ನಿರತರೊಂದಿಗೆ ಸಮಾಲೋಚಿಸಿದರು. ಚುನಾವಣೆ ಬಳಿಕ ಬೇಡಿಕೆಗಳಿಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು. ಚುನಾವಣಾ ಬಹಿಷ್ಕಾರದ ನಿರ್ಧಾರ ಕೈಬಿಡುವಂತೆ ಮನವೊಲಿಸಿದರು.

ಧರಣಿ ನಿರತರು ಮಾತನಾಡಿ, ಕಳೆದ 36 ದಿನಗಳಿಂದ 260 ಕುಟುಂಬಗಳು ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದರೂ ಯಾರೂ ನಮ್ಮನ್ನು ತಿರುಗಿ ನೋಡಿಲ್ಲ. ಅರೆಬೆತ್ತಲೆ ಧರಣಿ ಆರಂಭಿಸಿದರೂ ನಮ್ಮ ನೋವಿಗೆ ಸ್ಪಂದನೆ ದೊರೆತ್ತಿಲ್ಲ. ಆದರೆ ಇದೀಗ ಕಾಂಗ್ರೆಸ್ ಪ್ರಮುಖರು ಭೇಟಿ ನೀಡಿ ಬೇಡಿಕೆ ಪರ ಸೂಕ್ತ ಭರವಸೆ ನೀಡಿದ್ದಾರೆ. ಆದ್ದರಿಂದ ತಾತ್ಕಾಲಿಕವಾಗಿ ಧರಣಿಯನ್ನು ಸ್ಥಗಿತಗೊಳಿಸಲಾಗುವುದು ಎಂದು ತಿಳಿಸಿದರು. ಡಿಸಿಸಿ ಸದಸ್ಯ ಪುಷ್ಪ ಪೂಣಚ್ಚ, ಗ್ರಾ.ಪಂ ಸದಸ್ಯ ಹಮೀದ್, ಬ್ಲಾಕ್ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ ರೌವೂಫ್, ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಯಶ್ ದೋಳ್‌ಪಾಡಿ, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಾಫಿ ಕೊಟ್ಟಮುಡಿ, ಹೊದ್ದೂರು ವಲಯಾಧ್ಯಕ್ಷ ಇಬ್ರಾಹಿಂ, ಪ್ರಮುಖರಾದ ಎಂ.ಎಸ್.ಆನಂದ, ಪಿ.ಸಿ.ಸುರೇಶ್, ಗೋವಿಂದ, ಯೂನುಸ್, ಧನಂಜಯ, ರಿಯಾಜ್, ಸುಹೇಲ್, ಭಗವಾನ್ ಮತ್ತಿತರರು ಹಾಜರಿದ್ದರು.

ಚಾ.ನಗರದಲ್ಲಿ ಸೋಮಣ್ಣ ಬಿರುಸಿನ ಪ್ರಚಾರ



ಚಾಮರಾಜನಗರ, ಮೇ 3– ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಚಿವ ವಿ. ಸೋಮಣ್ಣ ಬುಧವಾರ ನಗರದ ನಗರಸಭಾ ವ್ಯಾಪ್ತಿಯಲ್ಲಿ ಭರ್ಜರಿ ಪ್ರಚಾರ ನಡೆಸಿ, ಮತಯಾಚಿಸಿದರು.

ಬೆಳಗ್ಗೆ ರಾಮಸಮುದ್ರದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ, ಪ್ರಚಾರ ಆರಂಭಿ ಸಿದರು. ನಂತರ ರಾಮಸಮುದ್ರದ ಪ್ರಮುಖ ಬೀದಿಗಳಲ್ಲಿ ತೆರೆದ ವಾಹನ ದಲ್ಲಿ ನಿಂತು ಕೈ ಮುಗಿಯುತ್ತಾ ಮತ ಯಾಚಿಸಿದರು. ಬಸ್ ನಿಲ್ದಾಣದ ಬಳಿ ಇರುವ ಶ್ರೀಸಿದ್ಧಗಂಗಾ ವೃತ್ತದ ನಾಮ ಫಲಕಕ್ಕೆ ಮಾಲಾರ್ಪಣೆ ಮಾಡಿದರು. ಈ ವೇಳೆ ಅನಾರೋಗ್ಯಕ್ಕೆ ಒಳಗಾಗಿರುವ ನಗರಸಭಾ ಸದಸ್ಯ ಪ್ರಕಾಶ ಅವರ ಮನೆಗೆ ತೆರಳಿ ಅವರ ಆರೋಗ್ಯ ವಿಚಾರಿಸಿ, ಧೈರ್ಯ ತುಂಬಿದರು. ನಂತರ ಚೆನ್ನಿಪುರದಮೋಳೆ, ನಗರದ ಹಲವು ಬಡಾವಣೆಗಳಿಗೆ ತೆರಳಿ ಮತಯಾಚಿಸಿದರು. ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ ಸೇರಿದಂತೆ ಅನೇಕ ಬೀದಿಗಳಿಗೆ ತೆರಳಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಎಂ. ರಾಮಚಂದ್ರ, ಜಿ. ನಾಗಶ್ರೀ ಪ್ರತಾಪ್, ಅಮ್ಮನಪುರ ಮಲ್ಲೇಶ್, ಆಶಾ ನಟರಾಜು, ಗಣೇಶ್ ದೀಕ್ಷಿತ, ಕೆ. ವೀರಭದ್ರಸ್ವಾಮಿ, ಪಾಪು, ಮಹದೇವಯ್ಯ, ನಾರಾಯಣ್‌ಪ್ರಸಾದ್, ಸುಂದರ್ ಇತರರಿದ್ದರು.

ರಾಮನ ಭಂಟ ಹನುಮನನ್ನೇ ಬೇಡ ಎಂದರೆ ಹೇಗೆ?

ಬಜರಂಗದಳ ನಿಷೇಧದ ಪ್ರಸ್ತಾಪ: ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ಚಾಮರಾಜನಗರ, ಮೇ 3– ಬಜರಂಗದಳ ಈ ದೇಶದ ಅವಿಭಾಜ್ಯ ಅಂಗ. ರಾಮನ ಬಂಟ ಹನುಮನನ್ನೇ ಕಾಂಗ್ರೆಸ್ ಬೇಡ ಎಂದರೆ ಹೇಗೆ..? ಎಂದು ಕಾಂಗ್ರೆಸ್ ವಿರುದ್ಧ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ವಾಗ್ದಾಳಿ ನಡೆಸಿದರು.

ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ನಡೆಸಿ ಬಳಿಕ ಬಜರಂಗದಳವನ್ನು ನಿಷೇಧಿಸುವ ಕಾಂಗ್ರೆಸ್‌ನವರ ಹೇಳಿಕೆಯನ್ನು ಖಂಡಿಸಿ ಮಾತನಾಡಿ, ಕಾಂಗ್ರೆಸ್ ಪಕ್ಷದವರು ಒಂದೊಂದು ದಿನ ಒಂದೊಂದು ರೀತಿ ಮಾತನಾಡುತ್ತಾರೆ. ಇದೇನಾ 75 ವರ್ಷಗಳ ಕಾಲ ಆಡಳಿತ ನಡೆಸಿದವರ ರೀತಿ! ದೇವರು, ಸಂಪ್ರದಾಯಗಳೇ ಬೇಡ ಎಂದರೆ ಈ ದೇಶಕ್ಕೆ ಭವಿಷ್ಯ ಉಳಿಯುತ್ತಾ ಎಂದು ಕಿಡಿಕಾರಿದರು.

ಸಂಪ್ರದಾಯಗಳು ಭಾರತೀಯರ ಕೊಡುಗೆಯಾಗಿದೆ. ರಾಮನ ಭಕ್ತ ಹನುಮಂತನೂ ಬೇಡ ಅಂದ್ರೆ ಹೇಗೆ?. ಇವರ ಮನೇಲಿ ಪೂಜೆ ಮಾಡಲ್ವಾ, ಕುಂಕುಮ ಹಾಕಲ್ವಾ, ವಿಭೂತಿ ಬಳಸಲ್ವಾ, ಇದೇನಿದು ಇವರು ದಿನಕ್ಕೊಂದು ರೀತಿ ಆಡ್ತಾರೆ. ನಾವೇನೂ ಅಭಿವೃದ್ಧಿ ಮಾಡಿದ್ದೇವೆ, ಅವರೇನೂ ಅಭಿವೃದ್ಧಿ ಮಾಡಿದ್ದಾರೆ ಎಂಬ ವಿಚಾರ ಇಟ್ಟುಕೊಂಡು ಚುನಾವಣೆಗೆ ಹೋಗಲಿ. ಅದನ್ನು ಬಿಟ್ಟು ಈ ರೀತಿ ಮಾಡುವುದು ಸರಿಯಲ್ಲ. ಶಾಸಕ ಎನ್ನುವುದು ಉದ್ಯೋಗ ಅಲ್ಲ, ಜನರ ಸೇವೆಗೆ ಸಿಗುವ ಅವಕಾಶ. ಎಲ್ಲವನ್ನೂ ಜನರು ತೀರ್ಮಾನ ಮಾಡುತ್ತಾರೆ ಎಂದು ಕಾಂಗ್ರೆಸ್ ಪ್ರಣಾಳಿಕೆಗೆ ಅಸಮಾಧಾನ ಹೊರಹಾಕಿದರು.

ಮೇ 13ರ ನಂತರ ಕಾಂಗ್ರೆಸ್ ಗ್ಯಾರಂಟಿ ಕಾರ್ಡುಗಳು ಬಿಸಾಕಬೇಕಾಗುತ್ತದೆ

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಾಗ್ದಾಳಿ



ಗುಂಡ್ಲುಪೇಟೆ, ಮೇ 3– ಕರುನಾಡಲ್ಲಿ ಕಾಂಗ್ರೆಸ್ ಮುಳುಗುತ್ತಿರುವ ಹಡಗು, ಇವರ ಗ್ಯಾರಂಟಿ ಕಾರ್ಡ್‌ಗಳು ಮೇ 13ರ ನಂತರ ಬಿಸಾಕಬೇಕಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿ ಯೂರಪ್ಪ ವ್ಯಂಗ್ಯವಾಡಿದರು.

ಪಟ್ಟಣದ ನೆಹರೂ ಪಾರ್ಕ್‌ನಲ್ಲಿ ಏರ್ಪಡಿಸಲಾಗಿದ್ದ ಬಿಜೆಪಿಯ ಪ್ರಚಾರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುವ ಹಗಲು ಕನಸು ಕಾಣುತ್ತಿದೆ. ಇದು ಸಾಧ್ಯವಿಲ್ಲ. ಮೋದಿ ಮತ್ತು ಅಮಿತ್ ಶಾ ಅವರ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಬಿಜೆಪಿಯ ರಾಜ್ಯ ಸರ್ಕಾರ ರಾಜ್ಯದ ಜನತೆಗೆ ನೀಡಿರುವ ಜನಪರ ಯೋಜನೆ ಗಳು ನಮ್ಮನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುತ್ತದೆ. ಇದರಲ್ಲಿ ಯಾವುದೇ ಸಂಶಯ ವಿಲ್ಲ. ಮೋದಿ ಮತ್ತು ಅಮಿತ್ ಶಾ ಮುಂದೆ ರಾಹುಲ್ ಗಾಂಧಿಯ ಯಾವ ಆಟವೂ ನಡೆಯುವುದಿಲ್ಲ ಎಂದರು.

ಸಂಪೂರ್ಣ ಬಹುಮತದ ವಿಶ್ವಾಸ: ಈ ಬಾರಿ ಬಿಜೆಪಿ ಸಂಪೂರ್ಣವಾದ ಬಹುಮತವನ್ನು ಪಡೆಯಲಿದೆ. ಜನರಿಗೆ ಮತ್ತಷ್ಟು ಹತ್ತಿರವಾಗುವ ಯೋಜನೆಗಳನ್ನು ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಹೆಚ್ಚೆಚ್ಚು ಅಭಿವೃದ್ಧಿ ಮಾಡುತ್ತೇವೆ. ಈ ಕ್ಷೇತ್ರವನ್ನು ರಾಜ್ಯದಲ್ಲಿಯೇ ಮಾದರಿ ಕ್ಷೇತ್ರವನ್ನಾಗಿ ಸಲು ನಾನು ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ. ಬಿಜೆಪಿಯೇ ಭರವಸೆ ಎಂದರು. ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಜನರನ್ನು ಕಂಡು ಸಂತಸ ವ್ಯಕ್ತಪಡಿಸಿದ ಯಡಿ ಯೂರಪ್ಪ ಮುಂದೆ ಐವತ್ತಕ್ಕೂ ಹೆಚ್ಚು ಸಹಸ್ರ ಜನರು ಸೇರಿ ಶಾಸಕ ನಿರಂಜನ ಕುಮಾರ್ ಅವರ ವಿಜಯೋತ್ಸವವನ್ನು ಆಚರಿಸೋಣ. ಅದಕ್ಕೂ ನಾನು ಬರುತ್ತೇನೆ ಎಂದರು.

ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ನನ್ನ ಜೊತೆಗಿರಿ: ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಸಿ.ಎಸ್.ನಿರಂಜನಕುಮಾರ್ ಮಾತ ನಾಡಿ, ಕ್ಷೇತ್ರದಲ್ಲಿ ಮತ್ತಷ್ಟು ಕೆರೆಗಳಿಗೆ ನೀರು ತುಂಬಿಸುವುದು, ಮೂಲ ಸೌಕರ್ಯ ಗಳನ್ನು ಒದಗಿಸುವುದು ಹಾಗೂ ಶೈಕ್ಷಣಿಕ, ಸಾಮಾಜಿಕ, ಆರೋಗ್ಯ ಕ್ಷೇತ್ರಗಳಲ್ಲಿ ಹೆಚ್ಚು ಅಭಿವೃದ್ಧಿ ಪಡಿಸಲು ಪಣ ತೊಟ್ಟಿದ್ದು, ಈ ಬಾರಿಯೂ ಸಹ ನನ್ನನ್ನು ಗೆಲ್ಲಿಸುವುದರೊಂ ದಿಗೆ ಮತ್ತಷ್ಟು ಅಭಿವೃದ್ಧಿ ನನ್ನ ಬೆಂಬಲಿಸಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಕೇಸರಿಮಯವಾದ ಪಟ್ಟಣ: ಹನೂರಿ ನಿಂದ ಕಾರ್ಯಕ್ರಮ ಮುಗಿಸಿ ಹೆಲಿಕಾಪ್ಟರ್ ಮುಖಾಂತರ ದೇವರಾಜ ಅರಸು ಕ್ರೀಡಾಂಗಣಕ್ಕೆ ಆಗಮಿಸಿದ ಯಡಿಯೂರಪ್ಪ ಅವರನ್ನು ಶಾಸಕ ಸಿ.ಎಸ್.ನಿರಂಜನ ಕುಮಾರ್ ಮತ್ತು ಗಣ್ಯರು ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ಕಾರಿನಲ್ಲಿ ವೇದಿಕೆ ಕಾರ್ಯಕ್ರಮಕ್ಕೆ ಯಡಿಯೂರಪ್ಪ ಅಗಮಿಸುತ್ತಿದ್ದಂತೆಯೇ ಜೈಕಾರದ ಘೋಷಣೆಗಳನ್ನು ಕೂಗಿದರು. ಯಡಿ ಯೂರಪ್ಪ ಆಗಮನದ ಹಿನ್ನೆಲೆಯಲ್ಲಿ ಪಟ್ಟಣವು ಕೇಸರಿಮಯವಾಗಿದ್ದು, ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಹಸ್ರಾರು ಕಾರ್ಯ ಕರ್ತರು, ಅಭಿಮಾನಿಗಳು ನೆರೆದಿದ್ದರು.

ಕಾರ್ಯಕ್ರಮದಲ್ಲಿ ಕೊಳ್ಳೇಗಾಲ ಶಾಸಕ ಮಹೇಶ್, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಮುಖಂಡರಾದ ಜಗದೀಶ್, ಎನ್.ಮಲ್ಲೇಶ್, ಮಹದೇವಪ್ರಸಾದ್, ಎಲ್.ಸುರೇಶ್, ಪ್ರಣಯ್, ಶಶಿಧರ್‌ದೀಪು, ಕಿರಣ್, ಎಸ್.ಸಿ.ಮಂಜುನಾಥ್, ನಾಗರಾಜಪ್ಪ, ನವೀನ್, ಮಹೇಶ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಇದ್ದರು.

ಇಂದು ಮತದಾನ ಜಾಗೃತಿ ಜಾಥಾ

ಚಾಮರಾಜನಗರ, ಮೇ 3– ಚಾಮರಾಜ ನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸ್ವೀಪ್ ಸಮಿತಿ ವತಿಯಿಂದ ಮತದಾರರ ಜಾಗೃತಿಗಾಗಿ ಮೇ 4ರಂದು ಸಂಜೆ 4.30 ಗಂಟೆಗೆ ನಗರದ ಭುವನೇಶ್ವರಿ (ಪಚ್ಚಪ್ಪ) ವೃತ್ತದಿಂದ ಜಿಲ್ಲಾಡಳಿತ ಭವನದವರೆಗೆ ಕಾಲ್ನಡಿಗೆ ಜಾಥಾ ಏರ್ಪಡಿಸಲಾಗಿದೆ ಎಂದು ಚಾಮರಾಜನಗರ ವೈದ್ಯಕೀಯ ವಿಜ್ಞಾನ ಗಳ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಮಾಂಸ ಮಾರಾಟ ನಿಷೇಧ

ಚಾಮರಾಜನಗರ, ಮೇ 3– ಚಾಮರಾಜ ನಗರ ನಗರಸಭಾ ವ್ಯಾಪ್ತಿಯಲ್ಲಿ ಮೇ 5ರಂದು ಬುದ್ಧ ಪೂರ್ಣಿಮ ಪ್ರಯುಕ್ತ ಪ್ರಾಣಿವಧೆ ಹಾಗೂ ಮಾಂಸ ಮಾರಾಟ ವನ್ನು ನಿಷೇಧಿಸಲಾಗಿದೆ.

ಅಂದು ಪ್ರಾಣಿವಧೆ ಹಾಗೂ ಮಾಂಸ ಮಾರಾಟ ಮಾಡುವುದು ಕಂಡು ಬಂದಲ್ಲಿ ಸಂಬಂಧಪಟ್ಟವರ ಉದ್ದಿಮೆ ಪರವಾನಿಗೆ ಯನ್ನು ರದ್ದುಪಡಿಸಿ ಕಾನೂನು ಕ್ರಮ ಜರುಗಿಸ ಲಾಗುವುದು ಎಂದು ನಗರಸಭಾ ಪೌರಾ ಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಆರ್‌ಕೆ ಪರ ಪುತ್ರ, ಜಿಎನ್‌ಎನ್ ಪುತ್ರರಿಂದ ಪ್ರಚಾರ



ಯಳಂದೂರು, ಮೇ 3– ಕಾಂಗ್ರೆಸ್ ಅಭ್ಯರ್ಥಿ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಪರ ಅವರ ಪುತ್ರ ವರ್ಧನ್ ಹಾಗೂ ಮತ್ತೊಬ್ಬ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಪುತ್ರ ಲೋಕೇಶ್ ಹಾಗೂ ಪಟ್ಟಣ ಪಂಚಾಯಿತಿ ಕಾಂಗ್ರೆಸ್ ಪಕ್ಷದ ಸದಸ್ಯರು ಪಟ್ಟಣದಲ್ಲಿ ಮಂಗಳವಾರ ಮನೆ ಮನೆಗೆ ತೆರಳಿ ಚುನಾವಣಾ ಪ್ರಚಾರ ನಡೆಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಮುಖಂಡ ವರ್ಧನ್ ಮಾತನಾಡಿ, ನಮ್ಮ ತಾತ ಹಾಗೂ ತಂದೆ ಮಂತ್ರಿಯಾಗಿ, ಶಾಸಕರಾಗಿ ಈ ಹಿಂದೆ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಅವರು ಕಳೆದ 2 ಲೋಕಸಭಾ ಹಾಗೂ 4 ವಿಧಾನಸಭಾ ಚುನಾವಣೆಗಳಲ್ಲಿ ಸೋತಿದ್ದಾರೆ. ಆದರೂ ಕೂಡ ಅವರ ಜನಪ್ರಿಯತೆ ಕ್ಷೇತ್ರದಲ್ಲಿ ಇನ್ನೂ ಮಾಸಿಲ್ಲ. ಇವರು ಮಾಡಿರುವ ಕೆಲಸಗಳು ಇವರಿಗೆ ಶ್ರೀರಕ್ಷೆಯಾಗಿವೆ. ಕಾಂಗ್ರೆಸ್ ಪಕ್ಷ ಈ ಬಾರಿಯೂ ಟಿಕೆಟ್ ನೀಡಿದೆ. ಅಲ್ಲದೆ ಪಕ್ಷದ ತತ್ವ ಸಿದ್ಧಾಂತಗಳು ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರೂ ಸೇರಿದಂತೆ ಎಲ್ಲಾ ವರ್ಗಗಳ ಬಡವರ ಉದ್ಧಾರವೇ ಆಗಿದೆ. ಈಗ ಬಿಡುಗಡೆ ಮಾಡಿರುವ ಪಕ್ಷದ ಪ್ರಣಾಳಿಕೆ ಗಳೂ ಬಡವರ ಪರವಾಗಿದೆ. ಹಾಗಾಗಿ ಪಕ್ಷದ ಅಭ್ಯರ್ಥಿಯಾದ ಎ.ಆರ್. ಕೃಷ್ಣಮೂರ್ತಿಯವರಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು. ಪಟ್ಟಣದ 11 ವಾರ್ಡ್‌ಗಳಿಗೂ ಮನೆ ಮನೆಗಳಿಗೆ ತೆರಳಿ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷೆ ಪ್ರಭಾವತಿ ರಾಜಶೇಖರ್, ಉಪಾಧ್ಯಕ್ಷೆ ಲಕ್ಷ್ಮಿ ಮಲ್ಲು, ಸದಸ್ಯರಾದ ಮಹೇಶ್, ವೈ.ಜಿ. ರಂಗನಾಥ, ಮಹದೇವನಾಯಕ, ಕೆ. ಮಲ್ಲಯ್ಯ, ಮಂಜು, ಬಿ. ರವಿ, ಸುಶೀಲಾ ಪ್ರಕಾಶ್, ಶಾಂತಮ್ಮ ನಿಂಗರಾಜು ಮಾಜಿ ಸದಸ್ಯರಾದ ಜೆ. ಶ್ರೀನಿವಾಸ್, ಟಿಎಪಿಸಿಎಂಸಿ ಸದಸ್ಯ ಮಹೇಶ್, ಲಿಂಗರಾಮೂರ್ತಿ, ಪ್ರವೋದ್, ಮುನವ್ವರ್ ಬೇಗ್, ಅಪ್ಸರ್‌ಖಾನ್, ರಿಜ್ವಾನ್, ಸೇರಿದಂತೆ ಅನೇಕರು ಇದ್ದರು.

ಶರರಾ ಹೆಸ್ತರ್ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ

ಚಾಮರಾಜನಗರ, ಮೇ 3– ಕೊಳ್ಳೇ ಗಾಲ ನಿಸರ್ಗ ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯಲ್ಲಿ



ವ್ಯಾಸಂಗ ಮಾಡು ತ್ತಿದ್ದ ಶರರಾ ಹೆಸ್ತರ್ 600 ಅಂಕಗಳಿಗೆ 578 ಅಂಕಗಳನ್ನು (ಶೇ. 96.33) ಗಳಿಸಿ ಅತ್ಯುತ್ತಮ ಶ್ರೇಣಿ ಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 98, ಇಂಗ್ಲಿಷ್‌ನಲ್ಲಿ 93, ಭೌತಶಾಸ್ತ್ರ 98, ರಸಾಯನಶಾಸ್ತ್ರ 94, ಗಣಿತ 99, ಜೀವಶಾಸ್ತ್ರ 96 ಅಂಕಗಳಿಸಿದ್ದಾರೆ. ಈಕೆ ಚಾಮರಾಜ ನಗರದ ರಾಮಸಮುದ್ರದ ಬಾಲರ ಪಟ್ಟಣ ಶಾಲೆಯ ಮುಖ್ಯ ಶಿಕ್ಷಕ ಬಿ. ಸುಜಯ್‌ಕುಮಾರ್ ಹಾಗೂ ಕೊಳ್ಳೇ ಗಾಲದ ಬಿಎಂಎಚ್‌ಪಿ ಶಾಲೆಯ ಮುಖ್ಯ ಶಿಕ್ಷಕಿ ಹನಾಶೀಲಾ ಅವರ ಪುತ್ರಿ.

ಬಿಜೆಪಿ ಪ್ರಣಾಳಿಕೆ ಜನಪರವಾದದ್ದು

ವಿ. ಸೋಮಣ್ಣ ಬೆಂಬಲಿಸಲು ಮಲ್ಲಿಕಾರ್ಜುನಪ್ಪ ಮನವಿ

ಚಾಮರಾಜನಗರ ಮೇ 3– ಬಿಜೆಪಿ ಪಕ್ಷದ ಚುನಾವಣಾ ಪ್ರಣಾಳಿಕೆ ಜನಪರ ವಾಗಿದ್ದು, ಅದರ ಅನುಷ್ಠಾನಕ್ಕಾಗಿ ಮತದಾರರು ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿ ಸಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಮನವಿ ಮಾಡಿ



ದರು. ನಗರದ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತ ನಾಡಿದರು. ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಹಲವು ಭರವಸೆಗಳನ್ನು ನೀಡಿದೆ. ಈ ಭರವಸೆಗಳು ಜನಪರವಾದವು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಈ ಭರವಸೆಗಳನ್ನು ಈಡೇರಿಸಲಿದೆ. 2018ರ ಚುನಾವಣಾ ಸಂದರ್ಭದಲ್ಲಿ ನೀಡಿದ್ದ ಭರವಸೆಗಳನ್ನು ಶೇ. 90ರಷ್ಟು ಭರವಸೆಗಳನ್ನು ಈಡೇರಿಸಲಾಗಿದೆ ಎಂದರು.

ಚಾಮರಾಜನಗರ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಅವರನ್ನು ಗೆಲ್ಲಿಸಲು ಶಕ್ತಿಮೀರಿ ಶ್ರಮಿಸುತ್ತಿದ್ದೇನೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಮತದಾರರು ಈ ಬಾರಿ ಬಿಜೆಪಿ ಅಭ್ಯರ್ಥಿ ಸೋಮಣ್ಣ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್. ಸುಂದರ್, ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಮುಖಂಡ ನೂರೊಂದುಶೆಟ್ಟಿ ಹಾಜರಿದ್ದರು.

ಒಂದನೇ ಪುಟದಿಂದ

ಜಲಾಶಯದ ನೀರಿನ ಮಟ್ಟ 85.96ಕ್ಕೆ ಕುಸಿತ

ಪ್ರತಿ ದಿನ 400 ರಿಂದ 500 ಕ್ಯೂಸೆಕ್ಸ್ ನೀರು ಜಲಾಶಯಕ್ಕೆ ಹರಿದು ಬರುತ್ತಿತ್ತು. ಅಲ್ಲದೆ ಮಂಡ್ಯ ಜಿಲ್ಲೆಯಲ್ಲಿ ಬೆಳೆದು ನಿಂತಿರುವ ಬೆಳೆಗೆ ಭರವಸೆಯಂತೆ ನೀರು ಹರಿಸಲೇಬೇಕಾಗಿರುವುದರಿಂದ ವಿಶ್ವೇಶ್ವರಯ್ಯ ನಾಲೆ ಮೂಲಕ 15 ದಿನಕ್ಕೊಮ್ಮೆ ನೀರು ಹರಿಸಲಾಗುತ್ತಿದೆ ಎಂದು ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಜೂನ್ ತಿಂಗಳಲ್ಲಿ ಮಳೆ ಆರಂಭವಾದಲ್ಲಿ ಬೇಸಾಯಕ್ಕೆ ನೀರು ಪೂರೈಸಬೇಕೆಂಬ ಒತ್ತಡವಿರುವುದಿಲ್ಲ. ನಂತರ ಒಳಹರಿವಿನಲ್ಲಿ ಹೆಚ್ಚಳವಾದಲ್ಲಿ ಈ ವರ್ಷ ನೀರಿನ ಸಮಸ್ಯೆ ಉಂಟಾಗುವುದಿಲ್ಲ. ಜೂನ್, ಜುಲೈನಲ್ಲಿ ಮಳೆ ಬೀಳದಿದ್ದಲ್ಲಿ ಮಾತ್ರ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಲಿದೆ ಎಂದು ತಿಳಿಸಿದ್ದಾರೆ.

ಮೈಸೂರು ನಗರಕ್ಕೆ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡುವ ಹಳೇ ಉಂಡುವಾಡಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಒಂದು ವೇಳೆ ಯೋಜನೆ ಪೂರ್ಣಗೊಂಡಲ್ಲಿ ಮೈಸೂರು ನಗರವಷ್ಟೇ ಅಲ್ಲದೆ, ಸುತ್ತಲಿನ 92 ಗ್ರಾಮಗಳಿಗೂ ಕುಡಿಯುವ ನೀರು ಪೂರೈಸಬಹುದಾಗಿದೆ. 150 ರಿಂದ 300 ಎಂಎಲ್‌ಡಿ (ಮಿಲಿಯನ್ ಲೀಟರ್ಸ್ ಪರ್ ಲೀಟರ್) ನೀರಿನ ಕೊರತೆ ನೀಗಿಸಲೆಂದು ಅನುಷ್ಠಾನಗೊಳಿಸುತ್ತಿರುವ ಯೋಜನೆ ಸಾಕಾರಗೊಂಡಲ್ಲಿ ಬೇಸಿಗೆ ಕಾಲದಲ್ಲೂ ಕುಡಿಯುವ ನೀರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ತಳ ಸೇರಿದರೂ ಹಳೇ ಉಂಡುವಾಡಿ ಯೋಜನೆ ಮೂಲಕ ಮೈಸೂರು ನಗರ ಮತ್ತು ಸುತ್ತಲಿನ ಗ್ರಾಮಗಳಿಗೆ ನಿರಂತರವಾಗಿ ನೀರು ಪೂರೈಸಬಹುದೆಂದು ಮೈಸೂರು ಮಹಾನಗರಪಾಲಿಕೆಯ ವಾಣಿ ವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಮಂತ್ರಿ ರೇಸ್‌ನಲ್ಲಿ ಸೋಮಣ್ಣ!

ಸಂತೋಷ್ ಅವರ ರಾಜಕೀಯ ನಡೆ ಈ ಭಾಗದಲ್ಲಿ ಒಂದಷ್ಟು ಯಶಸ್ಸು ತಂದಂತಿದೆ. ಇದರ ಬೆನ್ನಲ್ಲೇ ಅಮಿತ್ ಶಾ ನಿನ್ನೆ ವರುಣ ಕ್ಷೇತ್ರದ ಮತದಾರರ ಮುಂದೆ ಪರಿಷ್ಕರ ಅನಿಸಿಕೆಯನ್ನು ಮುಂದಿಟ್ಟಿದ್ದಾರೆ ಎನ್ನಲಾಗಿದೆ. ವಿಧಾನಸಭಾ ಚುನಾವಣೆಗೂ ಮುನ್ನ ಸೋಮಣ್ಣ ಅವರ ಮನೆಗೆ ತೆರಳಿದ್ದ ಶಾ ಮತ್ತು ಸಂತೋಷ್, ಕರ್ನಾಟಕದಲ್ಲಿ ನಮ್ಮ ಪಕ್ಷಕ್ಕೆ ನೀವು ಭವಿಷ್ಯದ ನಾಯಕ ಎಂದಿದ್ದರು. ತದ ನಂತರ ಗೋವಿಂದರಾಜನಗರದ ಬದಲು ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸಲು ವಿ.ಸೋಮಣ್ಣ ಅವರು ಬಯಸಿದಾಗ, ಯಾವ ತಕರಾರೂ ಮಾಡದೆ ಆ ಕ್ಷೇತ್ರವನ್ನು ಅವರಿಗೆ ಬಿಟ್ಟು ಕೊಡಲು ರಾಜ್ಯದ ನಾಯಕರಿಗೆ ಸೂಚಿಸಿದ್ದರು. ಇದೀಗ ಕರ್ನಾಟಕದಲ್ಲಿ ಮರಳಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿರುವ ಬಿಜೆಪಿ ಪಾಳೆಯದಲ್ಲಿ ಮುಖ್ಯಮಂತ್ರಿ ಹುದ್ದೆಯ ಕನಸು ಹಲವು ನಾಯಕರಿಗೆ ಬಿದ್ದಿದ್ದು, ಈ ಪೈಕಿ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮರಳಿ ಮುಖ್ಯಮಂತ್ರಿ ಮಾಡುವ ಇಂಗಿತ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಂದ ವ್ಯಕ್ತವಾಗಿದೆ. ಈ ಮಧ್ಯೆ ಅಮಿತ್ ಶಾ ಅವರು ಬಹಿರಂಗವಾಗಿಯೇ ಸೋಮಣ್ಣ ಅವರಿಗೆ ಮಹತ್ವದ ಸ್ಥಾನಮಾನ ನೀಡುವ ಇಂಗಿತ ವ್ಯಕ್ತಪಡಿಸಿದ್ದು, ಸದರಿ ಬೆಳವಣಿಗೆಯ ಹಿನ್ನೆಲೆಯಲ್ಲಿ ಸೋಮಣ್ಣ ಅವರ ಹೆಸರು ಭವಿಷ್ಯದ ಮುಖ್ಯಮಂತ್ರಿ ಹುದ್ದೆಯ ರೇಸ್‌ಗೆ ಬಂದಿದೆ.

ಕರ್ನಾಟಕ ನಾಶ ಗ್ಯಾರಂಟಿ

ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿತು. ಆದಿವಾಸಿ ಮಹಿಳೆ ರಾಷ್ಟ್ರಪತಿ ಸ್ಥಾನ ಅಲಂಕರಿಸಿದ್ದಕ್ಕೆ ಕಾಂಗ್ರೆಸ್ ಹೊಟ್ಟೆಕಿಚ್ಚು ಪಟ್ಟಿತ್ತು ಎಂದು ಆಪಾದಿಸಿದರು. ರಾಜ್ಯವನ್ನು ಉತ್ಪಾದನಾ ಕ್ಷೇತ್ರದಲ್ಲಿ ಸೂಪರ್ ಪವರ್ ಮಾಡಲು ಬಿಜೆಪಿಗೆ ಅಧಿಕಾರ ಕೊಡಿ. ಕರ್ನಾಟಕವನ್ನು ಅಭಿವೃದ್ಧಿಯಲ್ಲಿ ನಂ. 1 ಮಾಡುತ್ತೇವೆ. ದೇಶ ಮತ್ತು ಜಗತ್ತಿನಲ್ಲಿ ಕರ್ನಾಟಕದ ಹೆಸರು ಪ್ರಸಿದ್ಧಿಗೆ ಬರಲು ಬಿಜೆಪಿಯ ಸ್ಥಿರ ಹಾಗೂ ದೃಢವಾದ ಸರ್ಕಾರ ಬೇಕಾಗಿದೆ. ಈ ಚುನಾವಣೆಯಲ್ಲಿ ಅತಂತ್ರ ಫಲಿತಾಂಶ ಬಂದರೆ ರಾಜ್ಯದ ಜನತೆಯ ಬದುಕು ಕೂಡ ಅಸ್ಥಿರವಾಗಲಿದೆ. ಹೀಗಾಗಿ ಬಹುಮತದೊಂದಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತನ್ನಿ ಎಂದರು. ಡಬಲ್ ಇಂಜಿನ್ ಸರ್ಕಾರ ಕರ್ನಾಟಕದಲ್ಲಿ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದ ಕೊಳೆ ತೊಳೆಯುವುದರ ಜೊತೆಗೆ ಅಭಿವೃದ್ಧಿಗೆ ಆದ್ಯತೆ ನೀಡಲಾಯಿತು. ಸಮ್ಮಿಶ್ರ ಸರ್ಕಾರ ಇದ್ದಾಗ ಕರ್ನಾಟಕ ವಿದೇಶಿ ಬಂಡವಾಳ ಹೂಡಿಕೆ 30 ಸಾವಿರ ಕೋಟಿ ಇತ್ತು. ಬಿಜೆಪಿ ಸರ್ಕಾರ ಬಂದ ನಂತರ ಅದು ಮೂರು ಪಟ್ಟು ಅಂದರೆ ವಾರ್ಷಿಕ 90 ಸಾವಿರ ಕೋಟಿಗೆ ಏರಿತು. ಇದು ಡಬಲ್ ಇಂಜಿನ್ ಸರ್ಕಾರದ ಪ್ರಯತ್ನದ ಫಲವಾಗಿದೆ ಎಂದು ಹೇಳಿದರು. ಕರ್ನಾಟಕವನ್ನು ಸಮರ್ಥವಾಗಿ ಮುನ್ನಡೆಸುವವರು ನಿಮಗೆ ಬೇಕಲ್ಲವೇ ಎಂದು ಪ್ರಶ್ನಿಸಿದ ಮೋದಿ, ಬಿಜೆಪಿ ಸರ್ಕಾರದ ಪ್ರಥಮ ಆದ್ಯತೆ ಕರ್ನಾಟಕದ ವಿಕಾಸವೇ ಆಗಿದೆ. ಮಹಾಮಾರಿ ಕೋವಿಡ್ ಬಂದಿದ್ದಾಗ ಜನರನ್ನು ರಕ್ಷಿಸಿದ್ದು ಬಿಜೆಪಿ. ಒಂದು ವೇಳೆ ಬಿಜೆಪಿ ಅಧಿಕಾರದಲ್ಲಿಲ್ಲದಿದ್ದರೆ ಏನಾಗುತ್ತಿತ್ತು. ಕೋವಿಡ್ ಸಮಯದಲ್ಲಿ ಕೇರಳ ಮತ್ತು ಮಹಾರಾಷ್ಟ್ರದ ಪರಿಸ್ಥಿತಿ ನೀವು ನೋಡಿಲ್ಲವೇ. ಬಿಜೆಪಿ ಇಲ್ಲದಿದ್ದರೆ ಕರ್ನಾಟಕದಲ್ಲೂ ಅದೇ ಪರಿಸ್ಥಿತಿ ಉಂಟಾಗುತ್ತಿತ್ತು ಎಂದರು.

ಕಾಂಗ್ರೆಸ್ ತನ್ನ ನಾಯಕನ ನಿವೃತ್ತಿಯನ್ನು ಮುಂದಿಟ್ಟುಕೊಂಡು ಅಧಿಕಾರ ಕೇಳುತ್ತಿದೆ. ಆದರೆ, ನಾವು ಅಭಿವೃದ್ಧಿಗಾಗಿ ಅಧಿಕಾರ ಕೇಳುತ್ತಿದ್ದೇವೆ. ಇದುವೇ ನಮ್ಮ ಮತ್ತು ಅವರ ನಡುವಿನ ವ್ಯತ್ಯಾಸ ಎಂದರಲ್ಲದೇ, ಬಿಜೆಪಿ ಸಂಕಲ್ಪವು ಕರ್ನಾಟಕವನ್ನು ನಂ. 1 ಮಾಡುವುದಾಗಿದೆ. ಆಧುನಿಕ ಮೂಲ ಸೌಕರ್ಯ ನೀಡುವುದು ನಮ್ಮ ಧ್ಯೇಯವಾಗಿದೆ. ಕಾಂಗ್ರೆಸ್ ಅವಧಿಯಲ್ಲಿ ಶೌಚಾಲಯದ ಅಭಾವದಿಂದ ಮಹಿಳೆಯರ ಘನತೆಗೆ ಕುಂದುಂಟಾಗುತ್ತಿತ್ತು. ಬಾಲಕಿಯರು ಇದರಿಂದಾಗಿ ಶಾಲೆ ತೊರೆಯುವ ಪರಿಸ್ಥಿತಿ ಇತ್ತು. ಬಡವರು ಬಡವರಾಗಿಯೇ ಉಳಿದಿದ್ದರು. ಆದರೆ, ಬಿಜೆಪಿ ಮಹಿಳಾ ಸ್ವಶಕ್ತೀಕರಣಕ್ಕೆ ಶ್ರಮಿಸಿತು. ಪಿಎಂ ಕಿಸಾನ್ ಸಮ್ಮಾನ್ ನಿಧಿ, ಮುದ್ರಾ ಯೋಜನೆ ಪ್ರಯೋಜನ ಜನರನ್ನು ನೇರವಾಗಿ ತಲುಪಿತು. ಮಹಿಳೆಯರ ಹೆಸರಿನಲ್ಲಿ ಮನೆಗಳ ನಿರ್ಮಾಣವಾಯಿತು. ಇದರಿಂದಾಗಿ ಮಹಿಳೆಯರು ಯುವಜನರು ಹಾಗೂ ರೈತರ ಕಣ್ಣುಗಳಲ್ಲಿ ಆಶಾವಾದ ನೋಡಿದ್ದೇವೆ. ಈ ಬಾರಿಯ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ ಎಂಬ ಘೋಷಣೆ ನನ್ನ ಕಿವಿಗಳಲ್ಲಿ ಅನುರಣಿಸುತ್ತಿದೆ ಎಂದು ಹೇಳಿದರು.

ನರಸೀಪುರದಿಂದ ಗೆಲುವಿನ ಕೊಡುಗೆ ನೀಡಿ

ಒಬ್ಬ ಸಾಮಾನ್ಯ ರೈತನ ಮಗ ದೇವೇಗೌಡ ಎಂಬುದನ್ನು ಯಾರೂ ಮರೆಯುವಂತಿಲ್ಲ ಎಂದರು. ಮಹಿಳೆಯರು, ಮುಸಲ್ಮಾನರು ಹಾಗೂ ವಾಲ್ಮೀಕಿ ಸಮಾಜದವರಿಗೆ ಮೀಸಲಾತಿ ನೀಡುವಂತೆ ಪ್ರಧಾನಿಯಾಗಿದ್ದ ಚಂದ್ರಶೇಖರ್ ಅವರನ್ನು ಬಿಕ್ಷೆ ಬೇಡಿದ್ದೆ.ಆದರೆ ಮೊನ್ನೆ ಮಧುಗಿರಿಯಲ್ಲಿ ಅದೇ ಸಮಾಜದ ಒಬ್ಬರು ನನ್ನ ಬಗ್ಗೆ ಹಗುರವಾಗಿ ಮಾತನಾಡಿರುವುದು ನನಗೆ ತೀವ್ರವಾದ ನೋವುಂಟು ಮಾಡಿತು.ಅವರಿಂದ ಈ ರೀತಿಯ ಹೇಳಿಕೆ ನಿರೀಕ್ಷಿಸಿರಲಿಲ್ಲ ಎಂದು ಕೆ.ಎನ್.ರಾಜಣ್ಣ ಹೆಸರೇಳದೇ ಅವರು ಬೇಸರ ವ್ಯಕ್ತಪಡಿಸಿದರು. ಯಾವುದೇ ವ್ಯಕ್ತಿ ಪಕ್ಷಕ್ಕೆ ನಿಷ್ಠೆ ತೋರದೇ ಅಧಿಕಾರಕ್ಕಾಗಿ ಕೈ ಚಾಚುತ್ತಾನೋ ಆತ ಎಂದೂ ಶ್ರೇಯಸ್ಸು ಗಳಿಸಲು ಸಾಧ್ಯವಿಲ್ಲ ಎಂದರು.

ಶಾಸಕ ಅಶ್ವಿನ್ ಕುಮಾರ್ ಮಾತನಾಡಿ, ಚುನಾವಣಾ ಪೂರ್ವದಲ್ಲಿ ಕ್ಷೇತ್ರದ ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ. ಎಂತಹ ಪರಿಸ್ಥಿತಿ ಬಂದರೂ ಪಕ್ಷಕ್ಕೆ ನಿಷ್ಠನಾಗಿರುತ್ತೇನೆ ಎಂಬ ಮಾತಿಗೆ ಈಗಲೂ ಬದ್ಧನಾಗಿದ್ದೇನೆ. ಕ್ಷೇತ್ರದ ಜನತೆ ಪ್ರೀತಿ ವಿಶ್ವಾಸ ತೋರಿ ಶಾಸಕನನ್ನಾಗಿ ಮಾಡಿದ್ದಾರೆ. ಅವರ ಆಶಯಕ್ಕೆ ಪೂರಕವಾಗಿ ಸ್ಪಂದಿಸುತ್ತಾ ಬಂದಿದ್ದೇನೆ. ಯಾವುದೇ ಸಮಾಜಕ್ಕೂ ತಾರತಮ್ಯ ಮಾಡದೇ ಎಲ್ಲರನ್ನೂ ಸಮಾನವಾಗಿ ಕಂಡಿದ್ದೇನೆ. ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡಿದ್ದೇನೆ, ಈಗ ಮತ್ತೆ ಚುನಾವಣೆಗೆ ಸ್ಪರ್ದಿಸಿದ್ದೇನೆ. ಚುನಾವಣೆ ನಂತರ ಕುಮಾರಸ್ವಾಮಿ ಮುಖ್ಯ ಮಂತ್ರಿಯಾಗುವ ಸನ್ನಿವೇಶ ಬರಲಿದೆ. ಅವರನ್ನು ಮುಖ್ಯಮಂತ್ರಿಯಾಗಿ ಮಾಡಲು ಶಕ್ತಿ ತುಂಬುವ ಕೆಲಸ ನೀವು ಮಾಡಬೇಕು. ಕುಮಾರಸ್ವಾಮಿಯವರಿಗೆ ನಿಷ್ಟನಾಗಿರುವ ನನಗೆ ಮತ್ತೊಂದು ಅವಕಾಶ ಕಲ್ಪಿಸಿಕೊಡುವ ಮೂಲಕ ಕುಮಾರಣ್ಣರವರ ಕೈ ಬಲಪಡಿಸಿ ಎಂದು ಮನವಿ ಮಾಡಿದರು.

ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಮಾತನಾಡಿದರು. ಇದೇ ವೇಳೆ ಗದ್ದೇಮೋಳೆ ಹೊನ್ನನಾಯಕರವರ ಪುತ್ರ ಅಣ್ಣಯ್ಯ ಸ್ವಾಮಿ ಸೇರಿದಂತೆ ಕಾಂಗ್ರೆಸ್ ಹಾಗೂ ಬಿಜೆಪಿ ತೊರೆದ ಹಲವಾರು ಮಂದಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.

ಜಿಲ್ಲಾಧ್ಯಕ್ಷ ಕೆ.ಎಸ್. ನರಸಿಂಹಸ್ವಾಮಿ, ಕ್ಷೇತ್ರ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಜೆಡಿಎಸ್‌ನ ರಾಜ್ಯ ಕಾರ್ಯದರ್ಶಿ ವೈ.ಎಸ್. ರಾಮಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ದಾರ್ಥ, ಸದಸ್ಯ ಮೂಗೂರು ಸೋಮಣ್ಣ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ. ಗ್ರಾಪಂ ಸದಸ್ಯ ಅಶೋಕ್, ಶಂಬುದೇವನಪುರ ರಮೇಶ್, ಪಟ್ಟಣ ಪಂಚಾಯತಿ ಮಾಜಿ ಅಧ್ಯಕ್ಷ ವೀರೇಶ್, ಗುರುಪ್ರಸಾದ್, ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ, ಕಾರ್ಯಾಧ್ಯಕ್ಷ ಬಿ.ಆರ್. ಮಂಜುನಾಥ್., ಡೈರಿ ಅಧ್ಯಕ್ಷ ವೀರೇಶ್, ಗೊರವನಹಳ್ಳಿ ನಾಗರಾಜು, ಶ್ರೀಧರ್, ವಿವೇಕಾನಂದ ಶಿಕ್ಷಣ ಸಂಸ್ಥೆಯ ಪ್ರಕಾಶ್ ಹಾಜರಿದ್ದರು.

ರೂ.1.5 ಲಕ್ಷ ಕೋಟಿ ಲೂಟಿ

ಚುನಾವಣೆ ಬಂದಾಗ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡಲಾಗುತ್ತದೆ, ನಿಮ್ಮ ಮತ ನಿಮ್ಮ ವಿಕಾಸಕ್ಕೆ ಇರಬೇಕೇ ಹೊರತು ಭಾವನಾತ್ಮಕ ಪ್ರವಾಹದಲ್ಲಿ ಕೊಚ್ಚಿ ಹೋಗಬಾರದು, ಈ ಜಾಗೃತಿ ಅವಶ್ಯ, ಈಗ ಎದ್ದೇಳಿ, ಜಾಗೃತವಾಗಿರಿ, ಅನವಶ್ಯಕ ವಿಚಾರಗಳಿಗೆ ಮಾರು ಹೋಗದಿರಿ ಎಂದು ಕರೆ ನೀಡಿದರು.

ರಾಜ್ಯದ ಹೆಮ್ಮೆಯ 'ನಂದಿನಿ'ಯನ್ನು ಮುಗಿಸುವ ಹುನ್ನಾರ ಬಿಜೆಪಿ ಸರ್ಕಾರ ಮಾಡುತ್ತಿದ್ದೆ. ಕಾಂಗ್ರೆಸ್ ಸರ್ಕಾರದಲ್ಲಿ ಲಾಭದಾಯಕವಾಗಿದ್ದ ನಂದಿನಿ ಬಿಜೆಪಿ ಬಂದ ತಕ್ಷಣ ನಷ್ಟಕ್ಕೆ ನಿಲುಕಿತೆ. ಗುಜರಾತಿನ ಅಮೂಲ್ ಪ್ರಾಬಲ್ಯ ಬೆಳೆಸಿ ನಂದಿನಿಯನ್ನು ಹತ್ತಿಕ್ಕುವ ಹುನ್ನಾರ ಬಿಜೆಪಿ ಮಾಡುತ್ತಿದೆ ಎಂದು ಆರೋಪಿಸಿದರು.

ಚಾಮುಂಡೇಶ್ವರಿ ಕ್ಷೇತ್ರ ಇಲವಾಲ ಹೋಬಳಿ ಗ್ರಾಮಗಳಲ್ಲಿ ಜಿ.ಟಿ.ದೇವೇಗೌಡರಿಂದ ಬಿರುಸಿನ ಮತಯಾಚನೆ; ಹುಟ್ಟೂರಲ್ಲಿ ಸಂಭ್ರಮ

ಊರ ಮಗನಿಗೆ ಪೂರ್ಣಕುಂಭ ಸ್ವಾಗತ; ನಗಾರಿ ಸದ್ದಿಗೆ ಗ್ರಾಮಸ್ಥರೊಂದಿಗೆ ಹೆಜ್ಜೆ ಹಾಕಿದ ಜಿಟಿಡಿ



ಮೈಸೂರು, ಮೇ 3(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡರು ಕ್ಷೇತ್ರದಲ್ಲಿ ದಿನವಿಡೀ ಬಿರುಸಿನ ಪ್ರಚಾರ ನಡೆಸಿ, ಮತ ಯಾಚಿಸಿದರು.

ಇಲವಾಲ ಹೋಬಳಿ ರಾಮನಹಳ್ಳಿ, ಸಾಗರಕಟ್ಟೆ, ಹೊಸಕೋಟೆ, ಯಾಚೆಗೌಡನ ಹಳ್ಳಿ, ಹನುಮಂತಪುರ, ಛತ್ರದ ಕೊಪ್ಪಲು, ಗುಂಗ್ರಾಲ್ ಛತ್ರ ಹಾಗೂ ಯಲಚಹಳ್ಳಿ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ನಡೆಸಿದ ಜಿ.ಟಿ.ದೇವೇಗೌಡರಿಗೆ ಎಲ್ಲೆಡೆ ಅದ್ಭುತ ಬೆಂಬಲ ವ್ಯಕ್ತವಾಯಿತು. ಪಕ್ಷದ ಮುಖಂಡರು, ನೂರಾರು ಕಾರ್ಯಕರ್ತರು, ಬೆಂಬಲಿಗರು ಜಿಟಿಡಿಗೆ ಸಾಥ್ ನೀಡಿದರು.

ಹುಟ್ಟೂರಲ್ಲಿ ಭರ್ಜರಿ ಸ್ವಾಗತ: ಜಿ.ಟಿ. ದೇವೇಗೌಡರಿಗೆ ಅವರ ಹುಟ್ಟೂರಾದ ಗುಂಗ್ರಾಲ್ ಛತ್ರ ಗ್ರಾಮದಲ್ಲಿ ಅದ್ಧೂರಿ ಸ್ವಾಗತ ಸಿಕ್ಕಿತು. ಜಿಟಿಡಿ ಪ್ರಚಾರಕ್ಕೆಂದು ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಮಹಿಳೆಯರು ಪೂರ್ಣಕುಂಭದೊಂದಿಗೆ ಊರ ಮಗನನ್ನು ಬರಮಾಡಿಕೊಂಡರು. ದಾರಿಯುದ್ದಕ್ಕೂ ಹೂಮಳೆಗರೆದು, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಜಿಟಿಡಿ ತೆರೆದ ವಾಹನದಲ್ಲಿ ನಿಂತು ಗ್ರಾಮಸ್ಥರಿಗೆ ಕೈಮುಗಿದು ಮತಯಾಚಿಸಿದರು. ಈ ವೇಳೆ ಮಹಿಳೆಯರು ಆರತಿ ಬೆಳಗಿ ಶುಭ ಕೋರಿದರೆ, ಹಲವೆಡೆ ಮನೆ ಮುಂದೆ ನಿಂತು ಹೂಮಳೆಗರೆದರು.

ಹಿರಿಯಜ್ಜಿ ಆಶೀರ್ವಾದ: ಪ್ರಚಾರದ ವೇಳೆ ಗ್ರಾಮದ ಹಿರಿಯಜ್ಜಿ ತೋಳಸಮ್ಮ ವಿಶೇಷವಾಗಿ ಹರಸಿದರು. 'ನೀನು ಗುಂಗ್ರಾಲ್ ಛತ್ರದ ಮಗ, ನೀನು ಗೆದ್ದು ಬರ್ತೀಯಾ' ಎಂದು ಹೇಳಿ ಜಿಟಿಡಿ ಅವರ ಹಣೆಗೆ ತಿಲಕವಿಟ್ಟು ಆಶೀರ್ವದಿಸಿದರು.

ಕುಣಿದು ಸಂಭ್ರಮಿಸಿದ ಜಿಟಿಡಿ: ಹುಟ್ಟೂರ ಜನರ ಆತ್ಮೀಯ ಸ್ವಾಗತ, ಸಂಭ್ರಮ, ಹಾರೈಕೆಯಿಂದ ಭಾವುಕರಾದ ಜಿಟಿಡಿ, ಕೈಮುಗಿದು ಧನ್ಯವಾದ ತಿಳಿಸಿದರಲ್ಲದೆ, ನಿರಂತರ ಪ್ರವಾಸ, ಪ್ರಚಾರದ ಆಯಾಸವನ್ನು ಮರೆತು ನಗಾರಿ ಸದ್ದಿಗೆ ಗ್ರಾಮಸ್ಥರೊಂದಿಗೆ ಹೆಜ್ಜೆ ಹಾಕಿದರು. ಒಟ್ಟಾರೆ ಚುನಾವಣಾ ಪ್ರಚಾರ, ಹಬ್ಬದಂತೆ ನಡೆಯಿತು.

ಅಭಿವೃದ್ಧಿಗಾಗಿ ಬೆಂಬಲಿಸಿ: ಪ್ರಚಾರದ ವೇಳೆ ಮಾತನಾಡಿದ ಜಿ.ಟಿ.ದೇವೇಗೌಡರು, ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಬೆಂಬಲಿಸುವಂತೆ ಮನವಿ ಮಾಡಿದರು. ಕಳೆದ 10 ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದೇನೆ. ಈಗಾಗಲೇ ಬಹುತೇಕ ಕೆಲಸಗಳು ಮುಗಿದಿದ್ದು, ಇನ್ನುಳಿದ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತೆ ಆಶೀರ್ವದಿಸಿ ಆಯ್ಕೆ ಮಾಡುವಂತೆ ಕೋರಿದರು. ಇಲವಾಲ ಹೋಬಳಿಯ ಜನ 1972ರಿಂದಲೂ ಬೆಂಬಲ ನೀಡಿ, ನನಗೆ ರಾಜಕೀಯ ಶಕ್ತಿ ತುಂಬಿದ್ದಾರೆ. ಜನರ ಆಶೀರ್ವಾದದಿಂದಲೇ ನಾನು ಈ ಮಟ್ಟಕ್ಕೆ ಬಂದಿದ್ದೇನೆ. ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿದ್ದ ಕಾಲದಿಂದಲೂ ನನ್ನೂರಿನ ಜನ ಬೆಂಬಲಿಸಿಕೊಂಡು ಬಂದಿದ್ದಾರೆ. ಈಗಲೂ ಕೈ ಹಿಡಿದು ಮುನ್ನಡೆಸಬೇಕು. ರಸ್ತೆಗಳ ನಿರ್ಮಾಣ, ಕೆರೆಗಳಿಗೆ ನೀರು ತುಂಬಿಸುವುದು ಸೇರಿದಂತೆ ಸಾಕಷ್ಟು ಕೆಲಸ ಮಾಡಿದ್ದೇನೆ. ಹಳೇ ಉಂಡುವಾಡಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು ಏಳೆಂಟು ತಿಂಗಳಲ್ಲಿ ಪೂರ್ಣಗೊಂಡು ಸದಾ ಕುಡಿಯುವ ನೀರು ಲಭ್ಯವಾಗಲಿದೆ. ಅಭಿವೃದ್ಧಿ ಎನ್ನುವುದು ನಿರಂತರ. ನಿಮ್ಮ ಸೇವೆ ಮಾಡಲು ನಾನು ಬದ್ಧನಾಗಿದ್ದೇನೆ. ನಿಮ್ಮ ಮನೆ ಮಗನಿಗೆ ಮತ ನೀಡಿ ಹರಸಿ ಎಂದು ಮನವಿ ಮಾಡಿದರು.

ಶಾಸಕ ಎಲ್.ನಾಗೇಂದ್ರರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿ

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ ಮನವಿ



ಮೈಸೂರು, ಮೇ 3–ಪ್ರಸಕ್ತ ವಿಧಾನ ಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಾಸಕ ಎಲ್. ನಾಗೇಂದ್ರ ಅವರನ್ನು 30 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆಲ್ಲಿಸಲು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ ಮನವಿ ಮಾಡಿದ್ದಾರೆ.

ಚಾಮರಾಜ ಕ್ಷೇತ್ರದ ಬೃಂದಾವನ ಬಡಾವಣೆಯಲ್ಲಿ ಆಯೋಜಿಸಿದ್ದ ಬ್ರಾಹ್ಮಣ ಸಂಘ ಸಂಸ್ಥೆಗಳ ಸಭೆಯಲ್ಲಿ ಅವರು ಮಾತನಾಡಿದರು. ಒಂಟಿಕೊಪ್ಪಲು ವಿಪ್ರರ ವೃಂದ, ಬೃಂದಾವನ ಬ್ರಾಹ್ಮಣ ಬಳಗ, ಹೆಬ್ಬಾಳ್ ವಿಜಯನಗರ ಬ್ರಾಹ್ಮಣ ಸಂಘ, ಮಾಧ್ವ ಸಮೂಹ, ಐಯ್ಯಂಗಾರ್ ವೇದಿಕೆ, ಮುಲಕನಾಡು ಸಂಘ, ಶಂಕರ ಬಳಗ ಸೇರಿದಂತೆ ವಿವಿಧ ಬಡಾವಣೆಯ ನೂರಾರು ವಿಪ್ರ ಮುಖಂಡರು ಸೇರಿದ್ದರು. ಶಾಸಕರಾದ ಎಲ್. ನಾಗೇಂದ್ರ ಅವರಿಗೆ ವಿಪ್ರ ಅರ್ಚಕರು ಮತ್ತೊಮ್ಮೆ ಅತ್ಯಧಿಕ ಮತಗಳಿಂದ ಗೆದ್ದು ಬರುವಂತೆ ಆಶೀರ್ವದಿಸಿದರು.

ಶಾಸಕರಾದ ಎಲ್.ನಾಗೇಂದ್ರ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಗ್ರಾಮಾಂತರ ಅಧ್ಯಕ್ಷರಾದ ಗೋಪಾಲ್ ರಾವ್, ಪುರೋಹಿತರಾದ ಕೃಷ್ಣಮೂರ್ತಿ, ನರಸಿಂಹ ಮೂರ್ತಿ, ಹೆಬ್ಬಾಳ್ ಬ್ರಾಹ್ಮಣ ಸಂಘದ ಗುರುಪ್ರಸಾದ್, ಅನ್ನಪೂರ್ಣೇಶ್ವರಿ ದೇವಸ್ಥಾನದ ಪ್ರದೀಪ್ ದೀಕ್ಷಿತ್, ಪುಟ್ಟಸ್ವಾಮಿ, ಶ್ರೀನಾಥ್, ಶ್ರೀನಿವಾಸ್, ವಿಘ್ನೇಶ್ವರ ಭಟ್, ಸುದರ್ಶನ್, ಲಕ್ಷ್ಮಿ, ರಾಜೇಶ್ವರಿ, ಸೌಮ್ಯ, ಸೀತಾಲಕ್ಷ್ಮಿ ಇನ್ನಿತರರು ಇದ್ದರು.

ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಗಾಯತ್ರಿಪುರಂನಲ್ಲಿ ಮನೆ ಮನೆಗೆ ತೆರಳಿ ಮತ ಯಾಚನೆ ಮಾಡಿದರು. ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್, ಮೈಸೂರು ನಗರ ಹಿಂದುಳಿದ ವರ್ಗಗಳ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಣಿರತ್ನಂ, ಕಾರ್ಯಕಾರಿಣಿ ಸದಸ್ಯರಾದ ಬಿ.ಎಂ.ರಘು, ಮುಖಂಡರಾದ ಸುಬ್ರಹ್ಮಣ್ಯ ಬ್ರಹ್ಮಾಚಾರ್, ಕಿರಣ್, ಶರತ್, ಚರಣ್, ಯೋಗಾಚಾರ್, ಮುರಳಿ, ಜಗದೀಶ್, ನಾಣಿ, ಆರ್.ಎಕ್ಸ್. ಮೋಹನ್, ಚಂದ್ರು ಮತ್ತಿತರರು ಉಪಸ್ಥಿತರಿದ್ದರು.



ಕಾಂಗ್ರೆಸ್‌ನಿಂದ ಮಾತ್ರ ಬಡವರ ರಕ್ಷಣೆ ಸಾಧ್ಯ: ನಟಿ ಜಯಮಾಲ



ಮೈಸೂರು, ಮೇ 3(ಎಂಟಿವೈ)– ವರುಣ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪರ ನಟಿ ಜಯಮಾಲ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು.

ವರುಣ ಕ್ಷೇತ್ರದ ಭುಗತಹಳ್ಳಿ, ವಾಜಮಂಗಲ, ಮೆಲ್ಲಹಳ್ಳಿ, ಹಳ್ಳಿಕೆರೆ ಹುಂಡಿಯಲ್ಲಿ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚಿಸಿದರು. ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಎಲ್ಲಾ ಜಾತಿ, ಜನಾಂಗ ಹಾಗೂ ಧರ್ಮದ ಬಡಜನರ ಹಿತಕಾಯುವಲ್ಲಿ ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಸಮಾಜದಲ್ಲಿ ಶಾಂತಿ ನೆಲೆಸಲು ಹಾಗೂ ಬಡವರ ಪರ ಕಾರ್ಯಕ್ರಮ ರೂಪಿಸಲು ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯಗೆ ಮತ ಹಾಕುವಂತೆ ಮನವಿ ಮಾಡಿದರು.

ಈ ವೇಳೆ ನಟಿ ಜಯಮಾಲ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಕಳೆದ ನಾಲ್ಕು ವರ್ಷಗಳಿಂದ ಬಿಜೆಪಿ ಸರ್ಕಾರ ಮಿತಿ ಮೀರಿದ ಭ್ರಷ್ಟಾಚಾರ ನಡೆಸಿ ರಾಜ್ಯವನ್ನು ಕೊಳ್ಳೆ ಹೊಡೆದಿದೆ. ಯಾವುದೇ ಅಭಿವೃದ್ಧಿ ಕಾರ್ಯ ನಡೆಸದೇ ಕೋಮು ಭಾವನೆ ಕೆರಳಿಸಿ, ಸಮಾಜದಲ್ಲಿ ಅಶಾಂತಿ ವಾತಾವರಣ ಸೃಷ್ಟಿಸುವ ಮೂಲಕ ರಾಜಕೀಯ ಲಾಭ ಮಾಡಿಕೊಳ್ಳಲು ಮುಂದಾಗಿದೆ. ಡಾ. ಅಂಬೇಡ್ಕರ್ ಕೊಡುಗೆ ನೀಡಿದ ಸಂವಿಧಾನವನ್ನೇ ಬದಲಿಸುವುದಾಗಿ ಹೇಳಿದ್ದಾರೆ. ಇಂಧನ ಬೆಲೆ, ಅಡುಗೆ ಗ್ಯಾಸ್ ಸಿಲಿಂಡರ್, ಅಡುಗೆ ಎಣ್ಣೆ ಅಗತ್ಯ ವಸ್ತುಗಳ ಬೆಲೆಯನ್ನು ಗಗನಕ್ಕೇರಿಸಿ ಬಡವರು ಹಾಗೂ ಮಧ್ಯಮ ವರ್ಗದವರನ್ನು ಸಂಕಷ್ಟಕ್ಕೀಡು ಮಾಡಿದೆ. ಬಿಜೆಪಿಯನ್ನು ತಿರಸ್ಕರಿಸಿ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ 10 ಕೆಜಿ ಅಕ್ಕಿ, ಮನೆಯೊಡತಿಗೆ ಮಾಸಿಕ 2 ಸಾವಿರ ರೂ, ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್, ನಿರುದ್ಯೋಗ ಭತ್ಯೆ, ಮಹಿಳೆಯರಿಗೆ ಸಾರಿಗೆ ಬಸ್ ಪ್ರಯಾಣ ಸೇರಿದಂತೆ ಹತ್ತಾರು ಜನಪ್ರಿಯ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಮಣಿ, ಹಳೆಕಾಮನ ಕೊಪ್ಪಲು ಕರೀಗೌಡ, ಕಲ್ಪನಾ, ಶಿವಣ್ಣ, ಛಾಯಾ, ರಾಜೇಶ್, ಭಾಗ್ಯಮ್ಮ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ 867ರಲ್ಲಿ 664 ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್

ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಂಭ್ರಮದಲ್ಲಿ ಶುಭ ಸಂಗತಿ ಹಂಚಿಕೊಂಡ ಪ್ರಾಂಶುಪಾಲ ಡಾ. ಸದಾಶಿವೇಗೌಡ



ಮೈಸೂರು, ಮೇ 3–ಈ ಬಾರಿ 867 ವಿದ್ಯಾರ್ಥಿಗಳು ಪದವೀಧರರಾಗಿದ್ದು, ಅವರಲ್ಲಿ 664 ವಿದ್ಯಾರ್ಥಿಗಳು ಈಗಾಗಲೇ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ ಎಂದು ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ತಿಳಿಸಿದರು.

ನಗರದ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ನಮ್ಮ ವಿದ್ಯಾರ್ಥಿಗಳು ವ್ಯಾಸಂಗ ಮುಗಿಯುವ ಮುನ್ನವೇ ಉದ್ಯೋಗಾವಕಾಶವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಬಾರಿ 230ಕ್ಕೂ ಹೆಚ್ಚು ವಿವಿಧ ಕಂಪನಿಗಳು ಕ್ಯಾಂಪಸ್ ಸೆಲೆಕ್ಷನ್ ಮಾಡಿವೆ. ಇದರಲ್ಲಿ 664 ವಿದ್ಯಾರ್ಥಿಗಳು ಉದ್ಯೋಗಾವಕಾಶ ಪಡೆದುಕೊಂಡಿದ್ದು, ಒಬ್ಬ ವಿದ್ಯಾರ್ಥಿಗೆ ವಾರ್ಷಿಕ 24 ಲಕ್ಷ ಅತ್ಯಧಿಕ ಪ್ಯಾಕೇಜ್ ದೊರೆತಿದೆ ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನೋಕಿಯಾ ಬೆಂಗಳೂರು ಕ್ಯಾಂಪಸ್ ಟ್ಯಾಲೆಂಟ್ ಅಟ್ರಾಕ್ಷನ್ ಪ್ರೋಗ್ರಾಂ ಮ್ಯಾನೇಜರ್ ಅಂಕೂರ್ ಬ್ಯಾನರ್ಜಿ ಮಾತನಾಡಿ, ಈ ದಿನ ನಿಮ್ಮ ಜೀವನದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ. ವಿದ್ಯಾರ್ಥಿಗಳು ಎಂಜಿನಿಯರ್ ಪ್ರಪಂಚದಲ್ಲಿ ವೃತ್ತಿಪರ ವೃತ್ತಿಜೀವನವನ್ನು ಪ್ರಾರಂಭಿಸಲು ಮತ್ತು ಛಾಪು ಮೂಡಿಸಲು ಸಿದ್ಧರಾಗಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಾಲೇಜಿನ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿ, ಕಳೆದ ವರ್ಷದಲ್ಲಿ ವಿವಿಧ ವಿದ್ಯಾರ್ಥಿಗಳು 56 ಪೇಟೆಂಟ್‌ಗಳನ್ನು ಪಡೆದಿದ್ದು, ಮೈಸೂರಿನ ಎಲ್ಲಾ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಇದು ಅತ್ಯಧಿಕವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಪದವೀಧರ ವಿದ್ಯಾರ್ಥಿಯೊಬ್ಬರು, ನಾವು ನಮ್ಮ ಜೀವನದ ಪ್ರಮುಖ ಐದು ವರ್ಷಗಳನ್ನು ಈ ಮಹಾವಿದ್ಯಾಲಯದಲ್ಲಿ ಕಳೆದಿದ್ದೇವೆ. ಇದು ಸದಾ ಹೆಮ್ಮೆ ಮತ್ತು ಸುಂದರ ನೆನಪುಗಳನ್ನು ಕಟ್ಟಿಕೊಡುತ್ತದೆ. ನಮ್ಮ ಈ ಹಾದಿಯಲ್ಲಿ ಸಹಕರಿಸಿದ ಪ್ರಾಧ್ಯಾಪಕರು, ಸ್ನೇಹಿತರು ಮತ್ತು ಕುಟುಂಬಕ್ಕೆ ಕೃತಜ್ಞರಾಗಿರುತ್ತೇವೆ. ಅವರ ಬೆಂಬಲದಿಂದ ಇಷ್ಟು ದೂರ ಬರಲು ಸಾಧ್ಯವಾಯಿತು. ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಿ ಕಾಲೇಜಿಗೆ ಹಾಗೂ ಪೋಷಕರಿಗೆ ಕೀರ್ತಿ ತರುತ್ತೇವೆ ಎಂದರು. ವಿದ್ಯಾರ್ಥಿಗಳು ಸಂಗೀತ, ನೃತ್ಯ, ವಿವಿಧ ಕ್ರೀಡೆಗಳು, ಹಾಸ್ಯ, ಭಾಷಣ ಸೇರಿದಂತೆ ಹಲವಾರು ಚಟುವಟಿಕೆಯಲ್ಲಿ ಭಾಗವಹಿಸುವ ಮೂಲಕ ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಾಪಕರು, ಇತರೆ ವಿಭಾಗದ ವಿದ್ಯಾರ್ಥಿಗಳು, ಪದವಿ ಪಡೆದ ವಿದ್ಯಾರ್ಥಿಗಳ ಕುಟುಂಬದವರು ಉಪಸ್ಥಿತರಿದ್ದರು.

ಕಾರ್ಯಕರ್ತರೇ ಬಿಜೆಪಿಗೆ ಶಕ್ತಿ: ಟಿ.ಎಸ್.ಶ್ರೀವತ್ಸ

ಮೈಸೂರು, ಮೇ 3– ಬಿಜೆಪಿಗೆ ಬೂತ್ ಮಟ್ಟದ ಕಾರ್ಯಕರ್ತರೇ ಶಕ್ತಿ ಆಗಿದ್ದು, ಇದಕ್ಕೆ ಪೂರಕವಾಗಿ ಪ್ರತಿ ಬೂತ್ ನಲ್ಲೂ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು ಟಿ.ಎಸ್.ಶ್ರೀವತ್ಸ ಹೇಳಿದರು. ಮೈಸೂರಿನ ಜೆಪಿ ನಗರದ 62ನೇ ವಾರ್ಡಿನಲ್ಲಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರು ಮನೆ ಮನೆಗೆ ತೆರಳಿ ಮತಯಾಚಿಸಿ, ಮಾತನಾ ಡಿದರು. ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಾಣ, ದೇಶದ ಸುರಕ್ಷತೆಗೆ ಆದ್ಯತೆ, ಜನಧನ ಯೋಜನೆ, ಕಿಸಾನ್ ಸಮ್ಮಾನ್ ಯೋಜನೆ, ತ್ರಿವಳಿ ತಲಾಖ್ ರದ್ದತಿ ಹೀಗೆ ಡಬಲ್ ಎಂಜಿನ್ ಸರ್ಕಾರ ಜನಪರವಾದ ಅನೇಕ ಐತಿಹಾಸಿಕ ಯೋಜನೆ, ನಿರ್ಣಯ ತೆಗೆದುಕೊಂಡು ಅಭಿವೃದ್ಧಿ ಪರವಾದ ಆಡಳಿತ ನೀಡುತ್ತಿದೆ ಎಂದರು.

ನಮ್ಮ ದೇಶದ ಭವ್ಯ ಸಂಸ್ಕೃತಿ, ಭವ್ಯ ಪರಂಪರೆಯನ್ನು ಉಳಿಸಿ ಬೆಳೆಸುವ ದಿವ್ಯ ಸಂಕಲ್ಪವನ್ನು ಬಿಜೆಪಿ ಮಾಡಿದೆ, ಹೀಗಾಗಿ ಜನತೆ ಜನಪರ ಒಲವಿನ ಬಿಜೆಪಿಗೆ ಗೆಲುವಿನ ಆಶೀರ್ವಾದ ಮಾಡ ಬೇಕು ಎಂದರು. ನಗರಪಾಲಿಕೆ ಸದಸ್ಯರಾದ ಶಾಂತಮ್ಮ ವಡಿವೇಲ್, ಕೆಆರ್ ಕ್ಷೇತ್ರದ ಅಧ್ಯಕ್ಷ ವಡಿವೇಲ್, ಪ್ರಧಾನ ಕಾರ್ಯದರ್ಶಿ ನಾಗೇಂದ್ರ, 62ನೇ ವಾರ್ಡ್ ಅಧ್ಯಕ್ಷ ರಾಘವೇಂದ್ರ, ಗೋವಿಂದೇಗೌಡ, ಮಾಜಿ ನಗರಪಾಲಿಕೆ ಸದಸ್ಯರಾದ ಎಂ ಸಿ.ರಮೇಶ್, ಜೀವಧಾರ ಗಿರೀಶ್, ಪರಮೇಶ್ ಗೌಡ ಇನ್ನಿತರರು ಹಾಜರಿದ್ದರು





ಲಕ್ನೋ–ಸಿಎಸ್‌ಕೆ ಪಂದ್ಯ ಮಳೆಗಾಹುತಿ; ಉಭಯ ತಂಡಗಳಿಗೆ ಅಂಕ ಹಂಚಿಕೆ

ಲಖನೌ: ಹಾಲಿ ಐಪಿಎಲ್ ಟೂರ್ನಿಯ ಲಕ್ನೋ–ಸಿಎಸ್‌ಕೆ ಇಂದಿನ ಮೊದಲ ಪಂದ್ಯ ಮಳೆಗಾಹುತಿಯಾಗಿದ್ದು, ಉಭಯ ತಂಡಗಳಿಗೆ ಅಂಕ ಹಂಚಿಕೆ ಮಾಡಲಾಗಿದೆ. ಲಖನೌನ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದಿದ್ದ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವಿನ ಪಂದ್ಯ ಮಳೆಗಾಹುತಿಯಾಗಿದೆ. ಪಂದ್ಯ ರದ್ದಾದ ಹಿನ್ನಲೆಯಲ್ಲಿ ಅಂಪೈರ್‌ಗಳು ಉಭಯ ತಂಡಗಳಿಗೆ ಅಂಕ ಹಂಚಿಕೆ ಮಾಡಿದ್ದಾರೆ. ಅದರಂತೆ ಲಕ್ನೋಗೆ 1 ಮತ್ತು ಚೆನ್ನೈ ತಂಡಕ್ಕೆ 1 ಅಂಕಗಳನ್ನು ನೀಡಲಾಗಿದೆ. ಇದಕ್ಕೂ ಮೊದಲು ಅಂದರೆ ಮಳೆಗೆ ಪಂದ್ಯ ಆಹುತಿಯಾಗುವ ಮೊದಲು ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಕೆಎಲ್ ರಾಹುಲ್ ಅನುಪಸ್ಥಿತಿಯಲ್ಲಿ ಕೃಣಾಲ್ ಪಾಂಡ್ಯ ಎಲ್‌ಎಸ್‌ಜಿ ತಂಡ ಮುನ್ನಡೆಸಿದ್ದರು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ತಂಡ 19.2 ಓವರ್‌ಗಳಲ್ಲಿ 7 ವಿಕೆಟ್‌ಗೆ 125 ರನ್ ಗಳಿಸಿ ಹಿನ್ನಡೆ ಅನುಭವಿಸಿತ್ತು. ಈ ಹಂತದಲ್ಲಿ ಆರಂಭವಾದ ಮಳೆ ಪಂದ್ಯಕ್ಕೆ ಅಡ್ಡಿ ಪಡಿಸಿತು.

ಆರಂಭದಿಂದಲೂ ಚೆನ್ನೈನ ಮಾರಕ ಬೌಲಿಂಗ್‌ಗೆ ತತ್ತರಿಸಿದ ಲಕ್ನೋ 103 ರನ್ ಗಳಿಗೆ ಪ್ರಮುಖ 6 ವಿಕೆಟ್ ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕಿತ್ತು. ಈ ಹಂತದಲ್ಲಿ ಆಯುಷ್ ಬಡೋನಿ 33 ಎಸೆತದಲ್ಲಿ 59 ರನ್ ಗಳಿಸಿ ಲಕ್ನೋ ಮೊತ್ತ ನೂರರ ಗಡಿ ದಾಟುವಂತೆ ನೋಡಿಕೊಂಡರು. ಅವರಿಗೆ ನಿಕೋಲಸ್ ಪೂರನ್ ಉತ್ತಮ ಸಾಥ್ ನೀಡಿದರಾದರೂ ಅವರೂ ಬೇಗನೇ ವಿಕೆಟ್ ಒಪ್ಪಿಸಿದರು. ಮಳೆ ಬರುವ ಹೊತ್ತಿಗೆ ಲಕ್ನೋ ತಂಡ 19.2 ಓವರ್‌ಗಳಲ್ಲಿ 7 ವಿಕೆಟ್‌ಗೆ 125 ರನ್ ಗಳಿಸಿತ್ತು.

ಸಿಎಸ್‌ಕೆ ಪರ ಮೊಯೀನ್ ಅಲಿ ಮತ್ತು ಮಹೇಶ್ ತೀಕ್ಷಾ ತಲಾ 2 ವಿಕೆಟ್ ಪಡೆದರೆ, ಜಡೇಜಾ ಒಂದು ವಿಕೆಟ್ ಪಡೆದರು.



[ಮೇ 4]

ಹೈದರಾಬಾದ್ V/S ಕೋಲ್ಕತ್ತಾ

ಸ್ಥಳ: ರಾಜೀವ್‌ಗಾಧಿ ಅಂತರಾಷ್ಟ್ರೀಯ ಮೈದಾನ, ಹೈದರಾಬಾದ್

ಸಮಯ: ಸಂಜೆ 7.30



ಪಂಜಾಬ್ ವಿರುದ್ಧ ಸೇಡು ತೀರಿಸಿಕೊಂಡ ಮುಂಬೈ

6 ವಿಕೆಟ್‌ಗಳ ಭರ್ಜರಿ ಜಯ

ಮೊಹಾಲಿ: ಇಶಾನ್ ಕಿಶನ್ ಹಾಗೂ ಸೂರ್ಯಕುಮಾರ್ ಯಾದವ್ ಭರ್ಜರಿ ಅರ್ಧ ಶತಕಗಳ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್, ಕಿಂಗ್ಸ್ ಪಂಜಾಬ್ ತಂಡದ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಗೆಲುವಿಗೆ 215 ರನ್ ಗುರಿ ಪಡೆದ ಮುಂಬೈ ಆಕ್ರಮಣ ಕಾರಿ ಬ್ಯಾಟಿಂಗ್‌ನಿಂದ 18.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 216 ರನ್ ಗಳಿಸಿ ಭರ್ಜರಿ ಜಯ ಸಾಧಿಸಿದೆ. ಕಳೆದ ಪಂದ್ಯದಲ್ಲಿ ಮುಂಬೈ ತನ್ನ ತವರಿನಲ್ಲಿ ಅನುಭವಿಸಿದ ವಿರೋಚಿತ ಸೋಲಿಗೆ ಸೇಡುತೀರಿಸಿಕೊಂಡಿದ್ದು, ಪಾಯಿಂಟ್ಸ್ ಪಟ್ಟಿಯಲ್ಲಿ ಒಂದು ಸ್ಥಾನ ಮೇಲಕ್ಕೇರಿದೆ.

ಚೇಸಿಂಗ್ ಆರಂಭಿಸಿದ ಮುಂಬೈ ಉತ್ತಮ ಆರಂಭ ಪಡೆಯುವಲ್ಲಿ ವಿಫಲವಾದರೂ, 2ನೇ ವಿಕೆಟ್ ಜೊತೆಯಾಟಕ್ಕೆ 6 ಓವರ್‌ಗಳಲ್ಲಿ 54 ರನ್ ಕಲೆ ಹಾಕಿತ್ತು. ಮಧ್ಯಮ ಕ್ರಮಾಂಕದಲ್ಲಿ ಕಣಕ್ಕಿಳಿದ ಸೂರ್ಯ ಕುಮಾರ್ ಯಾದವ್ ಹಾಗೂ ಇಶಾನ್ ಕಿಶನ್ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಮುಂಬೈ ತಂಡ ಜಯ ಸಾಧಿಸುವಲ್ಲಿ ಯಶಸ್ವಿಯಾಯಿತು.

ಪಂಜಾಬ್ ಬೌಲರ್‌ಗಳನ್ನು ಚೆಂಡಾಡಿದ ಈ ಜೋಡಿ ಕೇವಲ 55 ಎಸೆತಗಳಲ್ಲಿ ಬರೋಬ್ಬರಿ 116 ರನ್ ಸಿಡಿಸಿತ್ತು. ಕೊನೆಯಲ್ಲಿ ಕಣಕ್ಕಿಳಿದ ಟಿಮ್ ಡೇವಿಡ್ ಹಾಗೂ ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್ ತಂಡಕ್ಕೆ ಇನ್ನಷ್ಟು ನೆರವಾಯಿತು. ಮೊದಲ 10 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 91 ರನ್ ಗಳಿಸಿದ್ದ ಮುಂಬೈಗೆ ಇನ್ನೂ 60 ಎಸೆತಗಳಲ್ಲಿ 124 ರನ್‌ಗಳ ಅಗತ್ಯವಿತ್ತು. ಆದರೆ ಮುಂಬೈ 18.5 ಓವರ್ ಗಳಲ್ಲೇ 216 ರನ್ ಸಿಡಿಸಿ ಗೆದ್ದು ಬೀಗಿತು.

ಮುಂಬೈ ಪರ ಇಶಾನ್ ಕಿಶನ್ 75 ರನ್ (41 ಎಸೆತ 4 ಸಿಕ್ಸರ್, 7 ಬೌಂಡರಿ), ಸೂರ್ಯಕುಮಾರ್ ಯಾದವ್ 66 ರನ್ (31 ಎಸೆತ, 8 ಬೌಂಡರಿ, 2 ಸಿಕ್ಸರ್), ಟಿಮ್ ಡೇವಿಡ್ 19 ರನ್ (10 ಎಸೆತ, 3 ಬೌಂಡರಿ), ತಿಲಕ್ ವರ್ಮಾ ಸ್ಫೋಟಕ 26 ರನ್ (10 ಎಸೆತ, 1 ಬೌಂಡರಿ, 3 ಸಿಕ್ಸರ್) ಚಚ್ಚಿದರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ಸಹ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿತ್ತು. ಮೊದಲ 10 ಓವರ್‌ಗಳಲ್ಲಿ 2 ವಿಕೆಟ್‌ಗೆ 78 ರನ್ ಗಳಿಸಿತ್ತು. ಬಳಿಕ ಮುರಿಯದ 4ನೇ ವಿಕೆಟ್‌ಗೆ ಒಂದಾದ ಲಿಯಾಮ್ ಲಿವಿಂಸ್ಟೋನ್ ಹಾಗೂ ಜಿತೇಶ್ ಶರ್ಮಾ 53 ಎಸೆತಗಳಲ್ಲಿ 119 ರನ್ ಸಿಡಿಸುವ ಮೂಲಕ ತಂಡದ ಮೊತ್ತ 200ರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು.

ಕಿಂಗ್ಸ್ ಪಂಜಾಬ್ ಪರ ಶಿಖರ್ ಧವನ್ 30 ರನ್, ಮ್ಯಾಥಿವ್ ಶಾರ್ಟ್ 27 ರನ್, ಲಿಯಾಮ್ ಲಿವಿಂಗ್ಸ್ಟನ್ ಭರ್ಜರಿ 82 ರನ್ (42 ಎಸೆತ, 7 ಬೌಂಡರಿ, 4 ಸಿಕ್ಸರ್), ಜಿತೇಶ್ ಶರ್ಮಾ 49 ರನ್ (27 ಎಸೆತ, 5 ಬೌಂಡರಿ, 2 ಸಿಕ್ಸರ್) ಚಚ್ಚಿದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	9	6	3	0	12
ಲಕ್ನೋ	10	5	4	1	11
ಸಿಎಸ್‌ಕೆ	10	5	4	1	11
ರಾಜಸ್ಥಾನ್	9	5	4	0	10
ಆರ್‌ಸಿಬಿ	9	5	4	0	10
ಮುಂಬೈ	9	5	4	0	10
ಪಂಜಾಬ್	10	5	5	0	10
ಕೋಲ್ಕತ್ತಾ	9	3	6	0	6
ಎಸ್‌ಆರ್‌ಹೆಚ್	8	3	5	0	6
ಡೆಲ್ಲಿ	9	3	6	0	6

ಮೇ 22 ರಿಂದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ

ಬೆಂಗಳೂರು,ಮೇ 3– ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ವೇಳಾಪಟ್ಟಿ ಪ್ರಕಟಗೊಂಡಿದ್ದು, ಮೇ 22 ರಿಂದ ಜೂನ್ 2 ರವರೆಗೆ ಪರೀಕ್ಷೆ ನಡೆಯಲಿದೆ.

ಮೇ 22 ಕನ್ನಡ ಮತ್ತು ಅರೇಬಿಕ್, ಮೇ 23 ರಸಾಯನಶಾಸ್ತ್ರ, ಗಣಿತ, ಮೇ 24 ಇಂಗ್ಲೀಷ್, ಮೇ 25 ಸಮಾಜ ಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, ಮೇ 26 ಇತಿಹಾಸ, ಸಂಖ್ಯಾಶಾಸ್ತ್ರ, ಮೇ 27 ಹಿಂದಿ, ಮೇ 29 ಭೂಗೋಳ ಶಾಸ್ತ್ರ, ಮನಃಶಾಸ್ತ್ರ, ಭೌತಶಾಸ್ತ್ರ, ಲೆಕ್ಕಶಾಸ್ತ್ರ, ಭೂಗರ್ಭ ಶಾಸ್ತ್ರ, ಶಿಕ್ಷಣ ಶಾಸ್ತ್ರ ಮತ್ತು ಗೃಹ ಶಾಸ್ತ್ರ, ಮೇ 31 ರಾಜ್ಯಶಾಸ್ತ್ರ, ಗಣಿತಶಾಸ್ತ್ರ, ಜೂನ್ 1 ಹಿಂದೂಸ್ತಾನಿ ಸಂಗೀತ, ವ್ಯವಹಾರ ಅಧ್ಯಯನ, ಜೂನ್ 2 ಅರ್ಥಶಾಸ್ತ್ರ, ಜೀವಶಾಸ್ತ್ರ ವಿಷಯಗಳ ಪರೀಕ್ಷೆ ನಡೆಯಲಿದೆ.

ಇವಿಎಂ ಪ್ರೋಗ್ರಾಮ್ ಅನ್ನು ಅಭ್ಯರ್ಥಿಗಳಿಗೆ ತೋರಿಸಲು ಮನವಿ



ಮೈಸೂರು,ಮೇ 3(ಪಿಎಂ)– ವಿದ್ಯುನ್ಮಾನ ಮತಯಂತ್ರಗಳಿಗೆ (ಇವಿಎಂ) ಲೋಡ್ ಮಾಡುವ ಮೊದಲು ಪ್ರೋಗ್ರಾಮ್ ಅನ್ನು ಅಭ್ಯರ್ಥಿಗಳಿಗೆ ತೋರಿಸಬೇಕೆಂದು ಕೆಆರ್ ಕ್ಷೇತ್ರದ ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿರುವುದಾಗಿ ಕ್ಷೇತ್ರದ ಇಂಡಿಯನ್ ಮೂವ್‌ಮೆಂಟ್ ಪಾರ್ಟಿ ಅಭ್ಯರ್ಥಿ ಆಲಗೂಡು ಲಿಂಗರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಸಂವಿಧಾನದ ಆಶಯದಂತೆ ಮತದಾನವು ಸುರಕ್ಷತೆ, ಪಾರದರ್ಶಕತೆ ಮತ್ತು ಗೌಪ್ಯತೆಯಿಂದ ಕೂಡಿರಬೇಕು. ಇವಿಎಂಗೆ ಲೋಡ್ ಮಾಡುವ ಪ್ರೋಗ್ರಾಮ್ ಅನ್ನು ಅನೇಕ ತಂತ್ರಜ್ಞರು ತಿಳಿದಿರುತ್ತಾರೆ. ಅಲ್ಲದೇ, ಯಂತ್ರಗಳಿಗೆ ಪ್ರೋಗ್ರಾಮ್ ಡೆವಲಪ್ ಮಾಡುವ ನುರಿತ ತಂತ್ರಜ್ಞರು ಸದ್ಬಳಕೆ ಅಥವಾ ದುರ್ಬಳಕೆ ಮಾಡಿಕೊಳ್ಳುವ ಸಂಭವ ಇರುತ್ತದೆ. ಹಾಗಾಗಿ ನನ್ನ ಕ್ಷೇತ್ರದ ಇವಿಎಂಗಳ ಪ್ರೋಗ್ರಾಮ್ ಅನ್ನು ಲೋಡ್ ಮಾಡುವ ಮುನ್ನ ತೋರಿಸಬೇಕೆಂದು ಮನವಿ ಸಲ್ಲಿಸಿರುವುದಾಗಿ ಹೇಳಿದರು.

ತಂತ್ರಜ್ಞರು ಚುನಾವಣೆಗೂ ಮುನ್ನ ಇವಿಎಂಗಳನ್ನು ಪರೀಕ್ಷಿಸಿ ನೀಡಿದರೂ ಮತದಾನದ ಸಂದರ್ಭದಲ್ಲಿ ಅನೇಕ ಇವಿಎಂಗಳಲ್ಲಿ ಸೂಕ್ಷ್ಮ ಮತ್ತು ಗಂಭೀರ ದೋಷಗಳು ಕಂಡುಬರುತ್ತವೆ. ಬಳಿಕ ಅಂತಹ ಯಂತ್ರಗಳನ್ನು ಬದಲಾಯಿಸಲಾಗುತ್ತದೆ. ಇವಿಎಂನಲ್ಲಿ ಕಂಡುಬರುವ ದೋಷವು ಪ್ರೋಗ್ರಾಮ್‌ಗೆ ಸಂಬಂಧಿಸಿರುತ್ತದೆ. ಹಾಗಾಗಿ ಊಹಿಸಲು ಸಾಧ್ಯವಾಗದ ರೀತಿ ಟ್ಯಾಂಪರಿಂಗ್ (ತಿರುಚುವಿಕೆ) ಮಾಡಬಹುದು. ಈ ಹಿನ್ನೆಲೆಯಲ್ಲಿ ನಾವು ಹಾಕುವ ಮತಗಳು ಸುರಕ್ಷತೆ ಮತ್ತು ವಿಶ್ವಾಸಾರ್ಹ ಎಂದು ಹೇಳಲಾಗದು. ಗೌಪ್ಯ ಮತ್ತು ಪಾರದರ್ಶಕತೆಯಿಂದ ಕೂಡಿದ ಮತದಾನ ಆಗುವುದಿಲ್ಲ ಎಂದು ಪ್ರತಿಪಾದಿಸಿದರು.

ಮತಯಂತ್ರಗಳು ತಂತ್ರಜ್ಞರನ್ನೇ ಅವಲಂಬಿಸಿರುವ ಕಾರಣ ಹಾಗೂ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಅವಕಾಶ ಇರಬಹುದಾದ ಹಿನ್ನೆಲೆಯಲ್ಲಿ ಅವುಗಳನ್ನು ಚುನಾವಣೆಗೆ ಬಳಸುವುದು ಸೂಕ್ತವಲ್ಲ. ನಮ್ಮ ದೇಶದಲ್ಲಿ ಬ್ಯಾಲೆಟ್ ಪೇಪರ್ ಮತದಾನದ ವ್ಯವಸ್ಥೆ ಜಾರಿಗೆ ತರದಿದ್ದರೆ ನಾಡಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟಾಗುವ ಆತಂಕವಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸಮಾಜವಾದಿ ಜನತಾ ಪಾರ್ಟಿಯ ತಿ.ನರಸೀಪುರ ಅಭ್ಯರ್ಥಿ ಎ.ಎನ್.ಶಿವಲಿಂಗಪ್ಪ, ವರುಣಾ ಕ್ಷೇತ್ರದ ಅಭ್ಯರ್ಥಿ ಕೆ.ನಾಗೇಶ್‌ನಾಯಕ್, ಮುಖಂಡ ಲೋಕೇಶ್ ಗೋಷ್ಠಿಯಲ್ಲಿದ್ದರು.

ಮತಗಟ್ಟೆ ಅಧಿಕಾರಿಗಳಿಗೆ 2 ದಿನಗಳ ತರಬೇತಿ ಮುಕ್ತಾಯ

ಮೈಸೂರು, ಮೇ3(ಆರ್‌ಕೆ)–ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿ (Poll Officer)ಗಳಿಗೆ ನೀಡಲಾಗುತ್ತಿದ್ದ 2 ದಿನಗಳ ತರಬೇತಿಯು ಬುಧವಾರ ಮುಕ್ತಾಯಗೊಂಡಿತು.

ಮೇ 10ರಂದು ನಡೆಯಲಿರುವ ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ನಿಯೋಜನೆಗೊಂಡಿರುವ ಮತಗಟ್ಟೆ ಅಧಿಕಾರಿಗಳಿಗೆ ಮತಗಟ್ಟೆಗಳಲ್ಲಿ ಮತದಾನದ ವೇಳೆ ಅನುಸರಿಸಬೇಕಾದ ಕ್ರಮ, ನಿರ್ವಹಿಸಬೇಕಾದ ಜವಾಬ್ದಾರಿ, ಯಾವುದೇ ತೊಂದರೆ ಉಂಟಾದಲ್ಲಿ ಸರಿಪಡಿಸಲು ಯಾವ ಅಧಿಕಾರಿಯನ್ನು ಸಂಪರ್ಕಿಸಬೇಕು. ಎಂಬಿತ್ಯಾದಿ ಮಾಹಿತಿಯನ್ನು ಮಾಸ್ಟರ್ ಟ್ರೇನರ್‌ಗಳು ಇದೇ ಸಂದರ್ಭ ನೀಡಿದರು. ಮೈಸೂರಿನ ಹುಣಸೂರು ರಸ್ತೆಯ ಜಯಲಕ್ಷ್ಮೀಪುರಂನಲ್ಲಿರುವ ಸೆಂಟ್ ಜೋಸೆಫ್ ಶಾಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ, ಮಹಾರಾಜ ಕಾಲೇಜಿನ ಹೊಸ ಕಟ್ಟಡದಲ್ಲಿ ಕೃಷ್ಣರಾಜ, ಡಿಸಿ ಕಚೇರಿ ಹಿಂಭಾಗದ ಬೇಡನ್ ಪೋವೆಲ್ ಶಾಲೆ ಮತ್ತು ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಚಾಮರಾಜ, ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ನರಸಿಂಹರಾಜ, ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ವರುಣ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ನೀಡಲಾಯಿತು.



ಮೈಸೂರಿನ ಬೇಡನ್ ಪೋವೆಲ್ ಶಾಲೆಯಲ್ಲಿ ನಡೆದ ತರಬೇತಿಯಲ್ಲಿ ಮತಗಟ್ಟೆ ಅಧಿಕಾರಿಗಳಿಗೆ ಇವಿಎಂಗಳ ಕಾರ್ಯವೈಖರಿ ಬಗ್ಗೆ ಪ್ರಾತ್ಯಕ್ಷತೆ ನೀಡಲಾಯಿತು.

ಉಳಿದಂತೆ ಹೆಚ್.ಡಿ.ಕೋಟೆ, ಕೆ.ಆರ್.ನಗರ, ನಂಜನಗೂಡು, ತಿ.ನರಸೀಪುರ, ಪಿರಿಯಾಪಟ್ಟಣ ಮತ್ತು ಹುಣಸೂರು ವಿಧಾನಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ ಆಯಾ ತಾಲೂಕು ಕಚೇರಿಗಳಲ್ಲಿ ಮಾಸ್ಟರ್ ಟ್ರೇನರ್‌ಗಳು ತರಬೇತಿ ನೀಡಿದರು. ಮೇ 9ರಂದು ಬೆಳಗ್ಗೆ 8 ಗಂಟೆಯಿಂದ ಆಯಾ ಸ್ಟ್ರಾಂಗ್ ರೂಂ (ತರಬೇತಿ ನೀಡಿದ ಸ್ಥಳಗಳು)ಗಳಲ್ಲಿ ಮಸ್ಟರಿಂಗ್ ನಡೆಯಲಿದ್ದು, ಅಂದು ಹಾಜರಾಗಿ ಚುನಾವಣಾಧಿಕಾರಿಗಳಿಂದ ಮತದಾನ ಸಾಮಗ್ರಿ, ಇವಿಎಂ, ಮತದಾರರ ಪಟ್ಟಿ ಹಾಗೂ ಇನ್ನಿತರ ಸಾಮಗ್ರಿಗಳೊಂದಿಗೆ ಪೊಲೀಸ್ ಸಿಬ್ಬಂದಿ ಜೊತೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ನಿಯೋಜಿತ ಮತಗಟ್ಟೆಗಳಿಗೆ ತೆರಳಬೇಕೆಂದು ತರಬೇತಿ ವೇಳೆ ವಿವರಿಸಲಾಯಿತು.

ಮತಗಟ್ಟೆಗಳಿಗೆ ತಲುಪಿದಾಗ ಮೊದಲು ಅಲ್ಲಿ ವಿದ್ಯುತ್, ಕುಡಿಯುವ ನೀರು, ಶೌಚಾಲಯ, ಸಿಸಿ ಕ್ಯಾಮರಾ ಸೇರಿದಂತೆ ಮೂಲ ಸೌಕರ್ಯ ಒದಗಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಅಂದು ರಾತ್ರಿ ಮತಗಟ್ಟೆಯಲ್ಲೇ ವಾಸ್ತವ್ಯ ಹೂಡಿ ಮರುದಿನ ಬೆಳಗ್ಗೆ (ಮೇ 10) 6.30 ಗಂಟೆಯೊಳಗಾಗಿ ತಾಲೀಮು ಮತದಾನ (ಮಾಕ್‌ಪೋಲ್) ಪೂರ್ಣಗೊಳಿಸಿ ವಿದ್ಯುನ್ಮಾನ ಮತಯಂತ್ರಗಳು ಸರಿಯಾಗಿ ಕೆಲಸ ಮಾಡುತ್ತಿವೆಯೇ ಎಂಬುದನ್ನು ದೃಢಪಡಿಸಿಕೊಂಡು 7 ಗಂಟೆಗೆ ಮತದಾನಕ್ಕೆ ಸಜ್ಜಾಗಬೇಕೆಂದು ಸೂಚಿಸಲಾಯಿತು.

ಊಟ, ತಿಂಡಿ, ವಸತಿ ವ್ಯವಸ್ಥೆಯನ್ನು ಜಿಲ್ಲಾಡಳಿತದ ಮೂಲಕ ಭಾರತ ಚುನಾವಣಾ ಆಯೋಗವೇ ಮಾಡಿರುವುದರಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿ ಯಾವುದೇ ಖಾಸಗಿ ವ್ಯಕ್ತಿಗಳು, ರಾಜಕೀಯ ವ್ಯಕ್ತಿಗಳಿಂದ ಯಾವುದೇ ಸಹಾಯ, ನೆರವನ್ನು ಪಡೆಯಬಾರದು. ಒಂದು ವೇಳೆ ಪಡೆದುಕೊಂಡಿರುವುದು ತಿಳಿದು ಬಂದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಯಿತು.

ವಿದ್ಯುನ್ಮಾನ ಮತಯಂತ್ರ (ಬ್ಯಾಲೆಟ್ ಅಂಡ್ ಕಂಟ್ರೋಲ್ ಯೂನಿಟ್) ಹಾಗೂ ವಿವಿ ಪ್ಯಾಟ್‌ಗಳನ್ನು ಆಪರೇಟ್ ಮಾಡುವ ವಿಧಾನ, ಒಬ್ಬ ವ್ಯಕ್ತಿ ಮತದಾನ ಮಾಡಿದ ತಕ್ಷಣ ಅನುಸರಿಸುವ ಕ್ರಮದ ಬಗ್ಗೆ ತರಬೇತಿಯಲ್ಲಿ ಪ್ರಾತ್ಯಕ್ಷಿಕೆ ಮೂಲಕ ವಿವರಿಸಲಾಯಿತಲ್ಲದೆ, ಮತದಾನ ಪ್ರಕ್ರಿಯೆ ಪೂರ್ಣಗೊಂಡ ನಂತರ ಇವಿಎಂಗಳನ್ನು ಭದ್ರಪಡಿಸಿ ಆಯಾ ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳಿಗೆ ಅಧ್ಯಕ್ಷೀಯ ಅಧಿಕಾರಿಗಳ (ಪ್ರಿಸೈಡಿಂಗ್ ಆಫೀಸರ್ಸ್) ಮೂಲಕ ವರದಿ ಮಾಡಬೇಕು ಎಂಬುದನ್ನು ತರಬೇತಿ ವೇಳೆ ಸೂಚನೆ ನೀಡಲಾಯಿತು.

ಮಹಿಳೆಯರ ಏಳ್ಗೆಗೆ ಬಿಜೆಪಿ ನೆರವು : ಹೇಮಾ ನಂದೀಶ್



ಮೈಸೂರು, ಮೇ 3–ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರವು ಮಹಿಳೆಯರ ಏಳ್ಗೆಗಾಗಿ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ. ಹೀಗಾಗಿ ಮಹಿಳೆಯರು ಬಿಜೆಪಿ ಗೆಲುವಿಗಾಗಿ ಬೆಂಬಲಿಸುತ್ತಿದ್ದಾರೆ ಎಂದು ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಹೇಮಾ ನಂದೀಶ್ ಹೇಳಿದರು.

ಶಿವರಾಮ ಪೇಟೆ ಹಾಗೂ ಮೈಸೂರು ಮೆಡಿಕಲ್ ಕಾಲೇಜು ಆವರಣದಲ್ಲಿ ಬುಧವಾರ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್ ನಾಗೇಂದ್ರ ಪರ ಮತಯಾಚಿಸಿ ಮಾತನಾಡಿದ ಅವರು, ಪ್ರತಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನತೆ ಕಲ್ಪಿಸಲು ಮಹಿಳಾ ಮೀಸಲಾತಿ ನೀಡಲಾಗಿದೆ. ದುಡಿಯುವ ಮಹಿಳೆಯರಿಗೆ ಉಚಿತ ಬಸ್ ಪಾಸ್ ವ್ಯವಸ್ಥೆ ಮಾಡಲಾಗಿದೆ. ಮಹಿಳೆಯರು ಪಟ್ಟಣ, ನಗರ ಪ್ರದೇಶಗಳಿಗೆ ಹೋಗಿ ಕೆಲಸ ಮಾಡುವ ಜತೆಗೆ ಆರ್ಥಿಕವಾಗಿ ಸದೃಢರಾಗಲು ನೆರವಾಗಿದೆ. ಹೆಣ್ಣು ಮಕ್ಕಳಿಗೆ ಪದವಿವರೆಗೆ ಉಚಿತ ಶಿಕ್ಷಣ, ಉಚಿತ ಬಸ್ ಪಾಸ್ ಸೌಲಭ್ಯ, ಸ್ತ್ರೀ ಶಕ್ತಿ ಸಂಘಗಳ ಕಲ್ಯಾಣಕ್ಕಾಗಿ ಸಹಾಯಧನ ನೀಡಲಾಗಿದೆ. ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ನಡೆದಿದೆ. ಕ್ಷೇತ್ರದ ಜನತೆ ಬಿಜೆಪಿ ಬೆಂಬಲಿಸಲಿದ್ದು, ಮತ್ತೆ ಆಡಳಿತಕ್ಕೆ ಬರಲಿದೆ ಎಂದರು.

ಮಹಿಳಾ ಮೋರ್ಚಾ ಉಪಾಧ್ಯಕ್ಷರಾದ ಸರಸ್ವತಿ ಪ್ರಸಾದ್, ಕಾವೇರಿ ನಾಗರಾಜ್, ಪ್ರಮೋದಿನಿ, ಪುಷ್ಪ ಬಾಬು, ರಶ್ಮಿ, ವೇದಾವತಿ, ನಾಗಮಣಿ, ಗೀತಾ, ಹಾಗೂ ಇನ್ನಿತರರು ಭಾಗವಹಿಸಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಹರೀಶ್‌ಗೌಡ ನಜರಬಾದ್‌ನಲ್ಲಿ ಪಾದಯಾತ್ರೆ ನಡೆಸಿ ಮತ ಯಾಚಿಸಿದರು. ಈ ವೇಳೆ ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಂದ್ರಶೇಖರ್ ಹಾಗೂ ಇನ್ನಿತರರಿದ್ದರು.

ಪಾಲಿಕೆಯ ವ್ಯಾಪ್ತಿಯ 65 ವಾರ್ಡ್‌ಗಳಲ್ಲಿ ಮತದಾನ ಜಾಗೃತಿ



ಮೈಸೂರು,ಮೇ 3(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ 65 ವಾರ್ಡ್‌ಗಳಲ್ಲೂ ಸ್ವೀಪ್ ವತಿಯಿಂದ ಮತದಾನದ ಜಾಗೃತಿ ಮೂಡಿಸುವ ಅಭಿಯಾನಕ್ಕೆ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಚಾಲನೆ ನೀಡಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಮತದಾನದ ಜಾಗೃತಿ ಅಭಿಯಾನದಲ್ಲಿ ವಿವಿಧ ವಾರ್ಡ್‌ಗಳಿಂದ ಪ್ರತಿದಿನ ಘನ ತ್ಯಾಜ್ಯ ಸಂಗ್ರಹಿಸಿ, ವಿಲೇವಾರಿ ಮಾಡುವ ಪಾಲಿಕೆಯ 285 ವಾಹನಗಳಲ್ಲಿ ಅಳವಡಿಸಿರುವ ಮೈಕ್‌ಗಳಲ್ಲಿ ಮತದಾನ ಜಾಗೃತಿ ಮೂಡಿಸುವ ಸಂದೇಶ ಬಿತ್ತರಿಸುವ ಹಾಗೂ ವಾಹನ ಚಾಲಕರಿಂದ 'ನನ್ನ ಮತ ನನ್ನ ಹಕ್ಕು' ಎಂಬ ವಾಕ್ಯದೊಂದಿಗೆ ಸರಪಳಿ ನಿರ್ಮಿಸಿ ಜಾಗೃತಿ ಮೂಡಿಸಲಾಯಿತು.

ಪಾಲಿಕೆಯ ಘನತ್ಯಾಜ್ಯ ಸಂಗ್ರಹಿಸುವ 285 ವಾಹನಗಳ ಮೇಲೂ 'ನನ್ನ ಮತ ನನ್ನ ಹಕ್ಕು' ಎಂಬ ಭಿತ್ತಿಪತ್ರ ಅಳವಡಿಸಲಾಗಿದ್ದು, ಧ್ವನಿವರ್ಧಕದಲ್ಲಿ ಮತದಾನದ ಹಾಗೂ ಮತದಾನದ ಪಾವಿತ್ರತೆ ಮತ್ತು ಹಕ್ಕಿನ ಬಗ್ಗೆ ಜಾಗೃತಿ ಮೂಡಿಸುವ ಸಂದೇಶ ಬಿತ್ತರಿಸುವಂತೆ ಸೂಚನೆ ನೀಡಲಾಗಿದೆ. ಈ ವಾಹನಗಳು ಮೇ 10 ರವರೆಗೂ ಮತ ಚಲಾವಣೆಯ ಬಗ್ಗೆ ಜಾಗೃತಿ ಮೂಡಿಸಲಿವೆ. ಈ ಸಂದರ್ಭದಲ್ಲಿ ಸ್ವೀಪ್ ನೋಡಲ್ ಅಧಿಕಾರಿ ನಾಗರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಮಹಾನಗರ ಪಾಲಿಕೆ ಅಧಿಕಾರಿ ಮೃತ್ಯುಂಜಯ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಟನಾ ಕಾರ್ಯಾಗಾರ ಉದ್ಘಾಟನೆ

ಮೈಸೂರು, ಮೇ 3– ಆಕ್ಟಿಂಗ್ ಶಾಸ್ತ್ರ ವತಿಯಿಂದ 'ಆಂಗಿಕ ನಟನಾ ಕಾರ್ಯಾಗಾರ ಹಾರ್ಡ್ವಿಕ್ ಶಿಕ್ಷಣ ಸಂಸ್ಥೆಯ ಸಹಯೋಗದೊಂದಿಗೆ ಹಾರ್ಡ್ವಿಕ್ ಹೈಸ್ಕೂಲ್ ಕ್ಯಾಂಪಸ್‌ನಲ್ಲಿ ಆರಂಭವಾಯಿತು. ಕಾರ್ಯಾಗಾರವನ್ನು ಚೆನ್ನೈನ ಭರತ ನಾಟ್ಯ ಹಾಗೂ ರಂಗಭೂಮಿ ಕಲಾವಿದೆ ಶ್ರೀಮತಿ ಪ್ರೀತಿ ಭಾರದ್ವಾಜ್ ಮತ್ತು ಯಕ್ಷಗಾನ ಕಲಾವಿದೆ ಭ್ರಮರ ಕೆ ಉಡುಪ, ಹಿರಿಯ ರಂಗಕರ್ಮಿಗಳು, ಪ್ರಸನ್ನ ಹೆಗ್ಗೋಡು ನೇತತ್ವದಲ್ಲಿ ನಡೆಯಲಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮೈಮ್ ರಮೇಶ್ ಕಾರ್ಯಾಗಾರವನ್ನು ಉದ್ಘಾಟಿಸಿ, ಶಿಬಿರಾರ್ಥಿಗಳಿಗೆ ಶುಭ ಕೋರಿದರು.

ಹಳೇ ಮೈಸೂರು ಪ್ರಾಂತ್ಯದ ಸಮಗ್ರ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ. ಹೂಡಿಕೆ: ಕಾಂಗ್ರೆಸ್ ಪ್ರಣಾಳಿಕೆಯ ಭರವಸೆ

ಮೈಸೂರು,ಮೇ 3(ಪಿಎಂ)– ಕಾಂಗ್ರೆಸ್ ವತಿಯಿಂದ 'ಸರ್ವಜನಾಂಗದ ಶಾಂತಿಯ ತೋಟ' ಧ್ಯೇಯ ವಾಕ್ಯದಡಿ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಚುನಾವಣಾ ಪ್ರಣಾಳಿಕೆ ಸಿದ್ಧಪಡಿಸಿ ಬಿಡುಗಡೆ ಮಾಡಿದ್ದು, ಈ ಪೈಕಿ ಹಳೇ ಮೈಸೂರು ಪ್ರಾಂತ್ಯದ ಸಮಗ್ರ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ. ಹೂಡಿಕೆ ಮಾಡುವ ಅಂಶ ಪ್ರಮುಖವಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಣಾಳಿಕೆ ಸಮಿತಿ ಉಪಾಧ್ಯಕ್ಷ ಪ್ರೊ.ಕೆ.ಈ.ರಾಧಾಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯೇತರ ಸಂಘಟನೆಗಳು, ಕಾರ್ಮಿಕರಿಂದ ಮಾಹಿತಿ ಸಂಗ್ರಹಿಸಿ ಈ ಪ್ರಣಾಳಿಕೆ ಸಿದ್ಧಪಡಿಸಲಾಗಿದೆ. ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಈಡೇರಿಸಲು ಅಗತ್ಯವಿರುವ ಆಯವ್ಯಯದ ಅಂದಾಜು ಪತ್ರ ಕೂಡ ಸಿದ್ಧಪಡಿಸಲಾಗಿದೆ ಎಂದು ಹೇಳಿದರು.

ಮಂಡ್ಯದಲ್ಲಿ ಮೈಶುಗರ್ ಕಾರ್ಖಾನೆ ಪುನಶ್ಚೇತನ ಮತ್ತು ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಯೋಜನೆ ಅನುಷ್ಠಾನ, ಮೈಸೂರಿನಲ್ಲಿ 500 ಕೋಟಿ ಬಜೆಟ್‌ನೊಂದಿಗೆ ವಿಶ್ವದರ್ಜೆಯ ಡಾ.ರಾಜ್‌ಕುಮಾರ್ ಫಿಲ್ಮ್‌ಸಿಟಿ ನಿರ್ಮಾಣ, ಈ ಭಾಗದ ಎಲ್ಲಾ ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ಟೆಂಡರ್ ಶ್ಯೂರ್ ರಸ್ತೆಗಳ ನಿರ್ಮಾಣ, ಮಂಡ್ಯ ನಗರಕ್ಕೆ ವರ್ತುಲ ರಸ್ತೆ ನಿರ್ಮಾಣ, ರೇಷ್ಮೆ ನೂಲು ತಯಾರಿಕರಿಗೆ 3 ಲಕ್ಷ ರೂ.ವರೆಗೆ ಬಡ್ಡಿರಹಿತ ಸಾಲ, ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ವಿಶ್ವವಿದ್ಯಾನಿಲಯ ಮತ್ತು ಕ್ರೀಡಾ ಸಂಕೀರ್ಣ ಸ್ಥಾಪನೆಯ ಅಂಶಗಳನ್ನು ಜನತೆ ಮುಂದಿಡಲಾಗಿದೆ ಎಂದು ವಿವರಿಸಿದರು. ಮೈಸೂರು ಮಲ್ಲಿಗೆ, ರಸಬಾಳೆ, ವೀಳ್ಯದೆಲೆಗಳ ಉತ್ಪಾದನೆ ಮತ್ತು ಸಂಶೋಧನೆಗೆ ಉತ್ತೇಜನ, ಬ್ರ್ಯಾಂಡ್ ಮೈಸೂರು ಅನ್ನು ದೇಶದ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಗಿ ರೂಪುಗೊಳಿಸಲು ಕ್ರಮ, ಮೈಸೂರು, ಶ್ರೀರಂಗಪಟ್ಟಣ, ಬಂಡೀಪುರ, ರಂಗನತಿಟ್ಟು, ಚಿತ್ರದುರ್ಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ಹಾಗೂ ಮಂಡ್ಯದಲ್ಲಿ ಎಥೆನಾಲ್ ಉತ್ಪಾದನಾ ಕೇಂದ್ರ ಸ್ಥಾಪನೆ ಮಾಡಲಾಗುವುದು ಎಂದು ಪ್ರಣಾಳಿಕೆ ಅಂಶಗಳನ್ನು ತಿಳಿಸಿದರು.



ರಾಜ್ಯದ ಅಭಿವೃದ್ಧಿ ಮತ್ತು ಈ ನಾಡಿನ ಎಲ್ಲಾ ಜಾತಿ ಜನಾಂಗಗಳ ಶ್ರೇಯೋಭಿವೃದ್ಧಿಗೆ ಪೂರಕವಾದ ಪ್ರಣಾಳಿಕೆಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿದೆ. ಈ ಹಿಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಹುತೇಕ ಭರವಸೆಗಳನ್ನು ಈಡೇರಿಸಿದೆ. ಕಳೆದ 4 ವರ್ಷಗಳಲ್ಲಿ ರಾಜ್ಯ ಬಿಜೆಪಿ ಸರ್ಕಾರ ಯಾವುದೇ ಭರವಸೆ ಈಡೇರಿಸಿಲ್ಲ. ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ದುಸ್ಥಿತಿಗೆ ದೂಡಿದೆ. ರಾಜ್ಯದಲ್ಲಿ ಆಡಳಿತ ಮತ್ತು ಅಭಿವೃದ್ಧಿ ಕುಸಿದಿದ್ದು, ಇದರ ಪರಿಣಾಮ ರಾಜ್ಯದ ಜನತೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಗಾಗಿ ಕರ್ನಾಟಕದ ಜನತೆ ಬದಲಾವಣೆ ಬಯಸಿ, ಕಾಂಗ್ರೆಸ್ ಆಡಳಿತದ ನಿರೀಕ್ಷೆಯಲ್ಲಿದ್ದಾರೆ.

–ವಿ.ಆರ್.ಸುದರ್ಶನ್, ಮಾಜಿ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್

ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮಾತನಾಡಿ, ಕಳೆದ ನಾಲ್ಕು ವರ್ಷ ಕಾಲ ಆಡಳಿತ ನಡೆಸಿದ ಬಿಜೆಪಿ ರಾಜ್ಯದಲ್ಲಿ ನೂರೆಂಟು ಸಮಸ್ಯೆಗಳನ್ನು ತಂದಿಟ್ಟಿದೆ. ಹಾಗಾಗಿ ಈ ಚುನಾವಣೆಯು ರಾಜ್ಯದ ಪ್ರಗತಿ ಹಾಗೂ ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ಘಟ್ಟವಾಗಿದೆ. ಹಾಗಾಗಿ ರಾಜ್ಯದ ಜನತೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಬೇಕೆಂದು ಮನವಿ ಮಾಡಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮೈಸೂರಿಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿಯವರು ಮೈಸೂರನ್ನು ವಿಶ್ವದರ್ಜೆ ನಗರವನ್ನಾಗಿ ಪರಿವರ್ತನೆ ಮಾಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ ಅದಕ್ಕಾಗಿ ಅವರು ಯಾವುದೇ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ. ಅನುದಾನವನ್ನೂ ಕಲ್ಪಿಸಲಿಲ್ಲ ಎಂದು ದೂರಿದರು. ಕೆಪಿಸಿಸಿ ಸದಸ್ಯ ವೆಂಕಟೇಶ್ವರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ ಗುರುವಾರ 4 ಮೇ 2023

ನಂಜನಗೂಡಲ್ಲಿ ಡಿಕೆಶಿ ಭರ್ಜರಿ ರೋಡ್ ಶೋ

ತಬ್ಬಲಿ ಮಗು ದರ್ಶನ್ ಗೆಲ್ಲಿಸಿಕೊಡಿ: ಡಿ.ಕೆ.ಶಿವಕುಮಾರ್



ನಂಜನಗೂಡು, ಮೇ 3– ಧ್ರುವನಾರಾಯಣ್ ಅವರನ್ನು ಕಳೆದುಕೊಂಡು ನಾವೆಲ್ಲಾ ತಬ್ಬಲಿಗಳಾಗಿದ್ದೇವೆ. ಅವರ ತಬ್ಬಲಿ ಮಗನನ್ನೂ ನಿಮ್ಮ ಮಡಿಲಿಗೆ ಹಾಕಿದ್ದೇವೆ. ಆತನನ್ನು ನಿಮ್ಮ ಮಗನೆಂದು ತಿಳಿದು ಹೆಚ್ಚಿನ ಮತ ನೀಡಿ ಆಶೀರ್ವಾದ ಮಾಡಿ ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಿಕೊಡಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವ ನಾರಾಯಣ್ ಅವರ ಪರ ಭರ್ಜರಿ ರೋಡ್ ಶೋ ನಡೆಸುವ ಮೂಲಕ ಮತ ಪ್ರಚಾರ ನಡೆಸಿ ಮಾತನಾಡಿದ ಅವರು, ನಾನು ಪ್ರಜಾಧ್ವನಿ, ಧ್ರುವನಾರಾಯಣ್ ನುಡಿ ನಮನ ಕಾರ್ಯ ಕ್ರಮದಲ್ಲಿ ಕ್ಷೇತ್ರಕ್ಕೆ ಬಂದು ಮತದಾರರನ್ನು ಕುರಿತು ಮಾತನಾಡಿದ್ದೇನೆ. ಧ್ರುವನಾರಾಯಣ್ ಬದುಕಿದ್ದರೆ, ಇಲ್ಲಿ ಗೆದ್ದು ರಾಜ್ಯದ ಮಂತ್ರಿಯಾಗಿ ಸೇವೆ ಸಲ್ಲಿಸುವ ಭಾಗ್ಯ, ಹಿರಿತನ ಅವರಿಗೆ ಇತ್ತು. ಆದರೆ ಅವರನ್ನು ಕಳೆದುಕೊಂಡು ನಾವೆಲ್ಲಾ ತಬ್ಬಲಿಗಳಾಗಿದ್ದೇವೆ ಎಂದರು.

ಕಾರ್ಯಕರ್ತರ ಬಯಕೆಯಂತೆ ಅವರ ತಬ್ಬಲಿ ಮಗ ದರ್ಶನ್ ಧ್ರುವನಾರಾಯಣ್ ಅವರಿಗೆ ಟಿಕೆಟ್ ನೀಡಿ ಮತದಾರರ ಮಡಿಲಿಗೆ ಹಾಕಿದ್ದೇವೆ. ದರ್ಶನ್ ಮಾತ್ರ ಅಭ್ಯರ್ಥಿಯಲ್ಲ. ಪ್ರತಿಯೊಬ್ಬ ಕಾರ್ಯಕರ್ತರು, ಪ್ರತಿಯೊಬ್ಬ ಮತದಾರರೂ ಅಭ್ಯರ್ಥಿಗಳೆ, ನಿಮ್ಮ ಮಕ್ಕಳನ್ನು ಯಾವ ರೀತಿ ಸಾಕುತ್ತೀರಿ. ಅದೇ ರೀತಿ ಸಾಕಿ ಆತನನ್ನು ವಿಧಾನಸಭೆಗೆ ಕಳುಹಿಸಿಕೊಡಬೇಕು ಎಂದು ಮನವಿ ಮಾಡಿದರು.

ಈ ಚುನಾವಣೆ ಬಿಜೆಪಿ ಸೋಲಿಸುವ ಚುನಾವಣೆಯಲ್ಲ. ನಿಮ್ಮ ಬದುಕಿನಲ್ಲಿ ಬದಲಾವಣೆ ತರುವ ಚುನಾವಣೆ. ಬಿಜೆಪಿ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರವಾಗಿದ್ದು ರಾಜ್ಯದ ಎಲ್ಲಾ ಕಚೇರಿಯ ಗೋಡೆಗಳ ಮೇಲೂ ಸಹ ಕಾಸು ಕಾಸು ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಅವರಿಂದ ಆಗಲಿಲ್ಲ, ಅವರ ಆಡಳಿತ ವೈಫಲ್ಯದಿಂದಾಗಿ ಜನರು ತತ್ತರಿಸಿ ಹೋಗಿದ್ದಾರೆ. ಕಾಂಗ್ರೆಸ್ ಪಕ್ಷ ನಿಮ್ಮ ಬದುಕಿನಲ್ಲಿ ಬದಲಾವಣೆ ತರುವ ಉದ್ದೇಶದೊಂದಿಗೆ 5 ಗ್ಯಾರಂಟಿಗಳನ್ನು ನೀಡಿದೆ ಎಂದು ಅವರು ನುಡಿದರು.

ಬಿರು ಬಿಸಿಲಿನ ನಡುವೆಯೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಬೃಹತ್ ರೋಡ್ ಶೋ ನಡೆಯಿತು. ನಗರದ ಚಿಂತಾಮಣಿ ಗಣಪತಿ ದೇವಾಲಯದ ಮುಂಭಾಗ ಸಮಾವೇಶಗೊಂಡ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಬಾವುಟಗಳನ್ನು ಪ್ರದರ್ಶಿಸುತ್ತಾ ದರ್ಶನ್ ಧ್ರುವನಾರಾಯಣ್ ಅವರಿಗೆ ಜೈಕಾರ ಹಾಕುತ್ತಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮೆರವಣಿಗೆಯು ಆರ್.ಪಿ.ರಸ್ತೆ ಮೂಲಕ ಶ್ರೀಕಂಠೇಶ್ವರ ದೇವಾಲಯಕ್ಕೆ ತೆರಳಿ ಬಜಾರ್ ರಸ್ತೆ, ಎಂಸಿಎಸ್ ರಸ್ತೆ ಮೂಲಕ ಹುಲ್ಲಹಳ್ಳಿ ವೃತ್ತವನ್ನು ತಲುಪಿ ಅಂತ್ಯಗೊಂಡಿತು. ಮೆರವಣಿಗೆಯಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು.

ಮೆರವಣಿಗೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಗುಂಡ್ಲುಪೇಟೆ ಅಭ್ಯರ್ಥಿ ಗಣೇಶ್ ಪ್ರಸಾದ್, ದರ್ಶನ್ ಸಹೋದರ ಧೀರೇನ್ ಧ್ರುವನಾರಾಯಣ್, ವಿಧಾನಸಭಾ ಉಸ್ತುವಾರಿಗಳಾದ ಶ್ರೀಕಂಠು, ಸೋಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಸಿ.ಎಂ. ಶಂಕರ್, ಶ್ರೀಕಂಠನಾಯಕ, ಲತಾ ಸಿದ್ದಶೆಟ್ಟಿ, ದೊರೆಸ್ವಾಮಿ ನಾಯಕ, ಕೆ.ಮಾರುತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಏಜೆಂಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಘು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಿಎಸ್–2 (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಪಠಾಣ್ (ಹಿ)	4 ಪ್ರದರ್ಶನಗಳು
ಸಂಗಂ	
ಏಜೆಂಟ್ (ತೆ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರುದ್ರಂ (ತ)	4 ಪ್ರದರ್ಶನಗಳು
ಪ್ರಭಾ	
ರಾಘು (ಕ)	4 ಪ್ರದರ್ಶನಗಳು

ಬಿಳಿಕೆರೆ ಹೋಬಳಿಯಲ್ಲಿ ಜೆಡಿಎಸ್ ಅಭ್ಯರ್ಥಿ ಬಿರುಸಿನ ಮತ ಪ್ರಚಾರ



ಹುಣಸೂರು, ಮೇ 3– ತಾಲೂಕಿನ ಬಿಳಿಕೆರೆ ಹೋಬಳಿಯ ಹಲವು ಗ್ರಾಮದಲ್ಲಿ ಬಿರುಸಿನ ಪ್ರಚಾರ ನಡೆಸಿದ ಜಾ.ದಳ ಅಭ್ಯರ್ಥಿ ಜಿ.ಡಿ. ಹರೀಶ್‌ಗೌಡರು ಕ್ಷೇತ್ರದಲ್ಲಿ ತಮ್ಮ ತಂದೆ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ನೋಡಿ ತಾಲೂಕಿನ ಜನತೆ ಈ ಬಾರಿ ಚುನಾವಣೆಯಲ್ಲಿ ನನಗೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು.

ತಾಲೂಕಿನ ಹಲವು ಗ್ರಾಮದಲ್ಲಿ ಮತ ಯಾಚನೆ ಮಾಡಿ ನಂತರ ಮಾತನಾಡಿದ ಅವರು, ಗ್ರಾಮದ ರಸ್ತೆ ಅಭಿವೃದ್ಧಿ, ಪದವಿ ಕಾಲೇಜು ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ, ಕೋಟಿ ಕೋಟಿ ರೂ. ಅನುದಾನವನ್ನು ನೀಡಿದ್ದಲ್ಲದೆ ವೈಯಕ್ತಿಕವಾಗಿ ದೇವಸ್ಥಾನಗಳು ಸೇರಿದಂತೆ ಹಲವಾರು ಸಮಾಜಮುಖಿ ಕಾರ್ಯಗಳಿಗೆ ಹಣವನ್ನು ನೀಡಿದ್ದಾರೆ. ಕೊರೊನಾ ಸಂದರ್ಭದಲ್ಲಿ ಆಶಾ ಕಾರ್ಯಕರ್ತರಿಗೆ ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಡಿಸಿಸಿ ಬ್ಯಾಂಕ್ ವತಿಯಿಂದ ಸಹಾಯ ಮಾಡಲಾಗಿದೆ ಎಂದರು

ಈ ಸಂದರ್ಭದಲ್ಲಿ ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್, ಹಳೇಬೀಡು ಗ್ರಾಂಪಂ ಅಧ್ಯಕ್ಷ ಮಹೇಶ್, ಗೆರಸನಹಳ್ಳಿ ರೇವಣ್ಣ, ದೇವರಾಜ್, ಶ್ರೀನಿವಾಸ್, ಮಧು, ಧಣಿ, ಮಂಜು, ಹರ್ಷವರ್ಧನ್ ಮತ್ತಿತರರು ಹಾಜರಿದ್ದರು.

ಕೋಟೆ ತಾಲೂಕು ಅಭಿವೃದ್ಧಿಯಾಗಲು ಬಿಜೆಪಿ ಅಭ್ಯರ್ಥಿ ಗೆಲ್ಲಿಸಿ



ಹೆಚ್.ಡಿ.ಕೋಟೆ, ಮೇ 3– ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಜಯಗಳಿಸುವುದು ಖಚಿತ ಎಂದು ಮಾಜಿ ಸಚಿವ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ತಿಳಿಸಿದರು.

ಪಟ್ಟಣದ ತಾಲೂಕು ಪತ್ರಕರ್ತರ ಸಂಘದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ಡಿ ಕೋಟೆ ಕ್ಷೇತ್ರದಲ್ಲಿ ಇತಿಹಾಸದಲ್ಲಿ ಬಿಜೆಪಿ ಗೆದ್ದಿಲ್ಲ ಆದರೆ ಈ ಬಾರಿ, ಬಿಜೆಪಿ ಪಕ್ಷದಲ್ಲಿ, ಒಬ್ಬ ಶಾಸಕನನ್ನ ಆಯ್ಕೆ ಮಾಡಲೇಬೇಕು ಎಂದು ತಾಲೂಕಿನ ಜನತೆ ತೀರ್ಮಾನಿಸಿದ್ದಾರೆ. ಅದಕ್ಕೆ ಕಾರಣ ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶಕ್ಕೆ ಕೊಟ್ಟಂಥ ಕೊಡುಗೆ, ಹಾಗೂ ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅಭಿವೃದ್ಧಿ ಕೆಲಸಗಳು. ಇದನ್ನೆಲ್ಲಾ ಮನಗೊಂಡು ತಾಲೂಕಿನ ಜನತೆ ಕೋಟೆ ಕ್ಷೇತ್ರ ಇನ್ನು ಹೆಚ್ಚಿನ ಅಭಿವೃದ್ಧಿ ಕಾಣಬೇಕಾದರೆ ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ ಅವರನ್ನು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಲು ಕ್ರಮ ವಹಿಸಿದ್ದರಿಂದ ಈ ಬಾರಿ ಪರಿಶಿಷ್ಟ ಜಾತಿಯ ಎಡಗೈ (ಮಾದಿಗ) ಸಮುದಾಯ ಬಿಜೆಪಿ ಪಕ್ಷವನ್ನು ಬೆಂಬಲಿಸಿದೆ ಎಂದರು.

ಕೆ.ಎಂ ಕೃಷ್ಣನಾಯಕ ಪಕ್ಷಕ್ಕೆ ಬರುವಾಗ ಜೆಡಿಎಸ್ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರನ್ನು ಜೊತೆಯಲ್ಲಿ ಕರೆದುಕೊಂಡು ಬಂದಿರುವುದರಿಂದ ಈ ಬಾರಿ ತಾಲೂಕಿನಲ್ಲಿ ಬಿಜೆಪಿ ಜಯಭೇರಿ ಬಾರಿಸಲಿದೆ ಎಂದರು.

ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಂಡು ಬಂದಿದೆ. ತಾಲೂಕು ಅಭಿವೃದ್ಧಿ ಆಗಬೇಕಾದರೆ ಬಿಜೆಪಿ ಶಾಸಕ ಆಯ್ಕೆಯಾಗಬೇಕು ಇದುವರೆಗೂ ತಾಲೂಕು ಅಭಿವೃದ್ಧಿಯಲ್ಲಿ ಹಿಂದಿದೆ, ರಾಜ್ಯದಲ್ಲಿ ಅಧಿಕಾರದಲ್ಲಿ ಒಂದು ಪಕ್ಷವಿದ್ದರೆ ತಾಲೂಕಲ್ಲಿ ಇನ್ನೊಂದು ಪಕ್ಷದ ಶಾಸಕರು ಆಯ್ಕೆಯಾಗುತ್ತಿದ್ದರಿಂದ ತಾಲೂಕು ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಈ ಬಾರಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ. ತಾಲೂಕಿನಲ್ಲಿಯೂ ಬಿಜೆಪಿ ಶಾಸಕ ಆಯ್ಕೆ ಆಗಲಿದ್ದು ತಾಲೂಕು ಸಂಪೂರ್ಣ ಅಭಿವೃದ್ಧಿ ಹೊಂದಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ತಾಲೂಕು ಉಸ್ತುವಾರಿ ಅಶ್ವತ್ಥ್ ನಾರಾಯಣ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಹಂಚಿಪುರ ಗುರುಸ್ವಾಮಿ, ಸುರೇಂದ್ರ, ಹರ್ಷವರ್ಧನ್, ಸಿಂಗಯ್ಯ, ಶಿವಯ್ಯ, ಉಡ ನಾಗರಾಜು, ಚಾಮರಾಜು, ಶಿವಯ್ಯ, ಸಿಂಗಯ್ಯ, ಇನ್ನು ಮುಂತಾದವರು ಹಾಜರಿದ್ದರು

ಸಿದ್ದರಾಮಯ್ಯ ಪರ ಎಚ್.ವಿಶ್ವನಾಥ್ ಮತಯಾಚನೆ



ನಂಜನಗೂಡು, ಮೇ 3– ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು, ಸರ್ವ ಜಾತಿ ಜನಾಂಗ, ಸರ್ವ ಧರ್ಮಿಯರು, ಸಹ ಸೌಹಾರ್ಧಯುತವಾಗಿ ಬಾಳುವೆ ಮಾಡುವಂತಹ ಸರ್ಕಾರ ರಚನೆಯಾಗಲಿದೆ ಎಂದು ಮಾಜಿ ಸಚಿವ ಹಾಗೂ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.

ನಗರದ ಶ್ರೀಕಂಠೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ವಧರ್ಮಿಯರೂ ಸಹ ಒಟ್ಟಾಗಿ ಸೌಹಾರ್ದಮಯವಾಗಿ ಬಾಳುವಂತಹ ಸರ್ಕಾರ ರಚನೆಯಾಗಲೆಂದು ನಂಜುಂಡೇಶ್ವರನಲ್ಲೂ ಪ್ರಾರ್ಥನೆ ಸಲ್ಲಿಸಿದ್ದೇನೆ.

ಭಾರತ ದೇಶ ಜಾತ್ಯಾತೀತ ರಾಷ್ಟ್ರ, ಅಂತಹ ದೇಶದಲ್ಲಿ ಜಾತಿ, ಧರ್ಮವನ್ನು ಎತ್ತಿಕಟ್ಟಿ, ಒಳ ಪಂಗಡಗಳನ್ನು ಬೇರೆ ಮಾಡಿ ಶಾಂತಿಗೆ ಭಂಗ ತಂದು ಧರ್ಮದ ಹೆಸರಿನಲ್ಲಿ ಮತ ಕೇಳುತ್ತಿದೆ. ಜನರು ಪ್ರಬುದ್ಧರಾಗಿದ್ದು ಅವರ ಆಟ ಈಗ ನಡೆಯದು, ಜನತಂತ್ರ ವ್ಯವಸ್ಥೆಯಲ್ಲಿ ಚುನಾವಣೆ ಆತ್ಮವಿದ್ದಂತೆ. ಮತದಾರ ಮನಸ್ಸು ಇದ್ದಂತೆ. ಜನರು ಶುದ್ಧವಾದ ಮನಸ್ಸಿನಿಂದ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಲಿದ್ದು, ಸ್ವಂತ ಬಲದ ಮೇಲೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದರು. ನಂತರ ನಗರದ ಕನಕದಾಸ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಸಭೆ ನಡೆಸಿದ ಬಳಿಕ ತಾಲೂಕಿನ ತಗಡೂರು ಗ್ರಾಮದಲ್ಲಿ ಸಿದ್ದರಾಮಯ್ಯ ಪರವಾಗಿ ಮತಯಾಚನೆ ಮಾಡಿ ಮಾತನಾಡಿದರು.

ಹಿಂದುಳಿದ ವರ್ಗದ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ, ಶೋಷಿತ ಸಮುದಾಯಗಳ ಅಸ್ಮಿತೆ ಸಿದ್ದರಾಮಯ್ಯ, ಅವರು ತಳ ಸಮುದಾಯಗಳಿಗೆ ತಂದೆ ಸ್ಥಾನದಲ್ಲಿ ನಿಂತುಕೊಂಡು ಅವರ ಕಷ್ಟ ಸುಖಗಳಿಗೆ ಸ್ಪಂದಿಸಿ ಮುಖ್ಯಮಂತ್ರಿಯಾಗಿ ಅನೇಕ ಕೊಡುಗೆ ನೀಡಿದ್ದಾರೆ. ಇದನ್ನು ಸಹಿಸದ ಕೆಲವರು ಅವರನ್ನು ಕಟ್ಟಿಹಾಕುವ ಪ್ರಯತ್ನದಲ್ಲಿದ್ದಾರೆ. ಈ ಬಾರಿ ವರುಣ ಮತದಾರರು ಕೈ ಬಿಡದೆ ಒಮ್ಮತದಿಂದ ಮತಹಾಕಿ ಗೆಲ್ಲಿಸಿಕೊಡಬೇಕೆಂದು ಮನವಿ ಮಾಡಿದರು.

ಈ ವೇಳೆ ಯೋಗೀಶ್ ಉಪ್ಪಾರ್, ಸವಿತಾ ಸಮಾಜ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಯೋಗೇಶ್ ರವಿನಂದನ್, ಎಚ್.ಎಸ್. ಪ್ರಕಾಶ್, ಸಿ.ಟಿ.ಆಚಾರ್ಯ, ಲೋಕೇಶ್ ಕುಮಾರ್, ಸಿ.ಎಂ. ಶಂಕರ್, ಗೋವಿಂದರಾಜು, ಪ್ರದೀಪ್, ಗಂಗಾಧರ್, ಸೇರಿದಂತೆ ಹಲವಾರು ಪ್ರಮುಖರು ಹಾಜರಿದ್ದರು.

ಹೆಚ್.ಕೆ.ರಮೇಶ್ ಪರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮತಯಾಚನೆ

ಮೈಸೂರು, ಮೇ 3(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಅವರಿಗೆ ಮತ ನೀಡಿ, ಗೆಲ್ಲಿಸುವ ಮೂಲಕ ಪ್ರಾದೇಶಿಕ ಪಕ್ಷವನ್ನು ಉಳಿಸಿ–ಬೆಳೆಸುವಂತೆ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡ ಕ್ಷೇತ್ರದ ಮತದಾರರಲ್ಲಿ ಮನವಿ ಮಾಡಿದ್ದಾರೆ.



ಮೈಸೂರಿನಲ್ಲಿ ಬುಧವಾರ ಪ್ರತಿಕ್ರಿಯಿಸಿದ ಅವರು, ಹೆಚ್.ಕೆ.ರಮೇಶ್ ಪ್ರಾಮಾಣಿಕ ಹಾಗೂ ನಿಷ್ಠಾವಂತ. ಅದರಲ್ಲೂ ರಾಜಕೀಯ ಹಿನ್ನೆಲೆಯಿಂದ ಬಂದಿರುವ ಅವರನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಮತದಾರರು ಕೈ ಹಿಡಿಯಬೇಕು. ರಾಜ್ಯದ ಹಕ್ಕುಗಳಿಗಾಗಿ ಹೋರಾಟ ನಡೆಸಲು ಪ್ರಾದೇಶಿಕ ಪಕ್ಷವನ್ನು ಉಳಿಸಿ–ಬೆಳೆಸುವ ಅವಶ್ಯಕತೆ ಇದೆ. ಹಾಗಾಗಿ ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರತಿಯೊಬ್ಬ ಮತದಾರರು ಹೆಚ್.ಕೆ.ರಮೇಶ್ ಅವರಿಗೆ ಮತ ನೀಡುವಂತೆ ಕೋರಿದ್ದಾರೆ. ಈ ವೇಳೆ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಉಪಸ್ಥಿತರಿದ್ದರು.



ಚಾಮರಾಜ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಮಾಳವಿಕ ಗುಬ್ಬಿವಾಣಿ ಅವರು ಮೇದರ್ ಬ್ಲಾಕ್‌ನಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಎತ್ತುಗಳಿಗೆ ಕ್ರಿಮಿನಾಶಕ ಕುಡಿಸಿ ಕೊಂದ ಪಾಪಿಗಳು

ಪಿರಿಯಾಪಟ್ಟಣ ಬಳಿ ಅಮಾನುಷ ಘಟನೆ



ಪಿರಿಯಾಪಟ್ಟಣ, ಮೇ 3– ಮನುಷ್ಯನ ದ್ವೇಷ, ಅಸೂಯೆ ಎಲ್ಲೆ ಮೀರಿದೆ. ದಯೆ–ಕರುಣೆ ಇಲ್ಲದಂತೆ ಮೃಗೀಯವಾಗಿ ವರ್ತಿಸಲಾರಂಭಿಸಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ ಮೂಕ ಪ್ರಾಣಿಯನ್ನು ಬಿಡದೆ ಕೊಲ್ಲುವ ಮಟ್ಟಿಗೆ ಇಳಿಸಿದ್ದಾನೆ. ಎತ್ತುಗಳಿಗೆ ಕ್ರಿಮಿನಾಶಕ ಕುಡಿಸಿ ಸಾಯಿಸಿರುವ ಘಟನೆಯೊಂದು ತಾಲೂಕಿನ ಕಲ್ಲನಾಯಕನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ. ತಾಲೂಕಿನ ಬೆಟ್ಟದಪುರ ಸಮೀಪದ ಕಲ್ಲನಾಯಕನಹಳ್ಳಿ ಗ್ರಾಮದಲ್ಲಿ ಜವರೇಗೌಡರ ಎತ್ತು ದುಷ್ಕರ್ಮಿಗಳ ಅಟ್ಟಹಾಸಕ್ಕೆ ಬಲಿಯಾಗಿವೆ.

ಜವರೇಗೌಡ ಎಂಬ ರೈತ ಇತ್ತೀಚೆಗೆ ಸುಮಾರು 70,000 ರೂ. ಕೊಟ್ಟು ಎರಡು ಎತ್ತುಗಳನ್ನು ಖರೀದಿ ಮಾಡಿ ತಂದು ಸಾಕುತ್ತಿದ್ದರು. ಇಂದು ಊರಿನ ಪಕ್ಕದಲ್ಲಿರುವ ಬ್ಯಾರನ್ ಮನೆಯಲ್ಲಿ ಕಟ್ಟಿ ಹಾಕಿದ್ದರು. ಮಧ್ಯಾಹ್ನ ದುಷ್ಕರ್ಮಿಗಳು ಕ್ರಿಮಿನಾಶಕ ಕುಡಿಸಿ ಎರಡು ಎತ್ತುಗಳನ್ನು ಸಾಯಿಸಿದ್ದು, ಇದರಿಂದ ರೈತ ಜವರೇಗೌಡರು ದಿಗ್ಭ್ರಾಂತರಾಗಿ ತಲೆ ಮೇಲೆ ಕೈಹೊತ್ತು ಕುಳಿತ್ತಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ. ಚಪ್ಪರದಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಧರಣೇಶ್ ಹಾಗೂ ಮಹದೇವ್ ಶಿವಣ್ಣ, ಪುಟ್ಟುಬುದ್ಧಿ, ಕುಚೆಲ ಹಾಗೂ ಇತರ ಗ್ರಾಮಸ್ಥರು ಮಾತನಾಡಿ, ಸರ್ಕಾರ ರೈತನಿಗೆ ಪರಿಹಾರ ನೀಡಬೇಕು ಹಾಗೂ ಆರೋಪಿಗಳನ್ನು ಪತ್ತೆ ಹಚ್ಚಿ ಅವರಿಗೆ ಸೂಕ್ತ ಶಿಕ್ಷೆ ಆಗಬೇಕೆಂದು ಆಗ್ರಹಿಸಿದ್ದಾರೆ.

ಸಿದ್ದು ಗೆಲ್ಲಿಸಲು ದಲಿತ ಸಂಘರ್ಷ ಸಮಿತಿ ಮನವಿ



ತಿ.ನರಸೀಪುರ, ಮೇ 3– ರಾಜ್ಯದಲ್ಲಿ ಜನಪರ ಆಡಳಿತ ನೀಡುವುದು ಸೇರಿದಂತೆ ಶೋಷಿತ, ಹಿಂದುಳಿದ, ಅಲ್ಪ ಸಂಖ್ಯಾತ ಸಮುದಾಯಗಳ ಹಿತರಕ್ಷಣೆಗೆ ಬದ್ಧರಾಗಿರುವ ಸಿದ್ದರಾಮಯ್ಯ ಅವರನ್ನು ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಗೆಲ್ಲಿಸುವಂತೆ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಡಾ.ಎಸ್. ಚಂದ್ರಶೇಖರ್ ಕರೆ ನೀಡಿದರು.

ಪಟ್ಟಣದ ಮರೀಗೌಡ ಸ್ಮಾರಕ ಭವನದಲ್ಲಿ ಕರೆದಿದ್ದ ದಸಂಸ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯದ ಪ್ರತಿಪಾದಕ ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿ ಜಾತಿ, ಧರ್ಮಾಧಾರಿತ ರಾಜಕಾರಣದ ಹುನ್ನಾರಗಳನ್ನು ಮಾಡುತ್ತಿದೆ. ಸಿದ್ದರಾಮಯ್ಯನವರಂತಹ ನಾಯಕರು ವಿಧಾನಸಭೆಯೊಳಗೆ ಇದ್ದಾಗಲೇ ಜನಸಾಮಾನ್ಯರ ನೋವಿಗೆ ಬೆಲೆ ಸಿಗುವುದು. ಅಂತಹ ನಾಯಕನನ್ನು ಸೋಲಿಸಲು ರಾಷ್ಟ್ರಮಟ್ಟದ ಬಿಜೆಪಿ ನಾಯಕರು ಪ್ರಚಾರದ ಹೆಸರಿನಲ್ಲಿ ಪದೇ–ಪದೇ ಬಂದು ಹೋಗುತ್ತಿರುವುದು ನಿಜಕ್ಕೂ ಸಂಶಯ ಮೂಡಿಸಿದೆ ಎಂದರು.

ಸಂವಿಧಾನ ರಕ್ಷಣೆ, ಪ್ರಜಾತಂತ್ರ ವ್ಯವಸ್ಥೆ ಉಳಿಸುವ ದಿಕ್ಕಿನಲ್ಲಿ ಸಿದ್ದರಾಮಯ್ಯನವರು ಗೆಲ್ಲಲೇಬೇಕು,ನಮ್ಮ ಸಮಿತಿಯ ಕಾರ್ಯಕರ್ತರು ಈಗಾಗಲೇ ಕ್ಷೇತ್ರದಲ್ಲಿ ಅವರ ಪರವಾಗಿ ಮತಯಾಚಿಸುತ್ತಿದ್ದು, ಸಮಿತಿ ಅವರನ್ನು ವರುಣ ಕ್ಷೇತ್ರದಲ್ಲಿ ಬೆಂಬಲಿಸಿದೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯದಲ್ಲಿ ಪಕ್ಷ ಕಟ್ಟಿದ ಹಿರಿಯ ನಾಯಕರನ್ನು ಮೂಲೆಗುಂಪು ಮಾಡುತ್ತಿರುವುದು, ಜಾತಿ–ಜಾತಿ ಧರ್ಮಗಳ ನಡುವಿನ ಸಾಮರಸ್ಯ ಕದಡುವ ಹಾಗೂ ಸಂವಿಧಾನದ ಆಶಯವನ್ನೇ ಬದಲಾಯಿಸುವ ಮಾತುಗಳಾಡುತ್ತಿರುವುದು ಖಂಡನೀಯ. ಬಡವರು, ಅಲ್ಪಸಂಖ್ಯಾತರು ಶೋಷಿತರ ಉದ್ಧಾರ ಬಿಜೆಪಿಯಿಂದ ಸಾಧ್ಯವಿಲ್ಲ ಎಂದು ಅವರು ಆರೋಪಿಸಿದರು. ಈ ವೇಳೆ ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ರಾಜು, ಜಿಲ್ಲಾ ಸಂಚಾಲಕ ಕನ್ನಾಯಕನಹಳ್ಳಿ ಮರಿಸ್ವಾಮಿ, ನೆರಗ್ಯಾತನಹಳ್ಳಿ ಮನೋಜ್, ಮಹೇಶ್, ಪರಶುರಾಮ್, ನಿಲಸೋಗೆ ಕುಮಾರ್, ಚಂದ್ರಪ್ಪ, ಕೊಳತೂರು ಪ್ರಭಾಕರ್, ಜಯಣ್ಣ, ಅರ್ಜುನ್, ದೊಡ್ಡಪುರ ಉಮೇಶ್, ಕೂಡ್ಲೂರು ಶಿವನಂಜು, ಕೇಶವ, ರವಿಕಾಂತ್, ಮಹದೇವಸ್ವಾಮಿ, ಮಹೇಶ್, ವಿನಯ್‌ಕುಮಾರ್ ಹಾಜರಿದ್ದರು.

ಹೊರ ರಾಜ್ಯದ ಗೂಂಡಾಗಳು ಬಂದಿದ್ದು, ಹೊರಗೆ ಕಳುಹಿಸಿ: ಎಚ್.ವಿಶ್ವನಾಥ್



ಕೆ.ಆರ್.ನಗರ, ಮೇ 3– ಮೇ 10ರಂದು ನಡೆಯುವ ವಿಧಾನಸಭಾ ಚುನಾವಣೆಗೆ ಹೊರ ರಾಜ್ಯದಿಂದ ಗೂಂಡಾಗಳು ಆಗಮಿಸಿದ್ದು, ಈ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿದೆ. ತಕ್ಷಣ ಅವರನ್ನು ಆಯಾಯ ಪಕ್ಷದ ಅಭ್ಯರ್ಥಿಗಳು ಹೊರ ಕಳುಹಿಸುವಂತೆ ವಿಧಾನಪರಿಷತ್ ಸದಸ್ಯ ಅಡಗೂರು ಎಚ್.ವಿಶ್ವನಾಥ್ ಎಚ್ಚರಿಕೆ ನೀಡಿದರು.

ಪಟ್ಟಣದ ಅವರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕೆ.ಆರ್.ನಗರ ತಾಲೂಕು ಶಾಂತಿ ಮತ್ತು ಸೌಹಾರ್ದತೆಗೆ ಹೆಸರಾಗಿದ್ದು ದಿ.ಮಾಜಿ ಸಚಿವ ಎಸ್.ನಂಜಪ್ಪ ಮತ್ತು ನಾನು ತಾಲೂಕಿನಲ್ಲಿ ಸಾಮರಸ್ಯದ ರಾಜಕಾರಣ ಮಾಡಿಕೊಂಡು ಬಂದಿದ್ದೇವು. ಚುನಾವಣೆಯಲ್ಲಿ ಮಾತ್ರ ರಾಜಕೀಯ ಮಾಡುತ್ತಿದ್ದು ಚುನಾವಣೆಯ ನಂತರ ಇಬ್ಬರು ಅಭಿವೃದ್ಧಿಗೆ ಪೂರಕವಾದ ಹೊಂದಾಣಿಕೆಯನ್ನು ಮಾಡಿಕೊಂಡು ಬರುತ್ತಿದ್ದೆವು ಎಂದು ಅವರ ಹಿಂದಿನ ನೆನಪುಗಳನ್ನು ಮೆಲಕು ಹಾಕಿದರು.

ಕಾಂಗ್ರೆಸ್ ಪಕ್ಷ ಎಂದು ವೀರಶೈವ ವಿರೋಧಿಯಲ್ಲ. ವೀರೇಂದ್ರ ಪಾಟೀಲ್ ಮತ್ತು ನಿಜಲಿಂಗಪ್ಪ, ಬಿ.ಡಿ.ಜತ್ತಿ ಅವರನ್ನು ಮುಖ್ಯಮಂತ್ರಿ ಮಾಡುವುದರ ಜತೆಗೆ ಬಿ.ಡಿ.ಜತ್ತಿ ಅವರನ್ನು ಉಪರಾಷ್ಟ್ರಪತಿ, ರಾಷ್ಟ್ರಪತಿಯನ್ನಾಗಿ ಮಾಡಿದರು. ಎಸ್.ನಿಜಲಿಂಗಪ್ಪ ಅವರನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಅದನ್ನು ಮರೆತಿರುವಂತಹವರು ಮತಕ್ಕಾಗಿ ಜಾತಿ, ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವುದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ಎಂದರು.

ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಪಕ್ಷವನ್ನು ಕಟ್ಟಿ ಬೆಳೆಸಿದಂತಹ ಬಿ.ಎಸ್.ಯಡಿಯೂರಪ್ಪ, ಕೆ.ಎಸ್.ಈಶ್ವರಪ್ಪ, ಜಗದೀಶ್‌ಶೆಟ್ಟರನ್ನು ಏನು ಮಾಡಿದ್ದೀರಿ. ವೇದಿಕೆಯಲ್ಲಿ ಭಾಷಣ ಮಾಡುವಾಗ ಸೌಜನ್ಯಕ್ಕಾದರೂ ಅವರ ಹೆಸರುಗಳನ್ನು ಹೇಳುತ್ತೀರಾ, ದೇವರ ಹೆಸರಿನಲ್ಲಿ ಮತ ಕೇಳುವ ನೀವು ನಮಗೆ ದೇವರ ಬಗ್ಗೆ ಭಕ್ತಿ ಇಲ್ಲವೇ ನಮಗೆ ಬಸವಣ್ಣ, ಕನಕದಾಸರು, ವಾಲ್ಮೀಕಿ, ಕುವೆಂಪು ಇವರೇ ದೇವ ಸ್ವರೂಪಿಗಳಾದ್ದಾರೆ ಎಂಬುವುದನ್ನು ತಿಳಿಸಿದರು.

ಸುದೀರ್ಘ ಚರ್ಚೆಯ ನಂತರ ನಾನು ಯಾವ ಪಕ್ಷಕ್ಕೂ ಸೇರಿಲ್ಲ ನಾನು ಸ್ವತಂತ್ರ ನನಗೆ ಯಾರು ಬೇಕು ಯಾರು ಒಳ್ಳೆಯವರು ಅವರ ಪರವಾಗಿ ರಾಜ್ಯದಾದ್ಯಂತ ಪ್ರವಾಸ ಮಾಡಿ ಮತ ಯಾಚನೆ ಮಾಡುತ್ತೇನೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವ ಹೆಚ್.ಪಿ. ಗೋಪಾಲ್, ತೋಟಪ್ಪನಾಯಕ, ಹೆಬ್ಬಾಳು ಶೇಖರ್ ಹಾಜರಿದ್ದರು.

ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ

ಬನ್ನೂರು, ಮೇ 3– ದೇಶದಲ್ಲಿ ನರೇಂದ್ರ ಮೋದಿಯವರು ಉತ್ತಮ ಕಾರ್ಯವನ್ನು ನಿರ್ವಹಿಸುತ್ತಿದ್ದು, ಅವರ ಕೈ ಬಲಪಡಿಸಲು ನರಸೀಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ. ರೇವಣ್ಣ ಅವರನ್ನು ಬೆಂಬಲಿಸುವಂತೆ ಬಿಜೆಪಿಯ ಹಿರಿಯ ಮುಖಂಡ ಶಂಕರ್ ತಿಳಿಸಿದರು.

ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬುಧವಾರ ಬಿಜೆಪಿ ಕಾರ್ಯಕರ್ತರೊಂದಿಗೆ ರೋಡ್ ಶೋ ನಡೆಸಿ ಮನೆ–ಮನೆಗಳಿಗೆ ತೆರಳಿ ಪ್ರಚಾರ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಡಾ. ರೇವಣ್ಣ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದು, ವೈದ್ಯರಾಗಿ ಅನೇಕ ಬಡವರಿಗೆ ತಮ್ಮ ಕೈಲಾದ ಸೇವೆಯನ್ನು ಮಾಡಿದ್ದಾರೆ. ಎಷ್ಟೋ ಮಂದಿಗೆ ಶಸ್ತ್ರಚಿಕಿತ್ಸೆಯನ್ನು ನಡೆಸಿ ಅವರ ಜೀವ ಉಳಿಸಿದ್ದಾರೆ. ಇಂತಹ ವ್ಯಕ್ತಿಯನ್ನು ಬೆಂಬಲಿಸಿ ಆಯ್ಕೆ ಮಾಡಿದರೆ ಅವರಿಂದ ಕ್ಷೇತ್ರಕ್ಕೆ ಎಂತಹ ಸೇವೆ ಸಿಗಬಹುದೆಂದು ತಿಳಿಸಿದರು.

ದೇಶದಲ್ಲಿ ನರೇಂದ್ರಮೋದಿಯವರು ಅಧಿಕಾರ ಪಡೆದುಕೊಂಡ ಮೇಲೆ ಹಲವಾರು ಉತ್ತಮ ಕಾರ್ಯವನ್ನು ನಿರ್ವಹಿಸುತ್ತ ಸಾಗಿದ್ದು, ಬಡವರ ಕಲ್ಯಾಣಕ್ಕಾಗಿ ಹಲವಾರು ಯೋಜನೆಯನ್ನು ರೂಪಿಸಿ ದೇಶ ಶತ್ರುಗಳ ಹಾವಳಿಯಿಂದ ಮುಕ್ತವಾಗುವಂತೆ ಮಾಡಿದ್ದಾರೆಂದರು. ಬಸವರಾಜ ಬೊಮ್ಮಾಯಿಯವರ ನೇತೃತ್ವದಲ್ಲಿ ಉತ್ತಮ ಕಾರ್ಯವನ್ನು ನಿರ್ವಹಿಸುತ್ತಿದ್ದು, ರೈತರ ಖಾತೆಗೆ ಹಣ ಹಾಕಿದ ಮೊದಲ ಸರ್ಕಾರ ಎಂದು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಶಂಕರ್ ಅಭಿಮಾನಿಗಳು ಸನ್ಮಾನಿಸಿ, ಅಭಿನಂದಿಸಿದರು. ಹಲವಾರು ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಚಾಮರಾಜ, ಕೃಷ್ಣರಾಜ ವಿಧಾನಸಭಾ ಕ್ಷೇತ್ರಗಳಲ್ಲಿ

ಡಿ.ಕೆ.ಶಿವಕುಮಾರ್ ರೋಡ್ ಶೋ ಮೂಲಕ ಮತ ಯಾಚನೆ

ಕೆ.ಹರೀಶ್ ಗೌಡ, ಎಂ.ಕೆ.ಸೋಮಶೇಖರ್ ಗೆಲ್ಲಿಸುವಂತೆ ಮನವಿ



ಮೈಸೂರಿನ ಕನ್ನೇಗೌಡನ ಕೊಪ್ಪಲು ವೃತ್ತದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಚಾಮರಾಜ ಅಭ್ಯರ್ಥಿ ಕೆ.ಹರೀಶ್ ಗೌಡ, ಕೃಷ್ಣರಾಜ ಕ್ಷೇತ್ರದ ಎಂ.ಕೆ.ಸೋಮಶೇಖರ್ ಪರ ಮತ ಯಾಚಿಸಿದರು. ಇದೇ ವೇಳೆ ಕಾಂಗ್ರೆಸ್ ಸೇರಿದ ಜೆಡಿಎಸ್ ಮಾಜಿ ನಗರಾಧ್ಯಕ್ಷ ಕೊಪ್ಪಲು ರಾಜಣ್ಣ, ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಮೇ 3(ಎಸ್‌ಬಿಡಿ)– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರೋಡ್ ಶೋ ಮೂಲಕ ಮೈಸೂರಿನ ಚಾಮರಾಜ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಕೆ.ಹರೀಶ್‌ಗೌಡ ಹಾಗೂ ಕೃಷ್ಣರಾಜ ಕ್ಷೇತ್ರದ ಅಭ್ಯರ್ಥಿ ಎಂ.ಕೆ. ಸೋಮಶೇಖರ್ ಪರ ಪ್ರಚಾರ ನಡೆಸಿದರು.

ಪ್ರಜಾಧ್ವನಿ ಯಾತ್ರೆ ಬಸ್‌ನಲ್ಲಿ ಆಗಮಿಸಿದ ಡಿಕೆಶಿಗೆ ಕುಂಬಾರಕೊಪ್ಪಲಿನ ಆದಿಶಕ್ತಿ ದೇವಸ್ಥಾನದ ಬಳಿ ಪಟಾಕಿ ಸಿಡಿಸಿ, ಡೋಲು ನಗಾರಿಯೊಂದಿಗೆ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ನಂತರ ಬಸ್ ನಿಲ್ದಾಣದ ಬಳಿ ಸಹಸ್ರಾರು ಜನರ ಸಮ್ಮುಖದಲ್ಲಿ ಕ್ರೇನ್ ಮೂಲಕ ಬೃಹತ್ ಸೇಬಿನ ಹಾರದೊಂದಿಗೆ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಈ ವೇಳೆ ಮಾತನಾಡಿದ ಡಿಕೆಶಿ, ಕುಂಬಾರಕೊಪ್ಪಲಿನಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸೇರಿ ಸ್ವಾಗತಿಸಿರುವ ತಮಗೆಲ್ಲಾ ಕೋಟಿ ನಮಸ್ಕಾರ. ನಾನು ನಿಮ್ಮೂರ ಅಳಿಯ, ನನಗೂ ನಿಮಗೂ ಸಂಬಂಧವಿದೆ. ಇದು ನನ್ನ ಕ್ಷೇತ್ರ. ಇಲ್ಲಿ ಹರೀಶ್ ಗೌಡ ಅಭ್ಯರ್ಥಿಯಲ್ಲ, ಡಿ.ಕೆ.ಶಿವಕುಮಾರ್ ಅಭ್ಯರ್ಥಿ ಎಂದು ಭಾವಿಸಿ ಬೆಂಬಲಿಸಿ. ವಾಸು ಸೇರಿದಂತೆ ಎಲ್ಲರಿಗೂ ಸಹಾಯ ಮಾಡುವಂತೆ ತಿಳಿಸಿದ್ದೇನೆ ಎಂದು ಹೇಳಿದರು.

ಬಿಜೆಪಿ ಸರ್ಕಾರ ಕಡು ಭ್ರಷ್ಟ ಸರ್ಕಾರ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಎಂಎಲ್‌ಸಿಗಳಾಗಿದ್ದ ಲಕ್ಷ್ಮಣ್ ಸವದಿ, ಪುಟ್ಟಣ್ಣ ಸೇರಿದಂತೆ ಅನೇಕರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಕೃಷ್ಣರಾಜ ಕ್ಷೇತ್ರದ ರಾಮದಾಸ್‌ಗೆ ಟಿಕೆಟ್ ಕೊಟ್ಟಿಲ್ಲ. ಇದಕ್ಕೆಲ್ಲಾ ಕಾರಣ 40 ಪರ್ಸೆಂಟ್ ಕಮಿಷನ್‌ನ ಬಿಜೆಪಿ ಸರ್ಕಾರ. ಕುಲಪತಿ ಹುದ್ದೆಗೆ 3–5 ಕೋಟಿ ಕೊಡಬೇಕೆಂದು ಬಿಜೆಪಿ ಸಂಸದ ಪ್ರತಾಪ್‌ಸಿಂಹ ಭಾಷಣ ಮಾಡಿದ್ದರು. ಸಚಿವರಾಗಲು 150 ಕೋಟಿ, ಮುಖ್ಯಮಂತ್ರಿಯಾಗಲು ಎರಡೂವರೆ ಸಾವಿರ ಕೋಟಿ ಕೊಡಬೇಕೆಂದು ಯತ್ನಾಳ್ ಹೇಳಿದ್ದರು. ಹೆಚ್.ವಿಶ್ವನಾಥ್, ಗೂಳಿಹಟ್ಟಿ ಶೇಖರ್, ಗುತ್ತಿಗೆದಾರರ ಸಂಘದ ಕೆಂಪಣ್ಣ ಅನೇಕರು ಬಿಜೆಪಿಯ ಪರ್ಸೆಂಟೇಜ್ ಬಗ್ಗೆ ಹೇಳಿದ್ದಾರೆ. ಮಾಜಿ ಮಂತ್ರಿಯೊಬ್ಬರಿಗೆ ಕಮಿಷನ್ ಕೊಡಲಾಗದೆ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆಗೆ ಶರಣಾದ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಜೆಪಿಗೆ 40–50 ಸೀಟ್: ಬಿಜೆಪಿಯನ್ನು ದೂರವಿಡಬೇಕೆಂದು ಕಳೆದ ಬಾರಿ ಹೆಚ್.ಡಿ. ಕುಮಾರಸ್ವಾಮಿಗೆ ಬೆಂಬಲ ನೀಡಿದೆವು. ಆದರೆ ಅದನ್ನು ಉಳಿಸಿಕೊಳ್ಳಲು ಆಗಲಿಲ್ಲ. ಅವರಿಂದ ಬಿಜೆಪಿ ದೂರ ಇಡಲು ಸಾಧ್ಯವಾಗಲಿಲ್ಲ. ಯೋಗಕ್ಕಿಂತ ಯೋಗಕ್ಷೇಮ ಮುಖ್ಯ. ಈ ಬಾರಿ ಜೆಡಿಎಸ್ ಎಷ್ಟು ಸೀಟ್ ಬರುತ್ತದೆ ಎಂದು ಹೇಳುವುದಿಲ್ಲ. ಆದರೆ ಆ ಪಕ್ಷ ಸರ್ಕಾರ ಮಾಡಲು ಸಾಧ್ಯವಿಲ್ಲ. ಇನ್ನು 40 ಪರ್ಸೆಂಟ್ ಬಿಜೆಪಿಗೆ 40–50 ಸೀಟ್ ಬಂದರೆ ಹೆಚ್ಚು. ಅವರು ಭಾವನೆ, ಜಾತಿ, ಧರ್ಮದ ಮೇಲೆ ರಾಜಕೀಯ ಮಾಡುತ್ತಾರೆ. ಹಾಗಾಗಿ ನೀವು ಭ್ರಷ್ಟ ಸರ್ಕಾರ ತೆಗೆಯಬೇಕು. ಮೇ 10ರಂದು ನಿಮ್ಮ ಜೀವನವನ್ನು ನೀವೇ ನಿರ್ಮಾಣ ಮಾಡಿಕೊಳ್ಳುವ ದಿನ. ಎಚ್ಚರಿಕೆಯಿಂದ ಮತದಾನ ಮಾಡಬೇಕು ಎಂದರು.

ಬಿಜೆಪಿ ಭಾಷಣ ಮಾಡಿದಂತೆ ಯಾರ ಖಾತೆಗೂ 15 ಲಕ್ಷ ಹಣ ಹಾಗೂ ಅಚ್ಛೇ ದಿನ್ ಬಂದಿಲ್ಲ. ಆದರೆ ಕಾಂಗ್ರೆಸ್ ಪಕ್ಷ ನಿಮ್ಮ ಹೊಟ್ಟೆಪಾಡು, ಬದುಕಿನ ಬಗ್ಗೆ ಯೋಚಿಸುತ್ತದೆ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮೈಸೂರಿನ ಅಭಿವೃದ್ಧಿಗೆ ಪೂರಕವಾದ ಸಾಕಷ್ಟು ಯೋಜನೆಗಳಿವೆ. ಸ್ಥಳೀಯವಾಗಿಯೇ ಯುವ ಸಮುದಾಯಕ್ಕೆ ಉದ್ಯೋಗ ಕಲ್ಪಿಸುವುದು ಆದ್ಯತೆಯಾಗಿದೆ. ನಿಮಗೆ ಶಕ್ತಿ ಕೊಡಲು ನಾನು ಸಿದ್ದರಾಮಯ್ಯ ಸೇರಿ 5 ಪ್ರಮುಖ ಗ್ಯಾರಂಟಿ ನೀಡಿದ್ದೇವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜೂನ್ 1ರಿಂದ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ, ಮನೆ ಯಜಮಾನಿಗೆ ಮಾಸಿಕ 2 ಸಾವಿರ ರೂ. ಗೌರವ ಧನ, ಪ್ರತಿಯೊಬ್ಬರಿಗೂ 10 ಕೆ.ಜಿ. ಅಕ್ಕಿ, ಪದವೀಧರರಿಗೆ ಮಾಸಿಕ 3 ಸಾವಿರ ರೂ. ಸಹಾಯ ಧನ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ. ಹೀಗೆ ಕಾಂಗ್ರೆಸ್ ನಿಮ್ಮೊಂದಿಗಿರಲಿದೆ ಎಂದು ಭರವಸೆ ನೀಡಿದರು.

ಗ್ಯಾರಂಟಿ ಎಂಎಲ್‌ಎ ಆಗ್ತೀಯಾ: ಜೊತೆಯಲ್ಲಿದ್ದ ಅಭ್ಯರ್ಥಿ ಕೆ.ಹರೀಶ್ ಗೌಡರನ್ನು ಉದ್ದೇಶಿಸಿ, ನೀನಂತೂ ಗ್ಯಾರಂಟಿ ಎಂಎಲ್‌ಎ ಆಗ್ತೀಯಾ ಎಂದರು. ಅಲ್ಲದೆ 'ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ, ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ' ಎಂಬ ವಾಟ್ಸಾಪ್ ಸಂದೇಶವನ್ನು ಉಲ್ಲೇಖಿಸಿ ಹರೀಶ್ ಗೌಡರ ಕೈ ಮೇಲೆತ್ತಿದರು. ಕೋವಿಡ್ ಸಂದರ್ಭದಲ್ಲಿ ಸಾಧ್ಯವಾದಷ್ಟು ಕೆಲಸ ಮಾಡಿದ್ದಾರೆ. ಮತ ಹಾಕಿ ಗೆಲ್ಲಿಸುವ ಮೂಲಕ ಅವರಿಗೆ ಶಕ್ತಿ ತುಂಬಿ ಎಂದು ಮನವಿ ಮಾಡಿದರು.

ಬಳಿಕ ಕುಂಬಾರಕೊಪ್ಪಲು, ಒಂಟಿಕೊಪ್ಪಲು, ಕೆ.ಜಿ.ಕೊಪ್ಪಲಿನ ಪ್ರಮುಖ ರಸ್ತೆಗಳಲ್ಲಿ ರೋಡ್ ಶೋ ಮುಂದುವರೆಸಿ, ಕನ್ನೇಗೌಡರ ವೃತ್ತದಲ್ಲಿ ಕೆ. ಹರೀಶ್‌ಗೌಡ ಹಾಗೂ ಎಂ.ಕೆ.ಸೋಮಶೇಖರ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿಕೊಂಡರು. ಈ ವೇಳೆ ಬೃಹತ್ ಹೂವಿನ ಹಾರದೊಂದಿಗೆ ಡಿಕೆಶಿ ಅವರನ್ನು ಅಭಿನಂದಿಸಲಾಯಿತು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಎಂ. ಪ್ರದೀಪ್ ಕುಮಾರ್, ಶಿವಮಾದು ಮತ್ತಿತರರು ಉಪಸ್ಥಿತರಿದ್ದರು.

ಕೈ ಹಿಡಿದ ಜೆಡಿಎಸ್ ಮಾಜಿ ನಗರಾಧ್ಯಕ್ಷ: ಕೆ.ಜಿ.ಕೊಪ್ಪಲಿನ ಕನ್ನೇಗೌಡರ ವೃತ್ತದಲ್ಲಿ ಡಿಕೆಶಿ ಪ್ರಚಾರ ನಡೆಸಿದ ಸಂದರ್ಭದಲ್ಲಿ ಜೆಡಿಎಸ್ ಮಾಜಿ ನಗರಾಧ್ಯಕ್ಷ ಕೊಪ್ಪಲು ರಾಜಣ್ಣ ಹಾಗೂ ಅವರ ಬೆಂಬಲಿಗರು ಕಾಂಗ್ರೆಸ್ ಸೇರಿದರು.

ಚಾಮರಾಜ ಕ್ಷೇತ್ರ 'ಕೈ' ಅಭ್ಯರ್ಥಿ ಪರ ಎಂಎಲ್‌ಸಿ ನಾಗರಾಜ್ ಪ್ರಚಾರ



ಮೈಸೂರು, ಮೇ 3(ಸಿಎನ್)– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲು ಅನುಭವಿಸಲಿದ್ದು, ಕಾಂಗ್ರೆಸ್ ಪ್ರಚಂಡ ಬಹುಮತದೊಂದಿಗೆ ಅಧಿಕಾರ ಚುಕ್ಕಾಣಿ ಹಿಡಿಯಲಿದೆ ಎಂದು ಕಾಂಗ್ರೆಸ್ ವಕ್ತಾರ ಹಾಗೂ ವಿಧಾನ ಪರಿಷತ್ ಸದಸ್ಯ ಜೆ.ನಾಗರಾಜ್ ಯಾದವ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೇಜರ್ ಬ್ಲಾಕ್‌ನ 2ನೇ ಹಂತದ ಶ್ರೀ ವಿನಾಯಕ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್ ಗೌಡ ಪರ ಮನೆ ಮನೆಗೆ ತೆರಳಿ ಮತ ಯಾಚನೆ ನಡೆಸಿದ ಬಳಿಕ ಮಾತನಾಡಿದರು. ರಾಜ್ಯದ ಚುನಾವಣೆ ಇತಿಹಾಸದಲ್ಲಿ ಯಾವುದೇ ಆಡಳಿತ ಪಕ್ಷ ನಿರಂತರವಾಗಿ ಅಧಿಕಾರಕ್ಕೆ ಬರಲು ಸಾಧ್ಯವಾಗಿಲ್ಲ. ಆ ರೀತಿಯ ಘಟನೆ ಆಗಿದ್ದು 1985ರ ರಾಮಕೃಷ್ಣ ಹೆಗಡೆ ಕಾಲಘಟ್ಟದಲ್ಲಿ ಮಾತ್ರ. ಹಿಂದಿನ ಇತಿಹಾಸ ಮೆಲುಕು ಹಾಕಿದಾಗ ಆಡಳಿತ ಪಕ್ಷ ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರಲ್ಲ ಎಂಬುದು ಸ್ಪಷ್ಟವಾಗಿದೆ ಎಂದರು.

ರಾಜ್ಯದ ಸಮಗ್ರ ಅಭಿವೃದ್ಧಿಗೆ ಬಿಜೆಪಿ ಸರ್ಕಾರದ ಕೊಡುಗೆ ಶೂನ್ಯವಾಗಿದ್ದು, ಬಿಜೆಪಿ ಎಸಗಿದ್ದು ಬ್ರಹ್ಮಾಂಡ ಭ್ರಷ್ಟಾಚಾರ. ಲಿಂಗಾಯತ ಸಮುದಾಯ ಬಿಜೆಪಿಗೆ ಮತ ನೀಡಿದ್ದರೂ ಸಮುದಾಯವನ್ನೇ ಒಡೆಯುವ ಯತ್ನ ಮಾಡಲಾಗಿದೆ. ಸಮುದಾಯದ ಮುಖಂಡರ ಮಧ್ಯೆ ಕಂದಕ ಸೃಷ್ಟಿ ಮಾಡಿ ಒಡೆದು ಆಳುವ ನೀತಿ ಅನುಸರಿಸುವ ಮೂಲಕ ಜಗದೀಶ್ ಶೆಟ್ಟರ್, ಲಕ್ಷ್ಮಣ್ ಸವದಿ ಅಂತವರನ್ನು ಕಡೆಗಣಿಸಿ ಹಿರಿಯರಿಗೆ ಅಪಮಾನ ಮಾಡಿದೆ. ಇದರ ಪರಿಣಾಮವನ್ನು ಬಿಜೆಪಿ ಚುನಾವಣೆಯಲ್ಲಿ ಎದುರಿಸಬೇಕಾಗುತ್ತೆ ಎಂದು ಎಚ್ಚರಿಕೆ ನೀಡಿದರು.

ಕಳೆದ ಬಾರಿ ಬಿಜೆಪಿ 600 ಭರವಸೆ ನೀಡಿತ್ತು ಆದರೆ ಕೊಟ್ಟ ಮಾತಿನಂತೆ ನಡೆದುಕೊಳ್ಳದೇ ವಚನಭ್ರಷ್ಟವಾಗಿದ್ದು ಒಂದು ಕಡೆಯಾದರೇ, ಮತ್ತೊಂದೆಡೆ 40% ಕಮಿಷನ್ ದಂಧೆ, ಆಡಳಿತ ವೈಫಲ್ಯ, ನಿರುದ್ಯೋಗ ಸೃಷ್ಟಿ, ಹದಗೆಟ್ಟ ಕಾನೂನು ಸುವ್ಯವಸ್ಥೆ, ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಅಸುರಕ್ಷಿತ ವಾತಾವರಣ ನಿರ್ಮಾಣ ಸೇರಿದಂತೆ ಹತ್ತು ಹಲವು ಕಾರಣಗಳಿಂದ ಈ ಬಾರಿ ಬಿಜೆಪಿ ಸೋಲು ಅನುಭವಿಸಲಿದೆ ಎಂದು ನಾಗರಾಜ್ ಹರಿಹಾಯ್ದರು.

ಪ್ರಚಾರದಲ್ಲಿ ಬಿಜೆಪಿ ಮಾಜಿ ನಗರ ಪಾಲಿಕೆ ಸದಸ್ಯ ಡಿ.ನಾಗಭೂಷಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ವೆಂಕಟೇಶ್, ನಗರ ಪಾಲಿಕೆ ಸದಸ್ಯ ಗೋಪಿನಾಥ್, ಬಸವರಾಜು, ಎಸ್.ಬಸವರಾಜು, ಸುಬ್ರಮಣಿ, ತಂಬಿ, ವಿನಯ್(ಸತೀಶ್) ಮತ್ತಿತರರು ಭಾಗಿಯಾಗಿದ್ದರು.

ಜೆಇಇ ಮೇನ್ ಪರೀಕ್ಷೆಯಲ್ಲಿ ಮೈಸೂರಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ

ಮೈಸೂರು, ಮೇ 3– ಇತ್ತೀಚೆಗೆ ನಡೆದ ಜೆಇಇ ಮೇನ್ ಪರೀಕ್ಷೆಯಲ್ಲಿ ಮೈಸೂರಿನ ವಿವೇಕ್ ಎಚ್– 99.68, ಸಿ.ಅಚ್ಯುತ ತ್ಯಾಗರಾಜು–99.14, ಈಶಾನ್ ಕೆಬಿ–99.05 ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

PUBLIC NOTICE

Under the instructions from my client Smt. Suman V Sarode D/o Late Vishwanatha Rao Sarode R/at #43, 1st Floor, Shalivahana Road, Nazarbad, Mysuru 570010 I causing this public notice as hereunder;

That with respect to the schedule mentioned properties my client along her sisters have filed O.S.No.361/2020 on the file of V Addl., Senior Civil Judge, Mysuru seeking the relief of Partition and Separate Possession against one Smt.Minal M Sarode & another and the said suit is pending for adjudication, wherefore the general public are hereby notified not to do any transaction of sale, lease,, rent, mortgage, etc., pertaining to the schedule mentioned properties, inspite of this public notice if any general public proceed to meddle with the properties the same is not binding on the share of my clients and my clients are not liable for any of the loss of damages caused to such persons.

SCHEDULE 'A' PROPERTY: The house property bearing Door No.2633, situated at 2nd main Road, V V Mohalla, Mysuru 570002 bounded by compound on all the four sides with a built house measuring approximately 65 Sq., consisting of both ground and first floor with the vacant space including Managlore shed and one AC sheet with attached dog house totally measuring east to west 135 ft., and north to south 150 ft., and bounded by; East by: House property belonging to R.N.Murthy, West by: Frosting café and house property belong to R.N.Murthy, North by: Conservancy, South by: Road.

SCHEDULE 'B' PROPERTY: All that piece and parcel site property bearing No.57 situated at 'B' Block, DTS Rao Nagar Layout Sathagalli Village, Kasaba Hobli, Mysuru, measuring East to West 18 Mtr North to South 12Mtrs and bounded on; East by: Road, West by: Site No.8 & 9,North by: Site No.58, South by: Site No.56

Sd/-H.S.KUMAR,BAL, LL.B ADVOCATE No.1411, 1 floor, 6th cross, Thyagaraja Road, K.R.Mohalla, Mysuru-570004, Mob: 9448797546